
ಗೌರಿ ಲಂಕೇಶರ

ಲಂಕೇಶ್


ಮೇ 30, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ





ಡೀಕೆ-ಚೆಲುವ

ಡಿಂಗ್ ಡಾಂಗ್



ದ್ರಾವಿಡರ ಯುದ್ಧ

ಡರ ಮಕ್ಕಳೂ ಸಿದ್ಧ




ಮೀಟರ್ ಬಡ್ಡಿಗೆ ನಡುಮನಿ ಗುದ್ದು!



ಮನೆಯೇ ಜೈಲು, ಪತ್ನಿಯೇ ಖೈದಿ!

ರಾಕ್ಷಸ ಇನ್ಸ್‌ಪೆಕ್ಟರ್ ಶ್ರೀನಿಧಿ

ವೀರಪ್ಪನ್ ಮತ್ತು ರಾಘವೇಶ್ವರ ಸ್ವಾಮೀಜಿ!!



ಕೆಲವೊಮ್ಮೆ ಮನುಷ್ಯ ಒಪ್ಪಿಕೊಂಡ ಅದರ ಬುದ್ಧಿ ಒಪ್ಪಿಕೊಳ್ಳದ ನಿಜವಾದ ಮಾತನ್ನು ಎಷ್ಟೇ ಬಚ್ಚಿಟ್ಟುಕೊಂಡರೂ ನಾಲಿಗೆಗೆ ಮೋಸ ಮಾಡಿ ಹೊರಬಿದ್ದು ಬಿಡುತ್ತದೆ. ಅಂತ ಮಾತುಗಳನ್ನು ಇಂಗ್ಲಿಷಿನಲ್ಲಿ ಫ್ರಾಯ್ಡಿಯನ್ ಸ್ಲಿಪ್ ಎನ್ನುತ್ತಾರೆ. ಇತ್ತೀಚೆಗೆ ಚಡ್ಡಿಗಳ ಮುಖಪತ್ರಿಕೆಯಾಗಿಬಿಟ್ಟಿರುವ ದಿನಪತ್ರಿಕೆಯೊಂದು ವಿಶ್ವ ಗೋ ಸಮ್ಮೇಳನದ ಬಗ್ಗೆ ಬಂದ ವಿಮರ್ಶೆಯನ್ನು ಮುಚ್ಚಿಹಾಕಲೆಂದೇ ತನ್ನ ವರದಿಗಾರರಿಗೆ ಸಾಲುಸಾಲು ಓದುಗರ ಪತ್ರ ಬರೆಯುವ ಅಸೈನ್‌ಮೆಂಟ್ ಕೊಟ್ಟಿದೆ. ಒಬ್ಬೊಬ್ಬರೂ ಪಾಳಿಯಲ್ಲಿ ಬರೆಯುವ ಆ ಲೇಖನವೊಂದರಲ್ಲಿ ಒಬ್ಬ ಮಹಾಶಯರು ಗೋ ಸಮ್ಮೇಳನಕ್ಕೆ ಸರ್ಕಾರಿ ದುಡ್ಡು ಕೊಟ್ಟಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ತಮ್ಮ ತರ್ಕ ಸರಣಿಯನ್ನು ಹೀಗೆ ಮುಂದಿಟ್ಟಿದ್ದಾರೆ:

"ಸಾಮಾನ್ಯ ಜನತೆಯ ತೆರಿಗೆ ಹಣವನ್ನು ಗೋ ಸಮ್ಮೇಳನಕ್ಕೆ ನೀಡಿರುವುದರ ಬಗ್ಗೆ ವಿನಾಕಾರಣ ಹುಯಿಲೆಬ್ಬಿಸಲಾಗುತ್ತಿದೆ. ಎಸ್. ಎಮ್. ಕೃಷ್ಣರ ಕಾಲದಲ್ಲಿ ವೀರಪ್ಪನ್ನಿಂದ ರಾಜಕುಮಾರರನ್ನು ಬಿಡುಗಡೆ ಮಾಡಿಸಿಕೊಂಡು ಕರೆತರಲು ಕೊಟ್ಟಿದ್ದೂ ಸಹಾ ತೆರಿಗೆ ದುಡ್ಡೇ ಅಲ್ಲವೇ? ಹಾಗೆಯೇ ವಿಶ್ವ ಗೋ ಸಮ್ಮೇಳನಕ್ಕೆ ತೆರಿಗೆ ಹಣ ಕೊಟ್ಟರೆ ತಪ್ಪೇನು?"



ತಮಗೇ ಗೊತ್ತಿಲ್ಲದಂತೆ ಇಲ್ಲಿ ಮಾನ್ಯ ಲೇಖಕರು ರಾಘವೇಶ್ವರ ಸ್ವಾಮೀಜಿಯನ್ನು ಮತ್ತು ವೀರಪ್ಪನನ್ನು ಹಾಗೆಯೇ ಕಾಡುಗಳ್ಳತನವನ್ನು ಮತ್ತು ಗೋಗಳ್ಳತನವನ್ನು ಸಮೀಕರಿಸಿದ್ದಾರಲ್ಲವೇ? ನಾವೂ ಕೂಡಾ ಹೇಳುತ್ತಿರುವುದು ಅದೇ ಸತ್ಯವನ್ನು! ವ್ಯತ್ಯಾಸವಿಷ್ಟೆ: ವೀರಪ್ಪನ್‌ಗೆ ಕೊಟ್ಟಿದ್ದರಿಂದ ರಾಘವೇಶ್ವರ ಸ್ವಾಮೀಜಿಗೂ ಕೊಡಬಹುದು ಎಂದು ನೀವೆನ್ನುತ್ತೀರಿ. ನಾವು ಜನರ ತೆರಿಗೆ ಹಣವನ್ನು ಕಾಡಿನ ವೀರಪ್ಪನ್‌ಗಳಿಗೂ ಕೊಡಬಾರದು, ನಾಡಿನ ವೀರಪ್ಪನ್‌ಗಳಿಗೂ ಕೊಡಬಾರದು ಎನ್ನುತ್ತೇವೆ!!

ಚಾರ್ವಾಕ

ಶಿವಸುಂದರ್

ಬಹುಜನ ಸಮಾಜದ ರಾಜಕಾರಣ ಮಾಡುತ್ತಾ ಬಿಎಸ್ಪಿ ಪಕ್ಷ ಕಟ್ಟಿದ ಕಾನ್ಷೀರಾಂ ಮತ್ತು ಮಾಯಾವತಿಯವರು ಈಗ ಸರ್ವ ಸಮಾಜ ರಾಜಕಾರಣದ ಹೆಸರಲ್ಲಿ ಮೊಟ್ಟ ಮೊದಲ ಬಾರಿಗೆ - 16 ವರ್ಷಗಳ ನಂತರ - ಉತ್ತರ ಪ್ರದೇಶದಂತಹ ಉತ್ತರ ಪ್ರದೇಶದಲ್ಲಿ ಏಕಾಂಗಿಯಾಗಿ ಬಹುಮತ ಪಡೆದು ಸರ್ಕಾರ ರಚಿಸಿದ್ದಾರೆ. ಓಟು ರಾಜಕಾರಣದಲ್ಲಿ ಅಧಿಕಾರ ಪಡೆಯಲು ಮಾಯಾವತಿ ಅನುಸರಿಸಿದ ರಾಜಕಾರಣ ದಿಂದ ದಿಗ್ಭ್ರಮೆಗೊಂಡು ಕೂತಿರುವ ಎಲ್ಲಾ ಪಕ್ಷಗಳು ಚೇತರಿಸಿಕೊಳ್ಳಲು ಇನ್ನೂ ಸಮಯ ಬೇಕಾಗುತ್ತದೆ.

ಅದೇನೇ ಇದ್ದರೂ ಅದು ಮಾಯಾವತಿ ರಾಜ ಕಾರಣದ ಶಕ್ತಿಗಿಂತ ಸಂಸದೀಯ ಪ್ರಜಾತಂತ್ರದ, ಓಟು ರಾಜಕಾರಣದ ಮಿತಿಯನ್ನೇ ಎತ್ತಿ ತೋರಿಸುತ್ತವೆ. ಏಕೆಂದರೆ ಉತ್ತರ ಪ್ರದೇಶದ ಚುನಾವಣೆಯಲ್ಲಿ ಯಾವುದೇ ಪ್ರಣಾಳಿಕೆಯಿಲ್ಲದೇ ಪ್ರಚಾರಕ್ಕಿಳಿದ ಏಕೈಕ ಪಕ್ಷವೆಂದರೆ ಬಿಎಸ್ಪಿ! ಈ ಪಕ್ಷ ಮಾತ್ರ ಜನರಿಗೆ ಯಾವುದೇ ಭರವಸೆ ಗಳನ್ನಾಗಲೀ, ಯೋಜನೆಯನ್ನಾಗಲೀ ನೀಡದೆ ಚುನಾವಣೆ ಗೆದ್ದಿದೆ. ಇದು ಒಂದು ಪ್ರಜಾತಂತ್ರಕ್ಕೆ ಪೂರಕವೋ? ಮಾರಕವೋ?

ಅದೇರೀತಿ ಚುನಾವಣೆಯ ನಂತರವೂ ಸಹ ಜನರ ಅಭ್ಯುದಯಕ್ಕೆ ಸಂಕ್ಷೇಮಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಮತ್ತು ಅದಕ್ಕೆ ಕಂಟಕವಾಗಿರುವ ಶಕ್ತಿಗಳ ಬಗ್ಗೆ ಈವರೆಗೆ ಮಾಯಾವತಿ ಸರ್ಕಾರ ಯಾವುದೇ ನಿಲುವು ಪ್ರಕಟಿಸಿಲ್ಲ. ಈಗಲೇ ಅವನ್ನೆಲ್ಲಾ ನಿರೀಕ್ಷಿಸುವುದು ಸರಿಯಲ್ಲವಾದರೂ ಅದರ ಬಗ್ಗೆ ಶೋಷಿತ ಜನರ ರಾಜಕೀಯ ಪಕ್ಷಕ್ಕೆ ಒಂದು ನಿಲುವು ಇರಬೇಕಲ್ಲವೇ?

ಅಧಿಕಾರ ಹಿಡಿದ ನಂತರ ಚಾನೆಲ್ ಒಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾಯಾವತಿ ಇವುಗಳ ಬಗ್ಗೆ ವ್ಯಕ್ತ ಪಡಿಸಿರುವ ನಿಲುವುಗಳು ದಲಿತ ಸಮುದಾಯವನ್ನು ಮತ್ತು ಉತ್ತರ ಪ್ರದೇಶದಲ್ಲಿ ಬಿಎಸ್ಪಿಯ ಅಧಿಕಾರಗ್ರ ಹಣವನ್ನು ಒಂದು ಶೋಷಿತ ಜನರ ಮುನ್ನಡೆಗೆ ಪೂರಕವಾದ ಹೆಜ್ಜೆ ಎಂದು ಭಾವಿಸುತ್ತಿರುವವರನ್ನು ಸಹಜವಾಗಿಯೇ ಕಂಗೆಡಿಸುವಂತಿದೆ. ಅದರ ಒಂದು ತುಣುಕು ಇಲ್ಲಿದೆ:

ಪ್ರಶ್ನೆ: ಈ ಮೊದಲು ನೀವು ಬಿಎಸ್ಪಿಯನ್ನು ಕಟ್ಟಿದ್ದೇ ಮೇಲ್ಜಾತಿಗಳ ದೌರ್ಜನ್ಯ ಮತ್ತು ಅಧಿಕಾರದ ವಿರುದ್ಧವಾಗಿ. ಈಗ ಅವರೊಂದಿಗೇ ಮಾಡಿಕೊಂಡಿರುವ ರಾಜಕೀಯ ಹೊಂದಾಣಿಕೆ ದಲಿತ ಸಮುದಾಯದ ಹಿತಾಸಕ್ತಿಯೊಂದಿಗೆ ರಾಜಿಯಲ್ಲವೇ?

ಮಾಯಾವತಿ: ನಮ್ಮ ಪಕ್ಷ ಈ ಹಿಂದೆಯೂ ಎಂದಿಗೂ ಎಲ್ಲಿಯೂ ಮೇಲ್ಜಾತಿ ವಿರುದ್ಧ ಘೋಷಣೆ ಯನ್ನು ನೀಡಿಯೇ ಇಲ್ಲ.

ಪ್ರಶ್ನೆ: ಸರ್ವಸಮಾಜ ಹಿತ ಮತ್ತು ಬಹುಜನ ಸಮಾಜ ಹಿತದ ನೀತಿಗಳ ನಡುವೆ ವೈರುಧ್ಯ ಇರುವುದಿಲ್ಲವೇ? ಕಾನ್ಷೀರಾಮ್‌ರವರ ಚಿಂತನೆ ಸಹ ಬಹುಜನ ಸಮಾಜದ ಹಿತದ ಚಿಂತನೆ ಅಲ್ಲವೇ?



"ಮಾಯಾ" ಬಜಾರ್

ಮಾಯಾವತಿ: ನಾವು ಈಗ ಕಾನ್ಷೀರಾಮ್‌ರವರ ಚಿಂತನೆಯ ನೀತಿಗಳನ್ನು ಅನುಸರಿಸುವುದಿಲ್ಲ.

ಪ್ರಶ್ನೆ: ಸಾಮಾನ್ಯ ಜನರ ಅದರಲ್ಲೂ ಬಹುಜನರ ಬದುಕನ್ನು ಬೀದಿಪಾಲು ಮಾಡುತ್ತಿರುವ ಉದಾರೀಕರಣ, ಜಾಗತೀಕರಣ ಇತ್ಯಾದಿಗಳ ಬಗ್ಗೆ ನಿಮ್ಮ ಪಕ್ಷದ ಅಭಿಪ್ರಾಯವೇನು?

ಮಾಯಾವತಿ: ಅಂತಹ ಪ್ರಶ್ನೆಗಳನ್ನೆಲ್ಲಾ ಕೇಂದ್ರದಲ್ಲಿ ಸರ್ಕಾರ ರಚಿಸಬೇಕಾಗಿ ಬಂದಾಗ ಯೋಚಿಸಬೇಕು. ಈಗ ನಾವು ಉತ್ತರ ಪ್ರದೇಶದ ಬಗ್ಗೆ ಮಾತ್ರ ಯೋಚಿಸುತ್ತಿದ್ದೇವೆ.

ಇವು ಬಿಎಸ್ಪಿ ಪಕ್ಷದ ಅಧಿಕೃತ ನಿಲುವುಗಳು ಮತ್ತು ಯೋಚಿಸಿ ತೆಗೆದುಕೊಂಡಿರುವ ನಿಲುವುಗಳೇ ಆಗಿವೆ.

ಆದ್ದರಿಂದಲೇ ಚುನಾವಣೆಯಲ್ಲಿ ಬಿಎಸ್ಪಿ ಜನರ ದೈನಂದಿನ ಬದುಕನ್ನು ಪ್ರಭಾವಿಸುವ ಯಾವುದೇ ಯೋಜನೆಗಳನ್ನು, ಭರವಸೆಗಳನ್ನು ಪ್ರಕಟಿಸಲಿಲ್ಲ. ಸಾಮಾಜಿಕ ಸಮ್ಮಾನದ ಏಕೈಕ ಮತು ಅತಿ ಪ್ರಮುಖ ನೆಲೆಗಟ್ಟಿನ ಮೇಲೆ ಅದು ದಲಿತ ಓಟುಗಳನ್ನು ಸದೃಢೀಕರಿಸ್ಕೊಂಡಿತು ಮತ್ತು ಅದರ ಆಧಾರದ ಮೇಲೆ ಇತರ ಓಟು ಬ್ಯಾಂಕುಗಳೊಂದಿಗೆ ಅವಕಾಶವಾದಿ ನೆಲೆಗಟ್ಟಿನಮೇಲೆ ತಾತ್ಕಾಲಿಕ ಹೊಂದಾಣಿಕೆ ಏರ್ಪಡಿಸಿಕೊಂಡು ಈ ಚುನಾವಣೆ ಗೆದ್ದಿದೆ. ಈಗ ಬಿಎಸ್ಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ಬ್ರಾಹ್ಮಣ ಮತ್ತು ಇತರ ಜಾತಿ ಶಕ್ತಿಗಳ ಹೊಂದಾಣಿಕೆ ಸಂಸದೀಯ ರಾಜಕಾರಣದ ಅನಿವಾರ್ಯವೇ. ಇದು ದೇಶದಲ್ಲಿ ಮತ್ತು ರಾಜ್ಯದಲ್ಲಿ ರಾಜಕೀಯ ವಾತಾವರಣ ಬದಲಾದಂತೆ ಬದಲಾಗುವ ಸಮೀಕರಣ. ಅಷ್ಟು ಮಾತ್ರವಲ್ಲ, ಸಾಮಾಜಿಕ ಸಮ್ಮಾನದಂತ ಐಡೆಂಟಿಟಿ ಪಾಲಿಟಿಕ್ಸ್ ಅಧಿಕಾರದ ಹೊರಗಿದ್ದಾಗ ಒಂದು ಶಕ್ತಿ, ಆದರೆ ಅಧಿಕಾರದಲ್ಲಿದ್ದು ಕೊಂಡು ಆ ಜನತೆಯ ದೈನಂದಿನ ಬದುಕನ್ನು ಸುಧಾರಿಸದಿದ್ದಾಗ ಮತ್ತು ಜನರ ಬದುಕನ್ನು ಕಬಳಿಸುವ ಶಕ್ತಿಗಳ ವಿರುದ್ಧ ಜನತೆಯ ಜೊತೆ ನಿಲ್ಲದಾದಾಗ ಅದಕ್ಕಿರುವ ಶಕ್ತಿ ಕುಂದತೊಡಗುತ್ತದೆ.

ಈಗಾಗಲೇ ಮೂರು ಬಾರಿ ಅಧಿಕಾರದಲ್ಲಿದ್ದ ಬಿಎಸ್ಪಿ ಈ ವಿಷಯಗಳಲ್ಲಿ ಎಂದಿಗೂ ಇತರ ಪಕ್ಷಗಳಿಗಿಂತ ಭಿನ್ನವಾದ ರಾಜಕಾರಣವನ್ನು ಮಾಡಲಿಲ್ಲ, ಯೋಜನೆಗಳನ್ನೂ ತರಲಿಲ್ಲ, ಮೇಲಾಗಿ ಗುಜರಾತ್ ಹತ್ಯಾಕಾಂಡ ಆದಾಗಲೂ ಮೋದಿಯ ಪರವಾಗಿ ನಿಲುವು ತೆಗೆದುಕೊಂಡದ್ದು, ಉತ್ತರ ಪ್ರದೇಶದಲ್ಲಿ ಆರ್ಥಿಕ ಸುಧಾರಣಾ ನೀತಿಗೆ ಮಣೆ ಹಾಕಿದ್ದು ಹಾಗು ಮೇಲಿನ ಸಂದರ್ಶನದಲ್ಲಿ ವ್ಯಕ್ತಪಡಿಸಿರುವ ನಿಲುವುಗಳು ಶೋಷಿತ ಸಮುದಾಯದ ದೃಷ್ಟಿಯಲ್ಲಿ ಬಿಎಸ್ಪಿಯ ಗೆಲುವನ್ನು ಒಂದು ಚಾಣಾಕ್ಯ ಲೆಕ್ಕಾಚಾರದ ಗೆಲುವಿಗಿಂತ ಹೆಚ್ಚಿನದ್ದನ್ನು ನಿರೀಕ್ಷಿಸದಂತೆ ಮಾಡಿದೆ.

ಒಬ್ಬ ಅತ್ಯಂತ ಶೋಷಿತ ಸಮುದಾಯದ ದಲಿತ ಮಹಿಳೆಯ ನಾಯಕತ್ವದಲ್ಲಿ ಪಡೆದಿರುವ ಈ ಗೆಲುವು ದಲಿತ ಮತ್ತು ಇತರೆ ಶೋಷಿತ ಸಮುದಾಯದಲ್ಲಿ ಸಾಂಕೇತಿಕ ಆತ್ಮಸ್ಥೈರ್ಯವನ್ನು ತಂದುಕೊಡುವುದು ನಿಜವೇ. ಆದರೆ ವಾಸ್ತವವೆಂದರೆ ಆ ಆತ್ಮಸ್ಥೈರ್ಯ ಸಾಂಕೇತಿಕವಾಗಿ ಮಾತ್ರ ಉಳಿದುಕೊಳ್ಳದೆ ನೈಜವಾದ ಆರ್ಥಿಕ ಮತ್ತು ಸಾಮಾಜಿಕ ಮುನ್ನಡೆಯತ್ತ ಸಾಗುವ ಚಲನೆಯನ್ನು ಮಾಯಾವತಿ ರಾಜಕಾರಣ ತಂದುಕೊಡುವುದಿಲ್ಲ, ಅದು ನಿಜವಾದ ಸಮಸ್ಯೆ. ಅದಕ್ಕಿಂತ ದೊಡ್ಡ ಸಮಸ್ಯೆ ಈ ಬಗೆಯ ಸಮಸ್ಯೆ ಇದೆಯೆಂಬುದನ್ನು ಗುರುತಿಸಲಾಗದಂತಹ ಉನ್ಮಾದ ರಾಜಕಾರಣವನ್ನು ಅದು ಸೃಷ್ಟಿಸುತ್ತಿರುವುದು!

No Comments



"ಉಪ ಮುಖ್ಯಮಂತ್ರಿ ಯಡಿಯೂರಪ್ಪ ಮುಖ್ಯಮಂತ್ರಿಯಾಗುವುದಿಲ್ಲ."


- ರಮೇಶ್ ಕುಮಾರ್, ಕಾಂಗ್ರೆಸ್ ನಾಯಕ

"ತನ್ನ ಪ್ರಸಾರ ಹೆಚ್ಚಿಸಿಕೊಳ್ಳಲು ದೊಡ್ಡ ಪತ್ರಿಕೆಯೊಂದು ಮಾಡಿದ ಅನಾಹುತದಿಂದ ಸಣ್ಣ ಪತ್ರಿಕೆಗಳು ಸಂಕಷ್ಟ ಎದುರಿಸಬೇಕಾಯಿತು."

- ರಾಜಶೇಖರ್ ಕೋಟಿ, ಸಂಪಾದಕರು, ಆಂದೋಲನ

"ಬ್ರಾಹ್ಮಣ ಸಮುದಾಯ ತನ್ನಲ್ಲಿರುವ ಎಲ್ಲಾ ರೀತಿಯ ಭ್ರಮೆಗಳನ್ನು ಕಿತ್ತೊಗೆದು ವಾಸ್ತವಿಕ ಪರಿಸ್ಥಿತಿಯನ್ನು ಅರಿಯಬೇಕು."

- ರಾಮಕೃಷ್ಣಮಠದ ವೀರೇಶಾನಂದ ಸ್ವಾಮೀಜಿ



"ನಾನು ಹೆದರುವುದು ಜನರಿಗೆ, ದೇವರಿಗೆ ಮತ್ತು ದೇವೇಗೌಡರಿಗೆ ಮಾತ್ರ."

- ಚನ್ನಿಗಪ್ಪ, ಸಚಿವ

ನಂಬಿದ್ರೆ ನಂಬಿ ಬಿಟ್ರೆ ಬಿಡಿ



"ರಾಜ್ಯ ಕಂಡ ಎಲ್ಲಾ ಮುಖ್ಯಮಂತ್ರಿಗಳ ಪೈಕಿ ನಾನೇ ಮಾದರಿ ಮುಖ್ಯಮಂತ್ರಿಯಾಗುತ್ತೇನೆ."

-ಎಚ್. ಡಿ. ಕುಮಾರಸ್ವಾಮಿ



"ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿ ಭರಣಿ ರಾಜಕೀಯ ಪ್ರವೇಶಿಸಿದರೆ ಸಮಾಜದ ಅಂಕುಡೊಂಕು ತಿದ್ದಲು ಸಹಾಯವಾಗುತ್ತದೆ."

-ವಿ. ಸೋಮಣ್ಣ ಶಾಸಕ

"ನೀವೂ ಕೂಡಾ ಮಹಿಳೆ. ಆದ್ದರಿಂದ ಮಾನವೀಯತೆ ಆಧಾರದಲ್ಲಿ ಸೇವೆಯಲ್ಲಿ ಮುಂದುವರೆಸಿ ಅಂದೆ. ಇದು ಸೌಜನ್ಯ ರಹಿತ ಭಾಷೆಯೇ?"


- ಎಚ್. ಡಿ. ಕುಮಾರಸ್ವಾಮಿ



"ಶಂಕರಾಚಾರ್ಯರು ಅಳಿದು ಹೋಗುತ್ತಿದ್ದ ಸನಾತನ ಧರ್ಮವನ್ನು ಉಳಿಸಿದ ಮಹಿಮರು."

-ಎಂ. ಪಿ. ಪ್ರಕಾಶ್, ಗೃಹ ಸಚಿವ

ನಿರೀಕ್ಷಣಾ ಜಾಮೀನು



"ಉಳ್ಳಾಲದ ಚುನಾವಣಾ ಫಲಿತಾಂಶ ನಮ್ಮ ಸಾಧನೆಯ ಮಾನದಂಡವಲ್ಲ."

ವೈ. ಎಸ್. ವಿ. ದತ್ತ ಜಾತ್ಯತೀತ ಜನತಾ ದಳದ ವಕ್ತಾರ

ವಾರದ ಸತ್ಯ

"ನಮ್ಮ ದೇಶದಲ್ಲಿ ಎಲ್ಲೆಲ್ಲೂ ಜಾತಿ ಕಾಣುತ್ತಿದ್ದರೂ ಜಾತಿ ಎಲ್ಲಿದೆ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ವಾಸ್ತವವಾಗಿ ಜೆಎನ್‌ಯುನಂತಹ ಪ್ರತಿಷ್ಠಿತ ಸಂಸ್ಥೆಯಲ್ಲೂ ಜಾತಿ ಅಸ್ತಿತ್ವದಲ್ಲಿದೆ. ಆದ್ದರಿಂದ ಚರ್ಚೆ ಜಾತಿ ಇಲ್ಲ ಎಂಬ ಭ್ರಾಂತಿ ತೊರೆದು ವಾಸ್ತವ ನೆಲೆಗಟ್ಟಿನಲ್ಲಿ ನಡೆಯಬೇಕು."

- ಸಿ.ಸ್ಟಾಲಿನ್, India untouched, Stories of a people apart ಎಂಬ ಚಿತ್ರದ ನಿರ್ದೇಶಕ

ವಾರದ ಅಸಂಬದ್ಧ

"ಕಾವೇರಿ ನ್ಯಾಯಮಂಡಲಿಯಿಂದ ತಮಿಳುನಾಡಿಗೆ ಅನ್ಯಾಯವಾಗಿದ್ದರೆ ಕರ್ನಾಟಕ ಸಹಕರಿಸುತ್ತದೆ. ಅದೇ ರೀತಿ ಕರ್ನಾಟಕಕ್ಕೆ ಅನ್ಯಾಯವಾಗಿದ್ದರೆ ತಮಿಳುನಾಡು ಸರ್ಕಾರ ಸಹಕರಿಸಲಿ."

- ಎಚ್. ಡಿ. ಕುಮಾರಸ್ವಾಮಿ

ವಾರದ ಸುಳ್ಳು

"ನಂದಿಗ್ರಾಮದಲ್ಲಿ ಎಡರಂಗ ಸರ್ಕಾರವು ಜಾಗ ಆಕ್ರಮಣಕ್ಕೆ ಯಾವುದೇ ಸೂಚನೆ ನೀಡುವ ಮುನ್ನವೇ ತೃಣಮೂಲ ಕಾಂಗ್ರೆಸ್ ಮತ್ತದರ ಮಿತ್ರರು ಗಲಭೆ ಪ್ರಾರಂಭಿಸಿದರು."

- ನಿತ್ಯಾನಂದ ಸ್ವಾಮಿ, ಕರ್ನಾಟಕದ ಸಿಪಿಎಂ ನಾಯಕರು

ವಾರದ ಘೋಷಣೆ

"ಅಮೆರಿಕದ ಹಾಲಿ ಅಧ್ಯಕ್ಷ ಬುಷ್ ತನ್ನ ಹುದ್ದೆಯಿಂದ ಕೆಳಗಿಳಿದ ದಿನ ಇಡೀ ವಿಶ್ವವೇ ನೆಮ್ಮದಿಯ ನಿಟ್ಟುಸಿರು ಬಿಡಲಿದೆ."

ಬರಾಕ್ ಒಬಾಮ, ಅಮೆರಿಕ ಅಧ್ಯಕ್ಷ ಪದವಿಯ ಸ್ಪರ್ಧಾಳು

ವಾರದ ಪ್ರಶ್ನೆ

"ಕುಲಪತಿ ಸುಧಾರಾವ್‌ಗೆ ಅನ್ಯಾಯವಾಯಿತು ಎನ್ನುತ್ತಿರುವವರಿಗೆ 19 ತಿಂಗಳಿಂದ ಧರಣಿ ಕೂತಿರುವ 50 ಮಹಿಳೆಯರಿಗಾಗುತ್ತಿರುವ ಅನ್ಯಾಯ ಏಕೆ ಕಾಣಿಸುವುದಿಲ್ಲ."

- ಮುಕ್ತ ವಿವಿಯ ಹಂಗಾಮಿ ನೌಕರರು

ವಾರದ ವಿವೇಕ



"ನಡೆಯಬೇಕಿರುವುದು ಗೋ ಪಾಲಕರ ಸಮ್ಮೇಳನವೇ ವಿನಃ ಗೋ ಪೂಜಕರ ಸಮೇಳನವಲ್ಲ."

- ಎ. ಕೆ. ಸುಬ್ಬಯ್ಯ

ಪ್ರಜಾಪ್ರಭುತ್ವ ಎಂಬ ಅಸಂಬದ್ಧ ನಾಟಕ

ಪ್ರತಿದಿನ ಪತ್ರಿಕೆಗಳಲ್ಲಿನ ವಾರ್ತೆಗಳನ್ನು ಓದುತ್ತಿದ್ದರೆ ನಾವು ಯಾವುದೋ ಅಸಂಬದ್ಧ ನಾಟಕದ ಚಿತ್ರಕತೆಯನ್ನು ಓದುತ್ತಿದ್ದೇವೇನೋ ಅನ್ನಿಸುತ್ತದೆ. ನಮ್ಮದು ಜಗತ್ತಿನಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ, ನಮ್ಮ ಈ ವ್ಯವಸ್ಥೆ ಎಷ್ಟು ಪ್ರಭಾವಿ ಎಂದರೆ ಐದು ವರ್ಷಗಳಿಗೊಮ್ಮೆ ಮತ ಚಲಾಯಿಸುವ ಮೂಲಕ ನಾವು ಭ್ರಷ್ಟರನ್ನು, ಫ್ಯಾಸಿಸ್ಟರನ್ನು, ದೇಶದ ಬಹುಮುಖಿ ಸಂಸ್ಕೃತಿಗೆ ಹಾನಿ ಮಾಡುತ್ತಿರುವವರನ್ನು ಅಧಿಕಾರದಿಂದ ಒದ್ದೋಡಿಸಿ ಅವರಿಗೆ ತಕ್ಕ ಪಾಠ ಕಲಿಸುತ್ತೇವೆ.... ಹೀಗೆಂದು ನಂಬಿರುವವರು ಇನ್ನೂ ಇದ್ದಾರೆ; ಪ್ರತೀ ಬಾರಿ ಹಿಂದಿನದಕ್ಕಿಂತಲೂ ಭ್ರಷ್ಟ ಮತ್ತು ಫ್ಯಾಸಿಸ್ಟರೇ ಆಯ್ಕೆಯಾಗುತ್ತಿದ್ದರೂ, ಚುನಾವಣೆಗಳೆಂಬುದು ಪ್ರತೀ ಬಾರಿ ಇನ್ನೂ ಹದಗೆಡುತ್ತಿದ್ದರೂ ಹೀಗೆಂದು ನಂಬಿರುವವರು ಇನ್ನೂ ನಮ್ಮ ಮಧ್ಯೆ ಇದ್ದಾರೆ. ಅದೆಲ್ಲಾ ಒಂದಿಗಿರಲಿ....

ನಮ್ಮ ಸುತ್ತಲೂ ಇವತ್ತು ನಡೆಯುತ್ತಿರುವ ವಿದ್ಯಮಾನಗಳು ಏಕೆ ಹೆಚ್ಚು ಹೆಚ್ಚಾಗಿ ಥಿಯೇಟರ್ ಆಫ್ ದಿ ಅಬ್ಸರ್ಡ್ ಆಗಿ ಕಾಣಿಸುತ್ತಿದೆ ಎಂಬುದಕ್ಕೆ ಇಲ್ಲಿ ಕಳೆದ ಹತ್ತು ದಿನಗಳಲ್ಲಿ ನಡೆದಿರುವ ಪ್ರಕರಣಗಳನ್ನು ಉದಾಹರಣೆಯಾಗಿ ನೀಡಬಹುದು.



ಬಂದನಕ್ಕೊಳಗಾದ ವಿದ್ಯಾರ್ಥಿ ಚಂದ್ರಮೋಹನ್

* ಹೈದರಾಬಾದಿನ ಮಸೀದಿಯೊಂದರಲ್ಲಿ ಬಾಂಬುಗಳು ಸ್ಫೋಟಗೊಂಡು ಹದಿನೈದಕ್ಕೂ ಹೆಚ್ಚು ಜನ ಬಲಿಯಾಗಿದ್ದಾರೆ. ಆದರೆ ಅಲ್ಲಿನ ಪೊಲೀಸರು ಈ ಬಾಂಬ್‌ಗಳನ್ನು ಯಾವುದೋ ಮುಸ್ಲಿಮರ ಉಗ್ರರ ಗುಂಪೊಂದು ಸ್ಫೋಟಿಸಿರಬಹುದು ಎಂದು ಅಂದಾಜಿಸುತ್ತಾರೆ. ಅಲ್ಲ, ಮುಸ್ಲಿಮರ ಮೇಲೆಯೇ, ಅದರಲ್ಲೂ ಒಂದು ಐತಿಹಾಸಿಕ ಮಸೀದಿಯ ಮೇಲೆ, ಯಾಕೆ ಮುಸ್ಲಿಮ್ ಉಗ್ರರು ಇಂತಹ ಭಯೋತ್ಪಾದಕ ಕೃತ್ಯವನ್ನು ಎಸಗುತ್ತಾರೆ ಎಂದು ಪ್ರಶ್ನಿಸಿದರೆ ಕೋಮುಗಲಭೆಗಳನ್ನು ಹುಟ್ಟುಹಾಕಲು' ಎಂದು ಉತ್ತರಿಸುತ್ತಾರೆ. ಇದಕ್ಕಿಂತ ಹಾಸ್ಯಾಸ್ಪದವಾದ ತರ್ಕ ಇನ್ನೊಂದಿರಲು ಸಾಧ್ಯವೇ?

* ಛತ್ತೀಸ್‌ಗಢದ ಹಿಂದುಳಿದ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ಬಿನಾಯಕ್ ಸೇನ್ ಎಂಬುವವರು ತಮ್ಮ ವೈದ್ಯಕೀಯ ವೃತ್ತಿ ಮಾಡಿಕೊಂಡು ಬಂದಿದ್ದಾರೆ . ಅಲ್ಲಿನ ಬಡ ಆದಿವಾಸಿಗಳ ಆರೋಗ್ಯವನ್ನು ಕಾಪಾಡಲು ಹಲವಾರು ಕ್ರಮಗಳನ್ನು ಜಾರಿಗೊಳಿಸಿರುವ ಸೇನ್ ಆಹಾರವಿಲ್ಲದೆ ಬಡಜನ ಸಾಯುವುದೂ ಮಾನವ ಹಕ್ಕುಗಳ ಉಲ್ಲಂಘನೆ ಎಂದು ನಂಬಿರುವವರು.

ಇದೆಲ್ಲದರೊಂದಿಗೆ ಛತ್ತೀಸ್‌ಗಢದ ಸರ್ಕಾರವೇ ರೂಪಿಸಿರುವ ಸಶಸ್ತ್ರ ದಳವಾದ ಸಲ್ವಾಜುಡುಂ ಇವತ್ತು ಹೇಗೆ ಆದಿವಾಸಿಗಳ ಮೇಲೆ ದೌರ್ಜನ್ಯ ನಡೆಸುತ್ತಿದೆ, ಆ ಮೂಲಕ ಹೇಗೆ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿದೆ ಎಂದು ದನಿಯೆತ್ತಿದವರು ಸೇನ್.

ಜನರಿಂದಲೇ ಮತ ಪಡೆದು ಅಧಿಕಾರ ಹಿಡಿದಿರುವ ಪ್ರಜಾಪ್ರಭುತ್ವದ ಸರ್ಕಾರವೊಂದು ಸೇನ್‌ರಂಥವರು ಇಂತಹ ಆರೋಪಗಳನ್ನು ಮಾಡುತ್ತಿದ್ದರೆ ಸುಮ್ಮನಿರಲಾಗುತ್ತದೆಯೇ? ಅದರಲ್ಲೂ ಪಿಯುಶ್ ಗುಹಾ ಎಂಬ ವ್ಯಾಪಾರಸ್ಥರನ್ನು ಸರಕಾರ ಅಕ್ರಮವಾಗಿ ಬಂಧಿಸಿರುವುದನ್ನು ಬಯಲಿಗೆಳೆದದ್ದೂ ಅಲ್ಲದೆ, ಆತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕೆಂದು ಬಿನಾಯಕ್ ಸೇನ್ ಯಾಕೆ ಸಾರ್ವಜನಿಕವಾಗಿ ಒತ್ತಾಯ ಮಾಡಬೇಕು? ನಮ್ಮದು ಎಂತಹ ಅದ್ಭುತ ಪ್ರಜಾಪ್ರಭುತ್ವ, ಇಲ್ಲಿ ಸರ್ಕಾರ ಮಾಡುವುದೆಲ್ಲಾ ಸರಿ ಎಂದು ಸೇನ್ ಸುಮ್ಮನಿರಬಾರದೇಕೆ?

ಛತ್ತೀಸ್‌ಗಢದ ಚುನಾಯಿತ ಸರ್ಕಾರಕ್ಕೆ ಉರಿದು ಹೋಯಿತು. ಕೂಡಲೇ ಬಿನಾಯಕ್ ಸೇನ್‌ರನ್ನು ಬಂಧಿಸಿತು. ಆತ ನಕ್ಸಲೈಟರಿಗೆ ನೆರವು ನೀಡುತ್ತಿದ್ದಾನೆ, ಜೈಲಿನಲ್ಲಿರುವ ನಕ್ಸಲರಿಗೂ, ಹೊರಗಿರುವ ನಕ್ಸಲ್ ನಾಯಕರಿಗೂ ಆತನೇ ಕೊಂಡಿ ಎಂದು ಆರೋಪಿಸಿತು. ಅಂದರೆ ಪ್ರಜಾಪ್ರಭುತ್ವದಲ್ಲಿ ಯಾರೂ ಪ್ರಜೆಗಳ ಪರವಾಗಿ ದನಿಯೆತ್ತಕೂಡದು. ಬದಲಾಗಿ ಎಲ್ಲರೂ ಸಾಧ್ಯವಾದಷ್ಟೂ ಪ್ರಭುತ್ವದ ಪರವಾಗಿದ್ದು ನಮ್ಮ ಪ್ರಜಾಪ್ರಭುತ್ವವನ್ನು ಇನ್ನಷ್ಟು ಗಟ್ಟಿಗೊಳಿಸಬೇಕಿದೆ.

* "ನಿನ್ನ ಜಘನ ಪ್ರದೇಶವು ಬಹು ವಿಶಾಲವಾಗಿದೆ. ಊರು ಪ್ರದೇಶಗಳೋ ಆನೆಯ ಸೊಂಡಿಲನ್ನು ಹೋಲುತ್ತವೆ! ಎಲೈ ಪುಣ್ಯವತಿಯೇ! ನಿನ್ನ ಸ್ತನಗಳು ಉನ್ನತವಾಗಿಯೂ, ಗುಂಡಾಗಿಯೂ, ಮಧ್ಯದಲ್ಲಿ ಅವಕಾಶವಿಲ್ಲದೆ ಒಂದಕ್ಕೊಂದು ಸೇರಿಕೊಂಡಿರುವುವೂ, ಭಾರಾತಿಶಯದಿಂದ ಬಳಕುತ್ತಿರುವುವೂ, ಬಹುಗಟ್ಟಿಯಾಗಿರುವುವೂ, ಗಾತ್ರದಲ್ಲಿ ದೊಡ್ಡ ತಾಳೆಯ ಫಲದಷ್ಟಿರುವುವೂ, ಬಹು ಸುಂದರವೂ ಆಗಿವೆ. ಸುಂದರಿ ನೀನು ಸಣ್ಣಗಿರುವ ಮಧ್ಯ ಪ್ರದೇಶವುಳ್ಳವಳು; ಬಹು ರಮಣೀಯವಾದ ಕೇಶರಾಶಿಯುಳ್ಳವಳು, ಒಂದಕ್ಕೊಂದು ಸೇರಿಕೊಂಡಿರುವ ಸ್ತನದ್ವಯವುಳ್ಳವಳು..."

..... ಹೀಗೆ ಸೀತೆಯ ದೈಹಿಕ ಸೌಂದರ್ಯವನ್ನು ಡೀಟೈಲ್‌ಆಗಿ ವಿವರಿಸುವವನು, ಹಾಗೆ ವಿವರಿಸುತ್ತಲೇ ಮಜಾ ಮಾಡುವವನು ರಾಮನಲ್ಲ, ಬದಲಾಗಿ ರಾವಣ. (ವಾಲ್ಮೀಕಿ ರಾಮಾಯಣದಿಂದ ಡಾ. ಪೋಲಂಕಿ ರಾಮಮೂರ್ತಿಯವರ ಅನುವಾದ) ಅಂದಹಾಗೆ ಬ್ರಾಹ್ಮಣನ ವೇಶದಲ್ಲಿ ಬಂದಿರುವ ರಾವಣ ಹೀಗೆ ತನ್ನ ಹಿಂಬದಿ, ಮುಂಬದಿಗಳನ್ನು ಕಾವ್ಯಾತ್ಮಕವಾಗಿ ವಿವರಿಸುತ್ತಿದ್ದರೆ ಸೀತೆಗೆ ಸಿಟ್ಟು ಬರುವುದಿಲ್ಲ. ಬದಲಾಗಿ ಆತನ ವರ್ಣನೆಗಳನ್ನು ಸವಿಯುತ್ತಾ 'ಚಾರಸ್ಮಿತ'ಳಾಗುತ್ತಾಳೆ. ಆನಂತರ "ಹೇ ಬ್ರಾಹ್ಮಣನೇ ಇದು ಆಸನ; ಕುಳಿತುಕೋ. ಇದು ಪಾದ್ಯ ಸ್ವೀಕರಿಸು; ಉತ್ತಮವಾದ ಕಂದಮೂಲಾದಿ ವನ್ಯಾಹಾರವು ಸಿದ್ಧವಾಗಿದೆ. ನಿನಗೋಸ್ಕರ ಇಲ್ಲಿ ಇಟ್ಟಿದ್ದೇನೆ. ಸಾವಧಾನವಾಗಿ ಭಕ್ಷಿಸು" ಎಂದು ಆಹ್ವಾನಿಸುತ್ತಾಳೆ. (ಪೋಲಂಕಿಯವರ 'ಸೀತಾಯಣ'ದಿಂದ)

ಇದೊಂದು ಸ್ಯಾಂಪಲ್ ಮಾತ್ರ. ಇದರಂತೆ ನಮ್ಮ ಹಲವಾರು ಪ್ರಾಚೀನ ಪುಸ್ತಕಗಳು, ಹಲವಾರು ದೇಗುಲಗಳ ಗೋಡೆಗಳು ದೇವತೆಯರ ದೈಹಿಕ ಸೌಂದರ್ಯವನ್ನು ಬಣ್ಣಿಸಿದ್ದಾವೆ, ಚಿತ್ರಿಸಿದ್ದಾವೆ.


ಆದರೆ ಇದ್ಯಾವುದರ ಬಗ್ಗೆಯೂ ಗೊತ್ತಿಲ್ಲದ ಸಂಘಪರಿವಾರದ ಭಂಡರು ಇತ್ತೀಚೆಗೆ ಬರೋಡಾ ಕಲಾ ಕಾಲೇಜಿನ ವಿದ್ಯಾರ್ಥಿ ಚಂದ್ರಮೋಹನ್ ಸ್ರೀಮಂತುಲ ಎಂಬುವವನು ನಗ್ನ ದೇವತೆಗಳ ಚಿತ್ರಗಳನ್ನು ಬಿಡಿಸಿದ್ದಕ್ಕೆ ಆತನ ಕಲಾಕೃತಿಗಳನ್ನು ಧ್ವಂಸ ಮಾಡಿದರು, ಆತ ನಾಲ್ಕೈದು ದಿನಗಳ ಕಾಲ ಜೈಲಿನಲ್ಲಿರುವಂತೆ ನೋಡಿಕೊಂಡರು.

ಇದರ ವಿರುದ್ಧ ಅಲ್ಲಿನ ಇತರೇ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಭಾರತದ ಐತಿಹಾಸಿಕ ಕಲೆಯಲ್ಲೂ ದೇವತೆಗಳನ್ನು ನಗ್ನವಾಗಿ ಚಿತ್ರಿಸಲಾಗಿದೆ ಎಂದು ಅರಿವು ಮೂಡಿಸಲು ಅಂತಹ ಹಲವು ಕಲಾಕೃತಿಗಳನ್ನು ಸಂಗ್ರಹಿಸಿ ಪ್ರದರ್ಶಿಸಿದರು. ಇದರಿಂದ ನಮ್ಮ ಇತಿಹಾಸ, ಅದರಲ್ಲಿನ ಕಲೆಯ ಬಗ್ಗೆ ಅರ್ಥ ಮಾಡಿಕೊಳ್ಳಲಾಗದ ಚೆಡ್ಡಿಗಳು ಮತ್ತೆ ಪ್ರತಿಭಟಿಸಿದರು. ಅದಕ್ಕೆಲ್ಲ ಕಲಾವಿದರು ಜಗ್ಗದಿದ್ದಾಗ ಒತ್ತಡ ತಂದು ಆ ಕಲಾ ವಿಭಾಗದ ಮುಖ್ಯಸ್ಥರಾದ ಪಣ್ಣಿಕರ್‌ರವರನ್ನೇ ತಮ್ಮ ಹುದ್ದೆಯಿಂದ ವಜಾ ಗೊಳಿಸಿದರು.

ಈ ಚೆಡ್ಡಿಗಳಿಗೆ ಬುದ್ಧಿಬರಬೇಕಾದರೆ ಅವರೆಲ್ಲರಿಗೆ ವಾಲ್ಮೀಕಿಯ ಒರಿಜಿನಲ್ ರಾಮಾಯಣ ಓದಿಸಬೇಕಲ್ಲವೇ?

* ಕಳೆದ ವಾರ 'ದಿ ಹಿಂದೂ' ಪತ್ರಿಕೆಯ ಕೊನೆಪುಟ ನಮ್ಮ ಪ್ರಜಾತಂತ್ರಕ್ಕೆ ಹಿಡಿದ ಕೈಗನ್ನಡಿ ಎಂತಿತ್ತು. ಆ ಪುಟದ ಮೇಲುಭಾಗದ ಅರ್ಧ 'ದಿನಕರನ್' ಪತ್ರಿಕೆಯ ಕಚೇರಿಯ ಮೇಲಾದ ದಾಳಿಯ ಚಿತ್ರಗಳನ್ನು ಹೊಂದಿತ್ತು. ಒಂದು ಚಿತ್ರದಲ್ಲಂತೂ ಆ ದಾಳಿಯಲ್ಲಿ ಸತ್ತ ಓರ್ವ ಅಮಾಯಕನ ಶವದ ಮುಂದೆ ಆತನ ಸಹೋದ್ಯೋಗಿಗಳು ದುಃಖಿಸುತ್ತಿರುವ ದೃಶ್ಯವನ್ನು ಸೆರೆಹಿಡಿಯಲಾಗಿತ್ತು. ಇನ್ನು ಆ ಪುಟದ ಕೆಳಗಿನ ಅರ್ಧ ಭಾಗದಲ್ಲಿ ಕರುಣಾನಿಧಿಯವರು ಸೋಲಿಲ್ಲದ ಶಾಸಕರಾಗಿ 50 ವರ್ಷಗಳನ್ನು ಆಚರಿಸುತ್ತಿರುವ ಬಣ್ಣಬಣ್ಣದ ಜಾಹೀರಾತು ಇತ್ತು.

ಆ ಪುಟವನ್ನು ನೋಡಿದ ಯಾರಿಗಾದರೂ ನಮ್ಮ ಪ್ರಜಾಪ್ರಭುತ್ವ ಸಾಗಿ ಬಂದಿರುವ ದಾರಿ ಮತ್ತು ಈಗ ಎಂತಹ ಕಠೋರವಾದ ಭವಿಷ್ಯದ ಹೊಸ್ತಿಲಿನಲ್ಲಿ ನಿಂತಿದೆ ಎಂಬುದರ ಅರಿವಾಗದೇ ಇರಲು ಸಾಧ್ಯವಿರಲಿಲ್ಲ. "ಪಕ್ಷವೇ ಸಂಸಾರ" ಎಂದು ಸಾರುತ್ತಾ ಐವತ್ತು ವರ್ಷಗಳ ಕಾಲ ತಮಿಳುನಾಡಿನಲ್ಲಿ ರಾಜಕೀಯ ಮಾಡಿಕೊಂಡು ಬಂದಿರುವ ಕರುಣಾನಿಧಿಯವರ ಕೊಡುಗೆಯನ್ನು ಆ ಪುಟದಲ್ಲಿದ್ದ ಫೋಟೋಗಳು ಸಾಬೀತುಪಡಿಸುತ್ತಿದ್ದವು. ಅಧಿಕಾರ ದಾಹ ಮತ್ತು ಪುತ್ರ ವ್ಯಾಮೋಹ ನಮ್ಮ ಬಲಶಾಲಿ ಪ್ರಜಾಪ್ರಭುತ್ವದಲ್ಲೂ ಎಂತಹ ದುರಂತಗಳಿಗೆ ಕಾರಣವಾಗುತ್ತವೆ ನೋಡಿ....



'ದಿನಕರನ್' ಪತ್ರಿಕೆಯ ಕಚೇರಿಬೆಂಕಿಗೆ ಆಹುತಿಯಾಗಿರುವುದು

ಈ ಎಲ್ಲ ವಿದ್ಯಮಾನಗಳನ್ನು ನೋಡಿಯೇ ನಮ್ಮ ದೇಶ ನಿಜವಾಗಲೂ ಪ್ರಜಾಪ್ರಭುತ್ವವೋ ಅಥವಾ ನಾವೆಲ್ಲ ಒಂದು ಅಸಂಬದ್ಧ ನಾಟಕ ನೋಡುತ್ತಿದ್ದೇವೋ ಅಂದದ್ದು, ಪ್ರಜೆಗಳ ಹೆಸರಲ್ಲಿ, ಅವರ ಮತದ ಬಳದಲ್ಲಿ ನಡೆಯುತ್ತಿರುವ ಈ ಅಸಂಬದ್ಧ ನಾಟಕಕ್ಕೆ ತೆರೆ ಎಳೆಯುವವರು ಯಾರು? ಮತ್ತು ಎಂದು?

* * * * *



ಕಂಡಹಾಗೆ

ಹಲವು ದಿನಗಳ ಹಿಂದೆ ಅಪ್ಪನ ಮಿತ್ರರಾದ ಬಳ್ಳಾರಿಯವರು ನಮ್ಮ ಆಫೀಸಿಗೆ ಬಂದಿದ್ದರು. ಎಂದಿನಂತೆ ಅವರು ಬಂದಾಗ ಧಾರವಾಡ ಪೇಡೆಗಳ ಒಂದು ಡಬ್ಬಿಯನ್ನು ನಮಗಾಗಿ ತಂದಿದ್ದರು.

ಬಹಳಷ್ಟು ಜನರಿಗೆ ಬಳ್ಳಾರಿಯವರ ಬಗ್ಗೆ ಗೊತ್ತಿರಲಿಕ್ಕಿಲ್ಲ. ಅವರು ಮುಂಬೈಯಲ್ಲಿ ಎಣ್ಣೆ ವ್ಯಾಪಾರ ಮಾಡುತ್ತಿದ್ದರೂ ನಾಟಕಗಳಲ್ಲಿ ಆಸಕ್ತಿ ಹೊಂದಿದ್ದರಿಂದ ಆಗಾಗ್ಗೆ ಕನ್ನಡ ನಾಟಕಗಳಲ್ಲಿ ನಟಿಸುತ್ತಿದ್ದರು. ಒಮ್ಮೆ ಒಂದು ನಾಟಕದ ತಂಡದ ಸದಸ್ಯರಾಗಿ ಬೆಂಗಳೂರಿಗೆ ಬಂದಿದ್ದಾಗ ಅವರಿಗೆ ಅಪ್ಪನ ಪರಿಚಯವಾಗಿ, ಅದು ಸ್ನೇಹವಾಗಿ ಬೆಳೆದಿತ್ತು. ಎಷ್ಟರ ಮಟ್ಟಿಗೆ ಎಂದರೆ 1980 ರಲ್ಲಿ ಅಪ್ಪ ತನ್ನ ಪತ್ರಿಕೆಯನ್ನು ಪ್ರಾರಂಭಿಸಿದಾಗ ಬಳ್ಳಾರಿಯವರು 25,000 ರೂಪಾಯಿಗಳನ್ನು ನೀಡಿದ್ದರು.

ಆಗ ಬಳ್ಳಾರಿಯವರೇ ಪತ್ರಿಕೆಯ ಸಹ ಪ್ರಕಾಶಕರಾಗಲಿ ಎಂದು ಅಪ್ಪ ಸೂಚಿಸಿದ್ದಕ್ಕೆ "ಬೇಡ. ಕೇಸು, ಗೀಸು ಅಂತ ಬಾಂಬೆಯಿಂದ ಅಲೆಯುವುದಕ್ಕೆ ನನ್ನಿಂದ ಸಾಧ್ಯವಿಲ್ಲ" ಎಂದು ಬಳ್ಳಾರಿ ನಿರಾಕಸಿದ್ದರು. ಮೊನ್ನೆ ಬಂದಾಗ ಅಪ್ಪನ ಬಗ್ಗೆ ಮೆಲುಕು ಹಾಕಿದ ಬಳ್ಳಾರಿಯವರು "ಆಮೇಲೆ ಪತ್ರಿಕೆ ತುಂಬಾ ಯಶಸ್ಸು ಕಂಡಾಗ ನನ್ನನ್ನು ಹೋಟೆಲ್ ಒಂದಕ್ಕೆ ಕರೆದುಕೊಂಡು ಹೋಗಿ ನನ್ನ ಹಣವನ್ನು ವಾಪಸ್ಸು ನೀಡಿದ್ದ. ಆತನನ್ನು ಏಕವಚನದಲ್ಲಿ ಮಾತನಾಡಿಸುತ್ತಿದ್ದರೂ ಆತ ನನಗೆ ಗುರುವೇ ಆಗಿದ್ದ" ಎಂದು ನೆನಪಿಸಿಕೊಂಡರು.

ಇಲ್ಲಿ ಬಳ್ಳಾರಿಯವರ ಬಗ್ಗೆ ಬರೆಯುವುದಕ್ಕೆ ಒಂದು ಕಾರಣ ಇದೆ. ಇತ್ತೀಚೆಗೆ 'ಭೇಜಾ ಫ್ರೈ' ಎಂಬ ಹಿಂದಿ ಚಿತ್ರ ಮಲ್ಟಿಪ್ಲೆಕ್ಸ್ ಚಿತ್ರ ಮಂದಿರಗಳಲ್ಲಿ ಅಪಾರ ಯಶಸ್ಸನ್ನು ಕಂಡಿತು. ವಿಮರ್ಶಕರೂ ಅದನ್ನು ಮೆಚ್ಚಿ ಬರೆದರು. ಈ ಚಿತ್ರವನ್ನು ನಿರ್ದೇಶಿಸಿದ್ದು ಬಳ್ಳಾರಿಯವರ ಮಗ ಸಾಗರ್ ಬಳ್ಳಾರಿ. ಇದು ಸಾಗರನ ಚೊಚ್ಚಲ ನಿರ್ದೇಶನದ ಚಿತ್ರವಾಗಿದ್ದು ಈಗ ಎಲ್ಲೆಡೆಯಿಂದ ಆತನಿಗೆ ಬೇಡಿಕೆ ಬರಲಾರಂಭಿಸಿದೆ.

ಕನ್ನಡ ಹುಡುಗನೊಬ್ಬ ಹಿಂದಿ ಚಿತ್ರರಂಗದಲ್ಲಿ ಯಶಸ್ಸು ಕಂಡಿರುವುದು ಎಲ್ಲರಿಗೆ ಹೆಮ್ಮೆಯ ವಿಷಯ ಅಲ್ಲವೇ?

-ಗೌರಿ ಲಂಕೇಶ್

ಮುದ್ದೇಗೌಡರ ಗುರುಬೋಧನೆ

"ಕಬಾಬು ಯೋಚನೆ ಬಿಟ್ಟುಬಿಡಮ್ಮ"

ಸನ್ ಎರಡು ಸಾವಿರ ಏಳನೆ ಇಸವಿ ಮೇ ತಿಂಗಳ ಒಂದು ಬಿರುಬೇಸಿಗೆಯ ದಿನ ಸಾಯಂಕಾಲ ಮುಗ್ಧೆಯಂತೆ ಕಾಣುತ್ತಿದ್ದ ..... ನಿತಾ ಎಂಬ ಮಹಿಳೆಯೋರ್ವರು ಮಹಾಜ್ಞಾನಿ, ಯೋಗಾಚಾರ್ಯ ಶ್ರೀ ಶ್ರೀ ಶ್ರೀ ಮುದ್ದೇಗೌಡರ ಪದ್ಮನಾಭನಗರದ ಆಶ್ರಮ ಹೊಕ್ಕು, ತಮ್ಮ ಸಂಸಾರದ ಕಷ್ಟ ಸುಖಗಳನ್ನು ಹೇಳಿಕೊಂಡರಂತೆ. ಪಾಪ ಆಕೆಯ ಪತಿ ಯಜಮಾನ್ ಕುಮಾರಸ್ವಾಮಿಗಳು ಇತ್ತಿತ್ತಲಾಗಿ ಮನೆ ಸೇರುವುದು ಕಡಿಮೆಯಾಗಿದೆ. ಅಲ್ಲದೆ ಪ್ರತಿ ದಿನ ಮಂಗಳೂರು ಕಬಾಬು ಅಂಗಡಿಯಲ್ಲೇ ಹೆಚ್ಚಾಗಿ ಕಾಲ ಕಳೆಯುತ್ತಿರುವುದರಿಂದ ತಮಗೆ ಶ್ಯಾನೇ ಬೇಜಾರಾಗಿದೆಯೆಂತಲೂ, ಈ ಕಬಾಬಿನ ದೆಸೆಯಿಂದ ತನ್ನೆದಿರು ರಾಶಿ ಬಿದ್ದಿರುವ ಆಸ್ತಿ, ಹಣ, ಒಡವೆ, ರೇಷ್ಮೆ ಸೀರೆಗಳೆಲ್ಲಾ ಕಾಲ್ಮುರಿಗ್ಗೆ ಸಮನಾಗಿದೆ ಎಂತಲೂ ಅತ್ತರಂತೆ.

ಇದನ್ನೆಲ್ಲಾ ತಣ್ಣಗೆ ಕೇಳಿಸಿಕೊಂಡ ಯೋಗಿ ಮುದ್ದೇಗೌಡ್ರು ಕೊನೆಗೆ ಹೇಳಿದ್ದಿಷ್ಟು:

"ನೋಡು ತಾಯಿ, ರಾಜಕೀಯ ಅಂದ ಮೇಲೆ ಇದೆಲ್ಲಾ ಇದ್ದಿದ್ದೆ. ಅಂತಾ ಗಾಂಧಿನೇ ಇನ್ನೊಬ್ಬ ಹೆಂಗಸಿನ ಮ್ಯಾಲೆ ಕಣ್ಣು ಮಡಗಿದ್ದ ಅಂತಾರೆ. ಸಾಕ್ಷಾತ್ ನೆಹರೂ ಮೌಂಟ್‌ಬ್ಯಾಟನ್ ಹೆಂಡ್ರನ್ನ ಖುಷಿಯಾಗಿಟ್ಟಿದ್ದ. ರಾಮಕೃಷ್ಣ ಹೆಗಡೆ ಮೀನೂ ಎಂಬಾಕೆಯನ್ನು ಜೊತೆಗಾಕಿಕೊಂಡಿದ್ದ. ಗುಂಡೂರಾವ್ ಭಾರ್ಗವೀನ ಮದೀಕೊಂಡಿದ್ದ. ಇನ್ನ ಆ ಪಟೇಲನಿಗೆ ಊರು ತುಂಬಾ ಹೆಂಗಸರಿದ್ದರು. ಇವೆಲ್ಲಾ ಅಂಗೆನೆ, ರಾಜಕೀಯದಲ್ಲಿ ಕಾಮನ್ನು. ನೀನೇನು ತಲೆ ಕೆಡಿಸ್ಕೋಬೇಡ. ಆನಿನ್ನ ಗಂಡನೂ ಏನೋ ನಾಲ್ಕ್ ದಿನ ಕಬಾಬು ಅದೂ ಇದೂ ಅಂತ ಓಡಾಡ್ತಾನೆ. ಆಮೇಲೆ ನಿನ್‌ತಾವ್ನೆ ಬತ್ತಾನೆ. ಹೋಗು ನಿನ್ನ ಜಾಗುಕ್ಕೆ ಬೇರೆ ಯಾರೂ ಬರ್‌ದಂಗೆ ನಾನ್ ನೋಡ್ಕೋತೀನಿ" ಅಂತಾ ಗುರುಬೋದನೆ ಮಾಡಿ ಬೀಳ್ಕೊಟ್ಟರಂತೆ. ಅಂದಹಾಗೆ ಅಷ್ಟೊಂದು ಜನರ ಪಟ್ಟಿ ಕೊಟ್ಟ ಮುದ್ದೇಗೌಡರು ತಮ್ಮ ಸ್ವಂತ ಸಾಧನೆ ಬಗ್ಗೆ ಏಕೆ ಹೇಳಿಕೊಳ್ಳಲಿಲ್ಲವೊ?

ಏಕೆಂದರೆ ಜಾತ್ಯತೀತ ದಳವೆಂಬ ಅವರು ಕಾಂಗ್ರೆಸ್, ಬಿಜೆಪಿ ಹೀಗೆ ಎಲ್ಲರೊಂದಿಗೂ ಸರಸ ಆಡುತ್ತಿದ್ದಾರಲ್ಲವೆ?

ಇದೇನು ಕಡಿಮೆ.... ದರವೆ!


ಹೇರೂರ್ ವಿರುದ್ಧ ದರ್ಶನಾಪುರ ಮಸಲತ್ತು!

ವಿಠ್ಠಲನ ಭದ್ರಕೋಟೆ ಛಿದ್ರ!!

ಗುಲ್ಬರ್ಗಾ

ಗುಲ್ಬರ್ಗಾ ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶರಣಬಸಪ್ಪ ದರ್ಶನಾಪುರ ಮತ್ತು ಕೋಲಿ ಸಮಾಜದ ಮುಖಂಡ ಹಾಗೂ ವಿಧಾನ ಪರಿಷತ್ತು ಮಾಜಿ ಮುಖ್ಯ ಸಚೇತಕ ವಿಠ್ಠಲ್ ಹೇರೂರ್ ನಡುವೆ ನಡೆಯುತ್ತಿರುವ ವಾಗ್ಯುದ್ಧ ರಾಜಕಾರಣ ಜಿಲ್ಲೆಯ ಜೆಡಿಎಸ್‌ನಲ್ಲೀಗ ತಳಮಳವನ್ನುಂಟು ಮಾಡುತ್ತಿದೆ!

ವಿಠ್ಠಲ್ ಹೇರೂರ್ ಅವರಲ್ಲಿರುವ ಒಂದು ಮುಖ್ಯ ಅಂಶ ನಂಬುವುದಿಲ್ಲ, 'ಛಿ' ಎಂದವರನ್ನು ಹೊರಳಿ ಕೂಡ ನೋಡುವುದಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಾದ್ಯಂತ ಸಂಚರಿಸಿ ಕಾಂಗ್ರೆಸ್ ಪಕ್ಷವನ್ನು ಮಣ್ಣು ಮುಕ್ಕಿಸಿದ್ದರು. ಇದೇ ಕಾರಣದಿಂದ ಪಕ್ಷದ ವರಿಷ್ಠ ದೇವೇಗೌಡರಿಗೆ ಹತ್ತಿರವಾದವರು. ಆದರೆ ದರ್ಶನಾಪುರರ ಕುತಂತ್ರ ರಾಜಕಾರಣಕ್ಕೆ ಬೇಸತ್ತ ಹೇರೂರ್ ಇದೀಗ ಜಿಲ್ಲಾ ಜೆಡಿಎಸ್‌ನಲ್ಲಿ ಭಿನ್ನಮತದ ರಣಕಹಳೆ ಊದುತ್ತಾ ನಡೆದಿದ್ದಾರೆ. ಈ ಹಿಂದುಳಿದ ವರ್ಗದ ನಾಯಕ ತನಗೆ ಮತ್ತೆ ಎಮ್ಮೆಲ್ಸಿ ಸೀಟು ಸಿಗದ ಕಾರಣ ಇಲ್ಲಿನ ಎಲ್ಲ ನಾಯಕರ ಮೇಲೆ ತೀವ್ರವಾಗಿ ಹರಿ ಹಾಯುತ್ತಿದ್ದಾರೆ. ಆ ಸಂದರ್ಭದಲ್ಲಿ ಹೇರೂರ್ ಸುಮ್ಮನಾಗಿದ್ದರೆ ಈಗ ಅವರು ಯಾವುದಾದರೊಂದು ಬೋರ್ಡಿನ ಚೇರ್ಮನ್‌ಗಿರಿ ಹೊಡಕೊಳ್ಳಬಹುದಾಗಿತ್ತು.



ದರ್ಶನಾಪೂರ್

ಆದರೆ ಬೈಯುವುದನ್ನೇ ರೂಢಿ ಮಾಡಿಕೊಂಡಿರುವ ಹೇರೂರ್ ಯಾವುದೇ ಸ್ಥಾನಮಾನ ಪಡೆದುಕೊಳ್ಳದೆ ಕೇವಲ ಚೀರಾಟ-ಹಾರಾಟ ನಡೆಸಿದ್ದಾರೆ. ನಿಜ ಶರಣ ಅಂಬಿಗರ ಚೌಡಯ್ಯನವರ ಜಯಂತ್ಯುತ್ಸವದ ಜ್ಯೋತಿ ಯಾತ್ರೆಯನ್ನು ನೆಪವಾಗಿಟ್ಟುಕೊಂಡು ಇಡೀ ಜಿಲ್ಲೆಯಾದ್ಯಂತ ಸಂಚರಿಸುತ್ತ ತನಗೆ ಅಡ್ಡಗಾಲಾದ ದರ್ಶನಾಪುರ, ಎಂ.ವೈ. ಪಾಟೀಲ, ವಿಶ್ವನಾಥ ಹೆಬ್ಬಾಳ್ ಮುಂತಾದವರ ನಕಲಿ ಕೆಲಸಗಳನ್ನು ಬಯಲಿಗೆಳೆಯುತ್ತಾ ಅವರ ಮುಖವಾಡ ಕಳಚುವುದರಲ್ಲಿ ಮಗ್ನರಾಗಿದ್ದಾರೆ.

ಬೋಗಸ್ ಬಿಲ್ ಸರದಾರ


ಜಿಲ್ಲಾ ಉಸ್ತುವಾರಿ ಹೊರೆ ಹೊತ್ತಿರುವ ದರ್ಶನಾಪುರ, ಅವರ ಚಿಕ್ಕಪ್ಪ ಬಸವರಾಜಪ್ಪ, ಸಹೋದರ ಅಮರೇಶಗೌಡ ಹಾಗೂ ಅವರ ಇಡೀ ಕುಟುಂಬ ಕೃಷ್ಣಾ ಮೇಲ್ದಂಡೆ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಸಂಪೂರ್ಣವಾಗಿ ಬೋಗಸ್ ಬಿಲ್ ಬರೆಯಿಸಿ ಆ ಭಾಗದ ಕೃಷಿಕರನ್ನು ಮೇಯ್ದವರು. ಇಂಥ ದರ್ಶನಾಪುರ್‌ನ ಕುತಂತ್ರ ರಾಜಕಾರಣಕ್ಕೆ ನಾನು ಜಗ್ಗಲಾರೆ ಎಂದು ಹೇಳುವ ಹೇರೂರ್ "ಮೊನ್ನೆ ಹುಟ್ಟಿ ನಿನ್ನೆ ಕಣ್ತೆರದ ದರ್ಶನಾಪುರ ನನ್ನನ್ನು ಏನು ಮಾಡಲಾಗದು. ಇನ್ನೂ ಆ ಹೆಬ್ಬಾಳ್ ಮತ್ತು ಪಾಟೀಲರು ಈ ಬಾರಿ ಸೋಲುವುದು ಶತಸಿದ್ಧ" ಎಂದು ಅಬ್ಬರಿಸುತ್ತಿದ್ದಾರೆ.

ಹೇರೂರ್ ಅವರ ಅಬ್ಬರದ ಟೀಕಾ ಪ್ರಹಾರವನ್ನು ಜಿಲ್ಲೆಯ ಆಂಟಿ ಗೌರ್ನಮೆಂಟ್‌ನ ಎಲ್ಲರೂ ಸಪೋರ್ಟ್ ಮಾಡುತ್ತಿದ್ದಾರೆ. ಕಾಂಗ್ರೈ ಹಾಗೂ ಹಿಂದುಳಿದ ಎಲ್ಲಾ ನಾಯಕರುಗಳು ಇವರ ಸಮಾರಂಭಗಳಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದಾರೆ. ವಿಠ್ಠಲ್ ಹೇರೂರ್ ತನ್ನ ಬಾಯಿ ತೀಟೆಯನ್ನು ತೀರಿಸಿಕೊಂಡರೆ ಕಾಂಗ್ರೆಸ್‌ನವರು ತಮ್ಮ ಅಧಿಕಾರ ದಾಹವನ್ನು ಈಡೇರಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ 'ಹಾಳೂರಿಗೆ ಉಳಿದವನೆ ಗೌಡ' ಎನ್ನುವಂತಿದ್ದ ದರ್ಶನಾಪುರರ ಭದ್ರಕೋಟೆ ಕುಸಿಯುವುದು ಗ್ಯಾರಂಟಿ!

ಬಹಳಷ್ಟು ಅಪಾಯಕಾರಿ ಹಾಗೂ ಗುಮ್ಮನಂತಿರುವ ದರ್ಶನಾಪುರ ಇದೀಗ ವಿಠ್ಠಲ್ ಹೇರೂರ್ ಅವರ ಜನಾಂಗದ ಭದ್ರಕೋಟೆಯ ಬುನಾದಿಯನ್ನು ಅಭದ್ರಗೊಳಿಸುವಲ್ಲಿ ರಾಜಕೀಯ ಹುನ್ನಾರ ನಡೆಸಿದ್ದಾರೆ. ಹೇರೂರ್ ಸಾರ್ವಜನಿಕವಾಗಿ ತಮ್ಮನ್ನು ಎಷ್ಟೇ ನಿಂದಿಸಿದರೂ ಸಹ ಸುಮ್ಮನಿರುವ ದರ್ಶನಾಪುರ ಕೋಲಿ ಸಮಾಜದ ಸಂಘಟನೆಯ ಬುಡಕ್ಕೆ ನೀರು ಹಾಯಿಸುತ್ತಿದ್ದಾರೆ. ಇದಕ್ಕಾಗಿ ಅದೇ ಸಮಾಜದ ಯುವಕರನ್ನು ಎತ್ತಿಕಟ್ಟಿ ತಮ್ಮ ರಾಜಕೀಯ ಸೇಡು ತೀರಿಸಿಕೊಳ್ಳುತ್ತಿದ್ದಾರೆ. ಅಂತೆಯೇ ಅವರ ಜ್ಯೋತಿ ಯಾತ್ರೆಯನ್ನು ಅಲ್ಲಲ್ಲಿ ವಿರೋಧಿಸುವಂತೆ, ಬಹಿಷ್ಕರಿಸುವಂತೆ ಸಮಾಜದ ಕೆಲವರನ್ನು ಹೇರೂರ್ ವಿರುದ್ಧ 'ಛೂ' ಬಿಟ್ಟಿದ್ದಾರೆ.

ಹೇರೂರ್ ವಿರುದ್ಧ ದರ್ಶನಾಪುರ ಮಸಲತ್ತು

ತನಗೆ ಹಾಗೂ ಪಾರ್ಟಿಯ ಇನ್ನಿತರರಿಗೆ ಮುಳ್ಳಾಗಿ ಪರಿಣಮಿಸಿರುವ ವಿಠ್ಠಲ್ ಹೇರೂರ್ ಅವರನ್ನು ಮೆತ್ತಗೆ ಮಾಡಬೇಕೆಂದು ಸಾಯಿಬಣ್ಣ ನೀಲಪ್ಪಗೋಳ್ ಎಂಬ ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಯನ್ನು ಜಿಲ್ಲಾ ಪಂಚಾಯಿತಿಯ ಎರಡನೇ ಅವಧಿಯ ಅಧ್ಯಕ್ಷನನ್ನಾಗಿ ಮಾಡಿಕೊಂಡಿದ್ದಾನೆ. ಸಾಯಿಬಣ್ಣ ಎಂಥ ಆಸಾಮಿಯೆಂದರೆ, ಈ ಹಿಂದೆ ಶಿವರಾಮ ಶಿವಣಗಿ ಎಂಬ ಕೋಟಿ ಸಮಾಜದ ಲ್ಯಾಂಡ್ ಲಾರ್ಡ್ ಹತ್ತಿರವೇ ಇದ್ದು ಅವರಿಗೆ ಚಳ್ಳೆಹಣ್ಣು ತಿನ್ನಿಸಿದ್ದು ಮಾತ್ರವಲ್ಲ ಅವರ ಮೇಲೆಯೇ ಕೇಸು ಜಡಿದಿದ್ದ! ಈ ಸಾಯಿಬಣ್ಣನ ಮೇಲೆ ಅಟ್ರಾಸಿಟಿ ಕೇಸ್ ಇದ್ದಾಗ ಹಲವಾರು ವರ್ಷಗಳ ಕಾಲ ತಲೆ ಮರೆಸಿಕೊಂಡು ತಿರುಗಾಡುತ್ತಿದ್ದ. ಆಗ ಇವನ ನೆರವಿಗೆ ಬಂದ ಹೇರೂರ್ ಅವನ ಮೇಲಿನ ಕೇಸ್ ಖುಲಾಸೆ ಮಾಡಿಸಿದ್ದ.



ವಿಠ್ಠಲ್ ಹೇರೂರ್

ಅಫ್ಜಲ್ಪುರ ತಾಲ್ಲೂಕಿನ ಜೆಡಿಎಸ್ ಅಧ್ಯಕ್ಷನಾದ ಮಹಾಂತೇಶ ಪಾಟೀಲ ಕೋಲಿ ಸಮಾಜದ ಯುವಕರಾದ ಹುಲಿಗೆಪ್ಪ ಕನಕಗಿರಿ, ರವಿರಾಜ ಕೊರವಿ, ವಿಜಯಕುಮಾರ ಹರಗಲ್, ಅವ್ವಣ್ಣ ಮ್ಯಾಕೇರಿ ಮುಂತಾದವರನ್ನು ಹೇರೂರ್ ವಿರುದ್ಧ ಎತ್ತಿ ಕಟ್ಟುತ್ತಿರುವ ದರ್ಶನಾಪುರ ಏಪ್ರಿಲ್ 18 ರಂದು ಇಲ್ಲಿನ ವೀರಶೈವ ಕಲ್ಯಾಣ ಮಂಟಪದಲ್ಲಿ ನೂತನ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಸಾಯಿಬಣ್ಣ ನೀಲಪ್ಪಗೋಳ್ ಅವರ ಬೃಹತ್ ಅಭಿನಂದನಾ ಸಮಾರಂಭ ಏರ್ಪಡಿಸಿ ಹೇರೂರ್‌ಗೆ ಪರ್ಯಾಯವಾಗಿ ಸಂಘಟನೆಯನ್ನು ಬಳಸಿಕೊಂಡಿದ್ದಾರೆ.

ಅಂದಿನ ಸಮಾರಂಭದಲ್ಲಿ ಉಸ್ತುವಾರಿ ಸಚಿವ ದರ್ಶನಾಪುರ ಸೇರಿದಂತೆ ಸಮ್ಮಿಶ್ರ ಸರ್ಕಾರದ ಅಂಗ ಪಕ್ಷದ ಶಾಸಕ ಹಾಗೂ ಸಚಿವರುಗಳಿಗೆ ಯುವ ಕೋಲಿ ಸಮಾಜವು ಬಹಳಷ್ಟು ಅದ್ದೂರಿಯಾಗಿಯೇ ಅಭಿನಂದಿಸಬೇಕು. ಸಮಾರಂಭದಲ್ಲಿ ಪಾಲ್ಗೊಂಡ ಜನ ಸಮೂಹವು ಹೇರೂರ್ ಅವರ ಭದ್ರಕೋಟೆಯನ್ನು ಛಿದ್ರಗೊಂಡಿತು ಎಂಬುದನ್ನು ಸಾಬೀತುಪಡಿಸಿತು. ಸಭೆಯಲ್ಲಿ ಪಾಲ್ಗೊಂಡವರು ಸಂಘಟನೆ ಬಗ್ಗೆ ಭಾಷಣ ಬಿಗಿಯುತ್ತಿದ್ದರೆ ಇತ್ತ ಹೇರೂರ್‌ಗೆ ಹೊಟ್ಟೆಯಲ್ಲಿ ಕಲಸಿದಂತಾಗುತ್ತಿತ್ತು.

ಜಿಲ್ಲೆಯ ಗುರುಮಠಕಲ್, ಸೇಡಂ, ಅಫ್ಜಲ್ಪುರ, ಚಿತ್ತಾಪುರ ಮುಂತಾದ ಕಡೆ ಶೇ. 50 ರಷ್ಟಿರುವ ಕೋಲಿ ಸಮಾಜವನ್ನು ಸಂಘಟಿಸಿರುವ ಹೇರೂರ್, ಸಮಾಜಕ್ಕಾಗಿ ದುಡಿದಿದ್ದಾರೆ. ಸಮಾಜ ಸೇವೆಗಾಗಿ ಮದುವೆಯೇ ಆಗಿಲ್ಲವೆಂದು ಹೇಳಿಕೊಂಡು ತಿರುಗಾಡುತ್ತಿದ್ದ ಹೇರೂರ್ ಕಳೆದ ವರ್ಷ ಮದುವೆಯಾಗಿದ್ದಾರೆ. ಅದರಂತೆ ಒಗ್ಗಟ್ಟಾಗಿದ್ದ ಕೋಲಿ ಸಮಾಜ ಇವರ ಸಿಡುಕು ಸ್ವಭಾವದಿಂದ ಎರಡು ಹೋಳಾಗಿಯೂ ಹೋಗಿದೆ. ತಿಪ್ಪಣ್ಣಪ್ಪ ಕಮಕನೂರ್ ನೇತೃತ್ವದಲ್ಲಿ ಹಾಗೂ ಹೇರೂರ್ ನೇತೃತ್ವದಲ್ಲಿ ಎರಡಾಗಿದ್ದ ಸಮಾಜದ ಸಂಘಟನೆ ದರ್ಶನಾಪುರರ ರಾಜಕಾರಣದ ಫಲವಾಗಿ ಇದೀಗ ಮೂರು ಹೋಳಾಗಿದೆ.

ಶರಣಪ್ಪ ತಳವಾರ ಎಂಬ ಒಬ್ಬನನ್ನೇ ಬೆನ್ನಿಗೆ ಕಟ್ಟಿಕೊಂಡು ತಿರುಗಾಡುತ್ತಿರುವ ವಿಠ್ಠಲ್ ಹೇರೂರ್ ಇದೀಗ ಒಬ್ಬಂಟಿಯಾಗಿದ್ದಾನೆ. ಆದರೂ ಹಠ ಸಾಧಿಸಿಕೊಂಡು ಎಲ್ಲಾ ಕಡೆ ಜ್ಯೋತಿ ಯಾತ್ರೆಯನ್ನು ಕೊಂಡೊಯ್ಯುತ್ತಿದ್ದಾರೆ. ಜನ ಸೇರುತ್ತಿದ್ದಾರೆ. ನಾಯಕರನ್ನು ಹಿಗ್ಗಾಮುಗ್ಗಾ ಬೈಯ್ದಾಗ ಚಪ್ಪಾಳೆ, ಸಿಳ್ಳೆ ಕೇಳಿಬರುತ್ತಿದೆ. ಆದರೆ ಜೆಡಿಎಸ್‌ನಲ್ಲೀಗ ಅವರ ಅಸ್ತಿತ್ವ ಉಳಿದಂತೆ ಕಂಡುಬರುತ್ತಿಲ್ಲ.


ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ತುಳಿದ ವಿಠ್ಠಲ್ ಹೇರೂರ್ ಈ ಬಾರಿ ಜೆಡಿಎಸ್ ನಾಶ ಮಾಡಲು ಹೊರಟಿದ್ದಾರೆ. ಇದರಿಂದಾಗಿಯೇ ಜೆಡಿಎಸ್‌ನಿಂದ ಹೊರದೂಡಲ್ಪಡುವ ಹೇರೂರ್ ಮುಂದೇನು ಮಾಡುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

-ವರದಿಗಾರ

ಬಿಜೆಪಿಗಳಿಂದ ದಲಿತರಿಗೆ ಬಹಿಷ್ಕಾರ

ಕೋಲಾರ

ನೂರೈವತ್ತು ಕುಟುಂಬಗಳ ಆ ದಲಿತರ ಕಾಲೋನಿಗೆ ನೀರು ನಿಂತು ಇಲ್ಲಿಗೆ ಅರ್ಧ ತಿಂಗಳಾಗಿದೆ. ಪಂಚಾಯ್ತಿಯವರು ಎಲ್ಲಿಂದಲೋ ತಂದು ನೀರು ಕೊಡುತ್ತಾರೆ. ಆ ಊರಿನ ಒಕ್ಕಲಿಗರ್‍ಯಾರೂ ಅವರನ್ನು ಕೂಲಿಗೆ ಕರೆಯೋಲ್ಲ, ಬದುಕಲು ಬೇರೆ ದಾರಿಯಿಲ್ಲ. ಇನ್ನು ಸಂಜೆ ಹೊತ್ತು ಬಹಿರ್ದೆಸೆಗೆಂದು ಅಕ್ಕಪಕ್ಕದ ಹೊಲಗಳಿಗೇನಾದರೂ ಹೋದರೆಂದರೆ ಕಲ್ಲೇಟುಗಳು ಬೀಳುತ್ತವೆ. ಅಂಗಡಿಯವನು ದಿನಸಿ ಕೊಡಲಾರ. ಇನ್ನು ನಡೆದಾಡುವುದಕ್ಕೂ ಊರಿನ ದಾರಿ ಬಳಸುವಂತಿಲ್ಲ!




ಮುನಿಯಪ್ಪ

ಇದು ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕು ಬಳುವನಹಳ್ಳಿ ಎಂಬ ಊರಿನ ದಲಿತರ ದುರಂತ ಕತೆ.

ಒಂಭತ್ತು ಮಂದಿ ದಲಿತರನ್ನು ಬೆಂಕಿ ಹಚ್ಚಿ ಕೊಂದ ಇದೇ ಕೋಲಾರ ಜಿಲ್ಲೆಯ ಕಂಬಾಲಪಲ್ಲಿಗೆ ಈ ಊರು ಹೆಚ್ಚು ದೂರವೇನಲ್ಲ, ಸರಿಸುಮಾರು ಐನೂರು ಮನೆಗಳ ಬಳುವನಹಳ್ಳಿಯಲ್ಲಿ ನೂರೈವತ್ತು ದಲಿತರ ಮನೆಗಳಾದರೆ ಮಿಕ್ಕೆಲ್ಲರೂ ಒಕ್ಕಲಿಗರೆ. ದಲಿತರು ಮತ್ತು ಗೌಡರ ಮಧ್ಯೆ ಹಿಂದಿನಿಂದ ಸಣ್ಣಪುಟ್ಟ ಜಗಳವಿತ್ತಾದರೂ ಆಗಿಂದಾಗಲೇ ಅದು ತಣ್ಣಗಾಗುತ್ತಿತ್ತು, ಹೇಳಿಕೇಳಿ ಬಳುವನಹಳ್ಳಿ ಅಲ್ಲಿನ ಪುಂಡು ಪೋಕರಿಗಳಿಂದಾಗಿಯೇ ಕುಖ್ಯಾತಿಗಳಿಸಿಬಿಟ್ಟಿದೆ. ಈ ಊರಿನ ಪುಂಡರ ನಾಯಕನೇ ಸಿ.ವಿ. ಲೋಕೇಶ. ಈತ ಕೋಲಾರ ಜಿಲ್ಲಾ ಬಿಜೆಪಿ ಯುವ ಮೋರ್ಚಾದ ಕಾರ್ಯದರ್ಶಿ. ... ರಘುನಾಥ್, ಶಿಡ್ಲಘಟ್ಟ ಪೊಲೀಸ್ ಠಾಣೆಯ ರೌಡಿ ಶೀಟರ್. ಲೋಕೇಶನ ಛೇಲಾಗಳಾದ ದೇವೇಗೌಡ, ದ್ಯಾವಣ್ಣ, ಮುಳ್ಳೂರು ಮಂಜುನಾಥ, ಎನ್. ನಾಗರಾಜು, ತಮ್ಮಣ್ಣನ ಮಗ ಮುನಿರಾಜು, ಕೃಷ್ಣಪ್ಪನ ಮಗ ನಂಜೇಗೌಡ ಮುಂತಾದವರೆಲ್ಲರ ಮೇಲೂ ಕ್ರಿಮಿನಲ್ ಕೇಸುಗಳಿವೆ. ಒಕ್ಕಲಿಗರಲ್ಲೇ ಕಾಂಗ್ರೆಸು-ದಳ ಎಂಬ ಎರಡು ಗುಂಪುಗಳಿವೆ. ಇಬ್ಬರ ನಡುವೆಯೇ ಹೊಡೆದಾಟಗಳಾಗಿ ಇಲ್ಲಿಗೆ ತಿಂಗಳ ಹಿಂದಿನವರೆಗೂ ಆ ಊರಿನಲ್ಲಿ ಪೊಲೀಸ್ ವ್ಯಾನು ನಿಂತೇ ಇತ್ತು.


ವಿಚಿತ್ರವೆಂದರೆ ತಮ್ಮೊಳಗೇ ಕಚ್ಚಾಡುವ ಇಲ್ಲಿನ ಗೌಡರು ಈ ಊರಿನ ಮಾದಿಗರ ವಿಷಯಕ್ಕೆ ಬಂದರೆ ಒಟ್ಟಾಗಿ ಬಿಡುತ್ತಾರೆ. ಇದೇ ಮೇ 3 ನೇ ತಾರೀಖಿನಂದು ಹೀಗೆ ಬಡಿದಾಡಿಕೊಂಡಿದ್ದ ಗೌಡರ ಎರಡೂ ಗ್ಯಾಂಗುಗಳಿಗೆ ಮತ್ತೆ ಒಂದಾಗಲು ಕಾರಣವಾದದ್ದು ಆ ಊರಿನ ರಾಮದೇವರ ಜಾತ್ರೆ!



ಲೋಕೇಶ್

ಬಳುವನಹಳ್ಳಿಯ ಶ್ರೀರಾಮ ಮಂದಿರದ ರಥೋತ್ಸವ ಪ್ರತಿ ವರ್ಷ ನಡೆಯುತ್ತದೆ. ಅದಕ್ಕೊಂದು ಅಲ್ಲಿನ ಮಾದಿಗರು ಪ್ರತಿವರ್ಷ ಎರಡೂವರೆ ಸಾವಿರ ರೂ.ಗಳಷ್ಟು ದೇಣಿಗೆ ಕೊಡಲೇಬೇಕು. ಈ ವರ್ಷವೂ ಸಡಗರದಿಂದಲೇ ಭಾಗವಹಿಸಿದ ದಲಿತರಿಗೆ ಎಂಥಾ ಆಘಾತವಾಗಿತ್ತೆಂದರೆ ರಥ ಎಳೆಯಲೆಂದು ಹೋದ ಕಾಲೋನಿಯ ಕೆಲ ಹುಡುಗರನ್ನು ಒಕ್ಕಲಿಗ ಪುಂಡರ ಗುಂಪು ಹಿಡಿದು ಬಡಿದಿದೆ. ಊಟದ ವ್ಯವಸ್ಥೆಗೆಂದು ಸವರ್ಣೀಯರಿಗೆ 300 ಅಡಿಗಳ ವಿಶಾಲ ಶಾಮಿಯಾನಾ ಹಾಕಿದ್ದರೆ, ದಲಿತರಿಗೆಂದು ಪುಟ್ಟ ಝೋಪಡಿಯಂಥ, ಪೆಂಡಾಲ್ ಹಾಕಲಾಗಿತ್ತು, ಅಲ್ಲಿ ಕುರ್ಚಿಗಳೇ ಇರಲಿಲ್ಲ!

ಇಂಥ ಅವ್ಯವಸ್ಥೆ ಮತ್ತು ಅಪನಿಂದೆಗಳಿಂದ ರೋಸತ್ತ ದಲಿತರು ಸಹಜವಾಗೇ ಅವ್ಯವಸ್ಥೆಯ ವಿರುದ್ಧ ಹೊಸಳ್ಳಿ ನಾಗರಾಜನನ್ನು ಪ್ರಶ್ನಿಸಿದ್ದಾರೆ. ಈತನ ಜೊತೆ ಮುನಿರಾಜು ಕೃಷ್ಣಪ್ಪ, ಆತನ ಮಗ ನಂಜೇಗೌಡ. ಮುಳ್ಳೂರು ಮಂಜ, ದೇವೇಗೌಡ, ರೌಡಿ ರಘುನಾಥ ಮುಂತಾದವರೆಲ್ಲ ಸೇರಿದ್ದೇ 'ಮಾದಿಗ ನನ್ ಮಕ್ಳಾ ನಿಮಗೆ ಛೇರ್ ಬೇರೆ ಕೇಡು!' ಎಂದು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಈ ಪೈಕಿ ಮುಳ್ಳೂರು ಮಂಜ 'ನನ್ ಮಕ್ಳಾ ನಿಮ್ಮನ್ನೆಲ್ಲ ಕಂಬಾಲಪಲ್ಲಿಯಲ್ಲಿ ಸುಟ್ರಲ್ಲಾ ಹಾಗೆ ಸುಟ್ಟರೇನೇ ಬುದ್ಧಿ ಬರೋದು' ಎಂದಿದ್ದಾನೆ.




ಶಾಸಕ ಮುನಿಶಾಮಪ್ಪ

ಹೊಡೆಸಿಕೊಂಡ ದಲಿತರು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಗೆ ಸೇರಿ, ಪೊಲೀಸರಿಗೂ ದೂರು ಕೊಟ್ಟಿದ್ದಾರೆ. ಮೊದಮೊದಲು ಪೊಲೀಸರು ದೂರು ದಾಖಲಿಸಲಿಲ್ಲವಾದರೂ ದಲಿತರೆಲ್ಲ ಪ್ರತಿಭಟಿಸಿದ ನಂತರ ಕಾಟಾಚಾರದ ಎಫ್‌ಐಆರ್ ಹಾಕಿದ್ದಾರೆ. ಆದರೆ ಆರೋಪಿಗಳನ್ನು ಮಾತ್ರ ಬಂಧಿಸಲೇ ಇಲ್ಲ. ಬಹುಶಃ ಪೊಲೀಸರು ತಕ್ಷಣವೇ ಆರೋಪಿಗಳನ್ನು ಬಂಧಿಸಿದ್ದರೆ ತಾಪತ್ರಯವಿರುತ್ತಿರಲಿಲ್ಲ. ಯಾವತ್ತು ಶಿಡ್ಲಘಟ್ಟದ ಜೆಡಿಎಸ್ ಶಾಸಕ ಮುನಿಶಾಮಪ್ಪ ಶಿಡ್ಲಘಟ್ಟದ ಇನ್ಸ್‌ಪೆಕ್ಟರ್ ದಾಸಪ್ಪನಿಗೆ ಧಮಕಿ ಕೊಟ್ಟನೋ ಪೊಲೀಸರು ಒಕ್ಕಲಿಗರ ತಂಟೆಗೆ ಹೋಗದೆ ಗಪ್‌ಚುಪ್ಪಾಗಿಬಿಟ್ಟರು. ಆವತ್ತೇ ರಾತ್ರಿ ಬಳುವನಹಳ್ಳಿಯಲ್ಲಿ ಸಭೆ ಸೇರಿ ದಲಿತರಿಗೆ ಬಹಿಷ್ಕಾರ ಘೋಷಿಸಿಬಿಟ್ಟರು.

ಆವತ್ತಿನಿಂದ ಶುರುವಾದ ಬಹಿಷ್ಕಾರ ಇವತ್ತಿಗೂ ಮುಂದುವರಿದೇ ಇದೆ. ತಮಾಷೆಯೆಂದರೆ ಕೇಂದ್ರ

ಕಾಂಗ್ರೆಸ್‌ನಲ್ಲಿ ಸಿದ್ದು ಮೂಲೆಗುಂಪು

ಮಾಜಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ತನ್ನ ಬಳಗವನ್ನು ಕಟ್ಟಿಕೊಂಡು ಕಾಂಗ್ರೆಸ್ ಬಿಟ್ಟು ಬಿಎಸ್‌ಪಿಯತ್ತ ಹೋಗಲಿದ್ದಾರೆಂಬ ರೂಮರ್ ಕೇಳಿಬರುತ್ತಿದೆಯಷ್ಟೇ. ಮೊನ್ನೆ ಶುಕ್ರವಾರ ಮಾಜಿ ಸಚಿವ ಇಬ್ರಾಹಿಂರವರ ಮನೆಯಲ್ಲಿ ಸಭೆ ಸೇರಿದ ಸಿದ್ದು ಬಳಗ ಈ ವಿಚಾರದ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿದ ಮೇಲಂತೂ ಸಿದ್ದು ಕಾಂಗ್ರೆಸ್ ಕೈ ಬಿಡುವ ವಿಷಯಕ್ಕೆ ರೆಕ್ಕೆಪುಕ್ಕ ಬಂದುಬಿಟ್ಟದೆ.



ಸಿದ್ದುಗೆ ಕಾಂಗ್ರೆಸ್ ಬಗ್ಗೆ ನಿರಾಶೆಯಾಗಿದ್ದು ಅದಕ್ಕೆ ಪ್ರಧಾನವಾಗಿ ಎರಡು ಕಾರಣಗಳಿವೆ. ಒಂದನೆಯದು, ಕಾಂಗ್ರೆಸ್ ಪಾಳೆಯದಲ್ಲಿ ಸಿದ್ದು ಹಾಗೂ ಅವರ ಬಳಗದ ಬಗ್ಗೆ ತೋರುತ್ತಿರುವ ನಿರ್ಲಕ್ಷ್ಯ. ಅಥವಾ ಸಿದ್ದುವನ್ನು ತುಳಿಯಲು ನಡೆಸುತ್ತಿರುವ ತಂತ್ರ-ಕುತಂತ್ರಗಳು ಎಂದರೇನೇ ಸೂಕ್ತವೆನಿಸುತ್ತದೆ. ಎರಡನೆಯದು, ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಭಾರಿ ಜಯಭೇರಿ ಬಾರಿಸಿದ ಬಿಎಸ್‌ಪಿ ಅಲ್ಲಿ ಕಳೆದ 15 ವರ್ಷಗಳಿಂದ ಚಾಲ್ತಿಯಲ್ಲಿದ್ದ ಸಮ್ಮಿಶ್ರ ಸರ್ಕಾರದ ಪರಂಪರೆಗೆ ಮಂಗಳ ಹಾಡಿ ಸ್ವತಂತ್ರವಾಗಿ ಸರ್ಕಾರ ರಚಿಸಿದ್ದು.

ವಾಸ್ತವದಲ್ಲಿ ಸಿದ್ದು ಜೆಡಿಎಸ್‌ನಲ್ಲಿದ್ದ ದೇವೇಗೌಡರ ಪಾಳೆಗಾರಿಕೆಯನ್ನು ಸಹಿಸಲಾರದೇ ತನ್ನ ಪರಿವಾರ ಸಮೇತವಾಗಿ ಆ ಪಕ್ಷದಿಂದ ಗುಳೇ ಹೋಗುವ ನಿರ್ಧಾರ ಮಾಡಿದಾಗಲೇ ರಾಜ್ಯದ ಬಿಎಸ್‌ಪಿ ನಾಯಕರು ಅವರನ್ನು ಸಂಪರ್ಕಿಸಿ ತಮ್ಮ ಪಕ್ಷಕ್ಕೆ ಬರುವಂತೆ ದುಂಬಾಲು ಬಿದ್ದಿದ್ದರು. ಆದರೆ ಸಿದ್ದು ಎಂಬ ತಿಮಿಂಗಲದ ಜಲಕ್ರೀಡೆಗೆ ಬಿಎಸ್‌ಪಿಯಂತ ಸಣ್ಣ ಕೆರೆ ಸಾಕಾಗುವುದಿಲ್ಲ ಎನಿಸಿತೋ ಏನೋ ಅಂತೂ ಅವರು ಬಿಎಸ್‌ಪಿ ಸೇರಲಿಲ್ಲ, ತನಗೆ ಕಾಂಗ್ರೆಸ್ ಸಮುದ್ರವೇ ಸರಿ ಎಂದೆನಿಸಿತೋ ಏನೋ ಕಾಂಗ್ರೆಸ್ ಸೇರಿಬಿಟ್ಟರು. ಈ ಮೂಲಕ ಹಗಲು ಕಂಡ ಬಾವಿಗೆ ರಾತ್ರಿ ಬಿದ್ದರು.

ಕಾಂಗ್ರೆಸ್‌ನಲ್ಲಿ ಮೂಲೆಗುಂಪಾದ ಸಿದ್ದು

ಸಿದ್ದು ಕಾಂಗ್ರೆಸ್ ಸೇರಿದ ಆರಂಭದಲ್ಲಿ ಅವರಿಗೆ ಭಾರಿ ಮರ್ಯಾದೆ ಸಿಕ್ಕಂತೆ ಕಂಡಿತಾದರೂ ಅದು ಅಲ್ಪಕಾಲಿಕವಾಗಿತ್ತು. ಆ ಹೊತ್ತಿಗಾಗಲೇ ಸಂಪೂರ್ಣವಾಗಿ ತಳವೂರಿದ್ದ ಧರಂಸಿಂಗ್, ಖರ್ಗೆ, ಎಚ್.ಕೆ. ಪಾಟೀಲ್, ಮುನಿಯಪ್ಪ ಎಂಬ ಕಾಂಗ್ರೆಸ್ ದಿಗ್ಗಜರು ಸಿದ್ದುವಿನ ಆಗಮನದಿಂದ ಕಸಿವಿಸಿಕೊಳ್ಳಲಾರಂಭಿಸಿದರು. ಸಿದ್ದು ಬಂದರೆ ತಮ್ಮ ತಮ್ಮ ಸ್ಥಾನಗಳಿಗೆ, ವರ್ಚಸ್ಸಿಗೆ ಧಕ್ಕೆ ಬರುತ್ತದೆ ಎಂದೆನಿಸಿ ಸಿದ್ದುವನ್ನು ವ್ಯವಸ್ಥಿತವಾಗಿ ತುಳಿಯುವ ಸಂಚು ನಡೆಸಲಾರಂಭಿಸಿದರು. ಆದ್ದರಿಂದ ಕಾಂಗ್ರೆಸ್‌ನಲ್ಲಿ ಸಿದ್ದುವಿಗೆ ಯಾವ ಪ್ರಮುಖ ಸ್ಥಾನವೂ ಸಿಗಲಿಲ್ಲ; ಸಿಗಬೇಕಾದಷ್ಟು ಗೌರವ, ಮರ್ಯಾದೆಯೂ ಸಿಗಲಿಲ್ಲ. ಒಟ್ಟಿನಲ್ಲಿ ಬಂದ ಕೆಲವೇ ತಿಂಗಳಲ್ಲಿ ಸಿದ್ದುಗೆ ಕಾಂಗ್ರೆಸ್ ರಾಜಕಾರಣದ ಅಸಲಿ ಚಿತ್ರಣ ಸಿಗತೊಡಗಿತು. ಅಷ್ಟು ಹೊತ್ತಿಗಾಗಲೇ ಅವರು ರಾಜಕೀಯವಾಗಿ ಮೂಲೆಗುಂಪಾಗಿ ಹೋಗಿದ್ದರು.


ನಿಜ ಹೇಳಬೇಕೆಂದರೆ ಕಾಂಗ್ರೆಸ್‌ನ ಒಳಗಡೆಯೇ ದೇವೇಗೌಡರ ಬಣ ಒಂದಿದೆ. ಮುನಿಯಪ್ಪ, ಆಳ್ವ, ರಾಜಶೇಖರ್ ಮುಂತಾದ ಕಾಂಗ್ರೆಸ್ ನಾಯಕರು ಧರಂಸಿಂಗ್ ನಾಯಕತ್ವದಲ್ಲಿ ಸದಾ ದೇವೇಗೌಡರಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಅತ್ತ ದೇವೇಗೌಡರಿಂದ ಸಿದ್ದುವನ್ನು ಮುಗಿಸಲು ಆರ್ಡರ್ ಬಂದರೆ, ಇವರು ಸ್ಕೆಚ್ ರೆಡಿ ಮಾಡಿ ಜಾರಿಗೆ ತರುತ್ತಾರೆ. ಈ ಕಾರಣದಿಂದಲೇ ಸಿದ್ದು ಮತ್ತು ಅವರ ಪರಿವಾರ ಇಂದು ಕಾಂಗ್ರೆಸ್‌ನಲ್ಲಿ ಯಾವ ಕೆಲಸವೂ ಇಲ್ಲದೇ ನೊಣ ಹೊಡೆಯುವ ಪರಿಸ್ಥಿತಿಗೆ ತಲುಪಿದ್ದು.

ಸಿದ್ದುಗೆ ಕಾಂಗ್ರೆಸ್‌ನಲ್ಲಿ ಕಿರಿಕಿರಿ ಮಾಡುತ್ತಿರುವ ಇನ್ನೊಂದು ವಿಚಾರ ಎಂದರೆ ಆ ಪಕ್ಷವು ಇಂದು ಯಾವ ಕೆಲಸವೂ ಇಲ್ಲದೇ ಸೋಮಾರಿಯಂತೆ ಕೈ ಕಟ್ಟಿಕುಳಿತುಕೊಂಡಿರುವುದು. ಅದು ವಿಧಾನಸಭೆಯಲ್ಲಿ ವಿರೋಧ ಪಕ್ಷ ಎಂಬ ಬೋರ್ಡು ತಗಲು ಹಾಕಿಕೊಂಡು ನಾಮಕಾವಾಸ್ಥೆಗೆ ಕುಳಿತುಕೊಂಡಿದೆಯೇ ಹೊರತು ವಿರೋಧ ಪಕ್ಷವಾಗಿ ಮಾಡಬೇಕಾದ ಕೆಲಸಗಳನ್ನು ಸಕ್ರಿಯವಾಗಿ ಮಾಡುತ್ತಿಲ್ಲ, ಇನ್ನೊಂದೆಡೆಗೆ ಪಕ್ಷ ಸಂಘಟಿಸುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿದೆ ಎಂದರೆ ಅದೂ ಇಲ್ಲ. ಸಕ್ರಿಯ ರಾಜಕಾರಣದಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡಿದ ಸಿದ್ದುಗೆ ಇದನ್ನು ಸಹಿಸಲಾಗುತ್ತಿಲ್ಲ. ಕಾಂಗ್ರೆಸ್‌ನ ಹಿರಿಯರು ಈ ಕೆಲಸ ಮಾಡುತ್ತಿಲ್ಲವಾದ್ದರಿಂದ ತಾನಾದರೂ ಈ ಕೆಲಸ ಮಾಡೋಣ ಎಂದು ಸಿದ್ದು ಮುಂದಾದರೆ ಅವರ ಕಾಲು ಎಳೆಯುವುದಕ್ಕೆ ಒಂದು ದೊಡ್ಡ ದಂಡೆ ಕಾಂಗ್ರೆಸ್‌ನಲ್ಲಿದೆ. ಬೇರೆ ಯಾವ ಕೆಲಸಕ್ಕೂ ಸಕ್ರಿಯವಾಗಿರದಿದ್ದರೂ ಈ ಕೆಲಸಕ್ಕೆ ಮಾತ್ರ ಮುನ್ನುಗ್ಗಿ ಬರುತ್ತದೆ ಅದು.

ಮತ್ತೆ ಜೆಡಿಎಸ್‌ನೊಂದಿಗೆ ಸೇರಿ ಸರ್ಕಾರ ರಚಿಸಲು ಸಿದ್ಧ ಎಂದು ಧರಂಸಿಂಗ್ ಪದೇಪದೇ ಹೇಳುತ್ತಿರುವುದು, ಜೆಡಿಎಸ್ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಲು ಮುಂದಾದರೆ ದೇವೇಗೌಡರ ಮಗ ರೇವಣ್ಣನನ್ನೇ ಸಿಎಂ ಮಾಡಲು ಸಿದ್ಧರಿದ್ದೇವೆ ಎಂದು ಮೊನ್ನೆ ಕೆ.ಎಚ್. ಮುನಿಯಪ್ಪ ಹೇಳಿರುವುದು ಸಿದ್ಧರಾಮಯ್ಯನವರನ್ನು ಮತ್ತೂ ಕಸಿವಿಸಿ ಮಾಡಿದೆ. ಕೋಮುವಾದಿ ಬಿಜೆಪಿ ಜೊತೆ ಸೇರಿ ಇದುವರೆಗೂ ರಾಜ್ಯವನ್ನು ಕೊಳ್ಳೆಹೊಡೆದಿರುವ, ತನ್ನ ಜಾತ್ಯತೀತ ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರಿ ಕೋಮುವಾದಿಯೇ ಆಗಿ ಹೋಗಿರುವ ಜೆಡಿಎಸ್ ಜೊತೆ ಕೈ ಜೋಡಿಸಲು ಸಿದ್ದರಾಮಯ್ಯ ಸುತಾರಾಂ ತಯಾರಿಲ್ಲ.

ಕಾಂಗ್ರೆಸ್‌ನಲ್ಲಿ ಸಿದ್ದು ಗತಿಯೇ ಹೀಗಾದರೆ ಇನ್ನು ಅವರೊಂದಿಗೆ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ಕೋದಂಡರಾಮಯ್ಯ, ಎಚ್.ಸಿ. ಮಹಾದೇವಪ್ಪ, ಸಿ.ಎಂ. ಇಬ್ರಾಹಿಂ, ಎ.ಕೆ. ಸುಬ್ಬಯ್ಯ, ಜಾರಕಿಹೊಳಿ ಮುಂತಾದ ನಾಯಕರ ಪಾಡು ಹೇಗಿರಬೇಡ? ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿರುವ ಅವರ ಬೆಂಬಲಿಗ-ಹಿಂಬಾಲಕ ಪಡೆಯ ಗತಿ ಏನಾಗಿರಬೇಕು? ಹಾಗಾಗಿಯೇ ಶೀಘ್ರವೇ ಕಾಂಗ್ರೆಸ್ ತೊರೆಯುವಂತೆ ಇವರೆಲ್ಲರಿಂದಲೂ ಸಿದ್ದುಗೆ ಒತ್ತಡ ಬರುತ್ತಿದೆ. ಈ ಎಲ್ಲಾ ಕಾರಣಗಳಿಂದ ಸಿದ್ದು ಕಾಂಗ್ರೆಸ್‌ಗೆ ಗುಡ್‌ಬೈ ಹೇಳುವ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ.

ಸಿದ್ದು ಕಾಂಗ್ರೆಸ್‌ಗೆ ಸೇರುವಾಗ ಸೋನಿಯಾಗಾಂಧಿಯನ್ನು ಭೇಟಿ ಮಾಡಿ ಒಂದು ಮಾತು ಹೇಳಿದ್ದರು: "ಪಕ್ಷದ ಬಲವರ್ಧನೆಗೆ ನನ್ನನ್ನು ಪಕ್ಷ ಹೇಗೆ ಬಳಸಿಕೊಳ್ಳುತ್ತದೆಯೋ, ಹೇಗೆ ದುಡಿಸಿಕೊಳ್ಳುತ್ತದೆಯೋ ಹಾಗೆ ಬಳಕೆಯಾಗುತ್ತೇನೆ, ಹಾಗೆ ದುಡಿಯುತ್ತೇನೆ" ಎಂದು. ಆದರೆ ಕಾಂಗ್ರೆಸ್ ಅವರನ್ನು ಬಳಸಿಕೊಳ್ಳಲೂ ಇಲ್ಲ, ದುಡಿಸಿಕೊಳ್ಳಲೂ ಇಲ್ಲ, ಬದಲಾಗಿ ಪಕ್ಷ ಬಲವರ್ಧನೆಗೆ ಖುದ್ದಾಗಿ ಪ್ರಯತ್ನಿಸಿದ ಅವರನ್ನೇ ತುಳಿಯಲು ಪ್ರಯತ್ನಿಸಿತು.



ಕಾಂಗ್ರೆಸ್‌ನ ಈ ಪರಿಯನ್ನು ಮಂಗನಾಟ ಎನ್ನಬೇಕೋ ಮೂರ್ಖತನ ಎನ್ನಬೇಕೋ ಗೊತ್ತಿಲ್ಲ. ಇಪ್ಪೊಂದು ವರ್ಷಗಳ ಕಾಲ ರಾಜಕಾರಣ ಮಾಡಿ ಅನುಭವವಿರುವ, ಸಾಕಷ್ಟು ನಾಯಕರು ಮತ್ತು ಕಾರ್ಯಕರ್ತರ ಪಡೆಗೆ ನಾಯಕನಾಗಿ ಹೊರ ಹೊಮ್ಮಿರುವ, ರಾಜ್ಯದ ಮೂರನೇ ಅತಿದೊಡ್ಡ ವೋಟ್‌ಬ್ಯಾಂಕ್ ಆದ ಕುರುಬ ಜನಾಂಗದ ನೇತಾರನಾಗಿರುವ ಹಾಗೂ ಎಲ್ಲಕ್ಕಿಂತಲೂ ಮುಖ್ಯವಾಗಿ ಅಧಿಕಾರದಲ್ಲಿದ್ದಾಗಲೂ ಯಾವುದೇ ಹಗರಣಗಳಲ್ಲಿ, ಭ್ರಷ್ಟಾಚಾರಗಳಲ್ಲಿ ಮೈ ಹೊಲಸು ಮಾಡಿಕೊಳ್ಳದೇ ಉಳಿದು ಬಂದಿರುವ ಸಿದ್ದರಾಮಯ್ಯನನ್ನು ಕಾಂಗ್ರೆಸ್ ಪಕ್ಷ ತನ್ನ ಬಲವರ್ಧನೆಗೆ ಬಳಸಿಕೊಳ್ಳದೆ ಮೂಲೆಗುಂಪು ಮಾಡಿತು ಎಂದರೆ ಇದನ್ನು ಮೂರ್ಖತನ ಎನ್ನದೇ ಬೇರೆನೆನ್ನಬೇಕು? ಅವರನ್ನು ಸೇರಿಸಿಕೊಳ್ಳುವಾಗ ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷ ಇಲ್ಲವೇ ವಿರೋಧ ಪಕ್ಷದ ನಾಯಕನ್ನಾಗಿ ಮಾಡಲಾಗುವುದು ಎಂದು ಭರವಸೆ ನೀಡಿದ ಸೋನಿಯಾ ಗಾಂಧಿ ಸಿದ್ದು ಮೂಲೆ ಗುಂಪಾಗುವುದನ್ನು ನೋಡುತ್ತಾ ಸುಮ್ಮನಿದ್ದರೆಂದರೆ ಏನೆನ್ನಬೇಕು? ಈ ಎರಡು ಸ್ಥಾನಗಳಲ್ಲಿ ಒಂದನ್ನು ಸಿದ್ದುಗೆ ಕೊಡುವ ಬಗ್ಗೆ ಉತ್ತರ ಪ್ರದೇಶ ಚುನಾವಣೆಯ ನಂತರ ಆಲೋಚಿಸಲಾಗುವುದು ಎಂಬ ಸಬೂಬು ಹೇಳುತ್ತಿದ್ದ ಹೈಕಮಾಂಡ್ ಈಗ ಉಳ್ಳಾಲ ಚುನಾವಣೆಯ ನಂತರ ನೋಡುತ್ತೇವೆ ಎಂದು ಹೇಳುತ್ತಿರುವುದರ ಹಿಂದಿನ ಉದ್ದೇಶ ಏನು? ಕಾಂಗ್ರೆಸ್ ಒಳಗೆ ದೇವೇಗೌಡರ ಲಾಬಿ ಅಷ್ಟು ಪ್ರಭಾವಶಾಲಿಯಾಗಿದೆ ಎಂದು ಅರ್ಥವೇ? ಅಥವಾ ಕಾಂಗ್ರೆಸ್ ಹೈಕಮಾಂಡ್‌ಗೆ ಕೂಡ ಸಿದ್ದು ಈಗ ಬೇಡವಾಗಿದ್ದಾರೆಂದು ಅರ್ಥವೇ?

ರಾಜ್ಯ ಬಿಎಸ್‌ಪಿ ನಾಯಕರು ಏನೆನ್ನುತ್ತಾರೆ?

ಕಾಂಗ್ರೆಸ್‌ನೊಳಗೆ ಸಿದ್ದು ಬಂಡಾಯವೆದ್ದಿರುವ ಸುದ್ದಿ ಗೊತ್ತಿದ್ದರೂ ರಾಜ್ಯ BSP ನಾಯಕರು ಅದನ್ನು ಸಮರ್ಥವಾಗಿ ಬಳಸಿಕೊಳ್ಳುವ ಪ್ರಯತ್ನ ಮಾಡುತ್ತಿಲ್ಲ. ಸಿದ್ದು ಜೆಡಿಎಸ್ ಬಿಟ್ಟು ಹೊರಬಂದಾಗ ಒಮ್ಮೆ ಹೋಗಿ ಅವರನ್ನು ಮನವಿ ಮಾಡಿಕೊಂಡಿದ್ದು ಬಿಟ್ಟರೆ ಅವರನ್ನು ಮತ್ತೆ ಸಂಪರ್ಕಿಸಿ BSPಗೆ ಕರೆ ತರುವ ಪ್ರಯತ್ನ ಮಾಡಿಲ್ಲ.

ರಾಜ್ಯ BSP ನಾಯಕರಾದ ಬಿ.ಗೋಪಾಲ್ ಮತ್ತು ಎನ್. ಮಹೇಶ್‌ರವರು ಉತ್ತರ ಪ್ರದೇಶದಲ್ಲಿ ತಮ್ಮ ಪಕ್ಷ ಗೆದ್ದ ಅಮಲಿನಲ್ಲಿಯೇ ಇನ್ನೂ ಇದ್ದಾರೆಯೇ ಹೊರತು ರಾಜ್ಯದಲ್ಲಿ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಸಿದ್ದರಾಮಯ್ಯನಂತಹ ನಾಯಕರನ್ನು ಕರೆತರುವುದರ ಹಿಂದಿರುವ ಮಹತ್ವವನ್ನು ಅರ್ಥಮಾಡಿಕೊಂಡಂತಿಲ್ಲ. ಅತ್ತ ಉತ್ತರ ಪ್ರದೇಶದಲ್ಲಿ BSP ಜಯಭೇರಿ ಬಾರಿಸಿದಾಕ್ಷಣ ಇತ್ತ ಕರ್ನಾಟಕದಲ್ಲಿ BSP ಸೇರಲು ಜನ ಸಾಲುಗಟ್ಟಿ ನಿಂತಿದ್ದು ನಿಜ. ರಾಜ್ಯ BSP ನಾಯಕರು ಅಷ್ಟಕ್ಕೆ ತೃಪ್ತಿಪಟ್ಟುಕೊಂಡಂತಿದೆ. ಈಗಲಾದರೂ ಎಚ್ಚೆತ್ತುಕೊಂಡು ಸಿದ್ದು ಅಂಡ್ ಕಂಪನಿಯನ್ನು BSPಗೆ ಕರೆತರುವ ಪ್ರಯತ್ನ ಮಾಡುತ್ತಾರಾ ಎಂಬುದನ್ನು ಕಾದು ನೋಡಬೇಕಷ್ಟೆ.

ಕಾರಣ, ತರ್ಕ ಏನೇ ಇರಲಿ ಅಂತೂ ಸಿದ್ದುಗೆ ಕಾಂಗ್ರೆಸ್ ಬಗ್ಗೆ ಅಸಹನೆ ಮೂಡಿರುವುದಂತೂ ಗ್ಯಾರಂಟಿಯಾಗಿದೆ. ಅವರ ಬೆಂಬಲ-ಹಿಂಬಾಲಕ ಪಡೆಯು ಗಂಟುಮೂಟೆ ರೆಡಿ ಮಾಡುತ್ತಿದೆ. ಆದರೂ ಕೊನೆಯ ಬಾರಿಗೆ ಒಮ್ಮೆ ಸೋನಿಯಾ ಗಾಂಧಿಯನ್ನು ಭೇಟಿ ಮಾಡುವ ಉದ್ದೇಶ ಸಿದ್ದುಗೆ ಇದೆ. ಇದಕ್ಕಾಗಿ ಒಂದು ನಿಯೋಗ ದೆಹಲಿಗೆ ಹೊರಟು ನಿಂತಿದೆ. ಅಲ್ಲಿ ಭಾರಿ ಏನೋ ಆಗಿಬಿಡುತ್ತೆ ಎಂಬ ಭ್ರಮೆ ಇಲ್ಲದಿದ್ದರೂ ಸೌಹಾರ್ದಯುತವಾಗಿ ವಿದಾಯ ಹೇಳುವ ಯೋಚನೆ ಇರಬೇಕು.


ಸಿದ್ದು ಆಂಡ್ ಕಂಪೆನಿ ಬಿಎಸ್‌ಪಿಯತ್ತ

ಸಿದ್ದು ಆಂಡ್ ಕಂಪೆನಿ ಕಾಂಗ್ರೆಸ್‌ನಿಂದ ಹೊರಬಂದರೆ ಅದಕ್ಕೆ ಸಮಂಜಸ ಆಯ್ಕೆ ಕಾಣುತ್ತಿರುವುದು ಬಿಎಸ್‌ಪಿ. ಯಾಕೆಂದರೆ ಸಿದ್ದು ನೇತೃತ್ವದ 'ಅಹಿಂದ'ದ ತತ್ವ-ಸಿದ್ಧಾಂತಗಳಿಗೂ ಮತ್ತು ಬಿಎಸ್‌ಪಿಯ ತತ್ವ ಸಿದ್ಧಾಂತಗಳಿಗೂ ಮೂಲಭೂತವಾಗಿ ಯಾವುದೇ ವ್ಯತ್ಯಾಸವಿಲ್ಲದಿರುವುದು. ಇನ್ನು ಮುಖ್ಯವಾದದ್ದೇನೆಂದರೆ ತಾವು ಮತ್ತು ತಮ್ಮ ಬೆಂಬಲಿಗರೆಲ್ಲರೂ ಹೆಚ್ಚುಕಡಿಮೆ ಹಿಂದುಳಿದ ವರ್ಗಕ್ಕೆ (OBC), ಅಲ್ಪಸಂಖ್ಯಾತ ವರ್ಗಕ್ಕೆ ಹಾಗೂ ದಲಿತ ಸಮುದಾಯಗಳಿಗೆ ಸೇರಿರುವುದು. ಬಿಎಸ್‌ಪಿಯೂ ಕೂಡ ಈ ಸಮುದಾಯಗಳನ್ನು ಆಧಾರಿಸಿಯೇ ಹುಟ್ಟಿ ಬೆಳೆದಿರುವುದರಿಂದ ಇವರಿಬ್ಬರ ಮಿಲನಕ್ಕೆ ಹೇಳಿ ಮಾಡಿಸಿದಂತಿದೆ. ಈ ಕಾರಣಕ್ಕಾಗಿಯೇ ಬೆಂಬಲಿಗರ ದಂಡು ಬಿಎಸ್‌ಪಿಯತ್ತ ಹೊರಳುವಂತೆ ಸಿದ್ದು ಮೇಲೆ ಒತ್ತಡ ತರುತ್ತಿದೆ. ಮೊನ್ನೆ ಸಿ.ಎಂ. ಇಬ್ರಾಹಿಂ ಮನೆಯಲ್ಲಿ ನಡೆದ ಸಿದ್ದು ಬೆಂಬಲಿಗರ ಸಭೆಯಲ್ಲಿ ವ್ಯಕ್ತವಾದದ್ದು ಇದೇ ಅಭಿಪ್ರಾಯ.

ಸಿದ್ದು ದಂಡು ಬಿಎಸ್‌ಪಿಯತ್ತ ವಾಲುವುದಕ್ಕೆ ಮಾಯಾ ಎಫೆಕ್ಟ್ ಕೂಡ ಒಂದು ಕಾರಣ. ಬಿಎಸ್‌ಪಿ ಉತ್ತರ ಪ್ರದೇಶದಲ್ಲಿ ಜಯಭೇರಿ ಬಾರಿಸಿ 15 ವರ್ಷಗಳ ನಂತರ ಸ್ವತಂತ್ರವಾಗಿ ಸರ್ಕಾರ ರಚಿಸಿದ ಹೆಗ್ಗಳಿಕೆಯಿಂದ ಬೀಗುತ್ತಿರುವುದರಿಂದ ಮಾಯಾ ಮತ್ತು ಬಿಎಸ್‌ಪಿಯ ಎಫೆಕ್ಟ್ ದೇಶದಾದ್ಯಂತ ಪಸರಿಸಿದೆ. ಕರ್ನಾಟಕದಲ್ಲಿ ಈ ಬಿಎಸ್‌ಪಿಯನ್ನು ಸಮರ್ಥವಾಗಿ ಮುನ್ನಡೆಸುವ ಪ್ರಬಲ ನಾಯಕನೊಬ್ಬನ ಅಗತ್ಯವಿರುವುದರಿಂದ ಆ ಸ್ಥಾನವನ್ನು ಸಿದ್ದು [illegible] ತುಂಬಬಹುದೆಂಬ ಲೆಕ್ಕಾಚಾರ ಕೂಡ ನಡೆಯುತ್ತಿದೆ.

-ಕುಮಾರ್ ಬುರಡಿಕಟ್ಟಿ

ಮಂತ್ರಿ ಕೋಲಾರದ ಸಂಸದ ಕೆ.ಎಚ್. ಮುನಿಯಪ್ಪನವರೇ ಬಳುವನಹಳ್ಳಿಗೆ ಭೇಟಿ ಕೊಟ್ಟಿದ್ದಾರೆ. ಅವರ ಜೊತೆ ಮಾಜಿ ಗಣಿ ಮಂತ್ರಿ ವಿ. ಮುನಿಯಪ್ಪ, ಕಾಂಗ್ರೆಸ್ ನಾಯಕಿ ಮೋಟಮ್ಮ ಇತ್ಯಾದಿಗಳೆಲ್ಲ ಬಂದು ದಲಿತರ ಕಣ್ಣೊರೆಸಿದರೇ ಹೊರತು ಮತ್ತೇನೂ ಮಾಡಿಲ್ಲ. ಎಸ್.ಪಿ. ರವೀಂದ್ರ ಪ್ರಸಾದ್, ಜಿಲ್ಲಾಧಿಕಾರಿ ಪಾಂಡೆ, ಸಮಾಜ ಕಲ್ಯಾಣಾಧಿಕಾರಿ ವೆಂಕಟರಮಣಪ್ಪ, ಮುಂತಾದವರೆಲ್ಲ ಕಾಟಾಚಾರಕ್ಕೆ, ಭೇಟಿಕೊಟ್ಟದ್ದು ಬಿಟ್ಟರೆ ಈತನಕ ಸಾಮಾಜಿಕ ಬಹಿಷ್ಕಾರ ಕೊನೆಗೊಂಡಿಲ್ಲ, ಎಲ್ಲಿಂದಲೋ ನೀರು ತರಬೇಕು. ರಸ್ತೆಗೆ ಕಾಲಿಡುವಂತಿಲ್ಲ, ಬಹಿರ್ದೆಸೆಗೆ ಹೋಗುವಂತಿಲ್ಲ, ಕೂಲಿಗೆ ಕರೆಯುತ್ತಿಲ್ಲ, ಬಳುವನಹಳ್ಳಿಯ ದಲಿತರ ಪಾಲಿಗೆ ಸದ್ಯ ಅಷ್ಟಿಷ್ಟು ಸ್ಪಂದಿಸುತ್ತಿರುವುದು ಬಿಎಸ್‌ಪಿಯೊಂದೆ. ಬಿಎಸ್‌ಪಿ ನಾಯಕ ಮುನಿಯಪ್ಪ ಪ್ರತಿನಿತ್ಯ ಅಧಿಕಾರಿಗಳಿಗೆ ದುಂಬಾಲು ಬೀಳುತ್ತಲೇ ಇದ್ದಾರೆ.




ಬಲಿಪಶುಗಳಾದ ನರಸಿಂಹಮೂರ್ತಿ, ಬಾಬು ಮತ್ತು ಮೂರ್ತಿ

ಕಾಂಗ್ರೆಸ್ಸಿನ ಕೆ.ಎಚ್. ಮುನಿಯಪ್ಪ, ಮಾಜಿ ಮಂತ್ರಿ ಮುನಿಯಪ್ಪ ಇಬ್ಬರದೂ ಒಂದೇ ಚಾಳಿ. ದಲಿತರು ಒಕ್ಕಲಿಗರ ಮಧ್ಯೆ [illegible] ಸಹಜವಾಗೇ ಗೌಡರ ಪರವಿರುತ್ತಾರೆ. ಅದೇ ಗೌಡರೊಳಗೆ ಹೊಡೆದಾಟವಾದರೆ ಪಾರ್ಟಿ ನೋಡುತ್ತಾರೆ. ದಲಿತರೇನಿದ್ದರೂ ಓಟಿಗೆ ಮಾತ್ರ ಎಂಬುದು ಅವರ ಅಚಲ ನಂಬಿಕೆ!

ಇನ್ನು ಎಮ್ಮೆಲ್ಲೇ ಮುನಿಶಾಮಪ್ಪ ಪಕ್ಕಾ ಒಕ್ಕಲಿಗ. ಹುಟ್ಟಾ ದಲಿತ ದ್ವೇಷಿ. ವಯಸ್ಸಾಗಿ ಮುದುಕನಾದಷ್ಟೂ ಮುನಿಶಾಮಪ್ಪನ ಜಾತಿನಂಜು ಏರುತ್ತಲೇ ಇದೆ. ಹೇಳಿಕೇಳಿ ದೇವೇಗೌಡ ಪಕ್ಕಾ ಬಂಟನಾದ ಮುನಿಶಾಮಪ್ಪನೇ ಒಕ್ಕಲಿಗರ ಎಲ್ಲಾ ಅಟ್ಟಹಾಸಗಳ ಪ್ರೇರಕಶಕ್ತಿ, ಆತನದೇ ಕುಮ್ಮಕ್ಕು. ಇವತ್ತಲ್ಲ ನಾಳೆ ಬಳುವನಹಳ್ಳಿ ಕಂಬಾಲಪಲ್ಲಿ ಆಗೋಲ್ಲ ಎನ್ನಲು ಗ್ಯಾರಂಟಿಯೇನು?

ಬಹಿಷ್ಕಾರ ಹಾಕಿದ ಏಳೆಂಟು ಮಂದಿಯನ್ನು ಬಂಧಿಸಿ ಲಾಕಪ್ಪಿಗೆ ದಬ್ಬಿಬಿಟ್ಟರೆ ಇಡೀ ಸಮಸ್ಯೆಯೇ ಬಗೆಹರಿಯುತ್ತದೆ. ಆದರೆ ಕಂಬಾಲಪಲ್ಲಿಯಲ್ಲಿ ಹೆಣಗಳು ಬಿದ್ದಂತೆ ಇನ್ನೂ ಬಳುವನಹಳ್ಳಿಯಲ್ಲಿ ಬಿದ್ದಿಲ್ಲವಲ್ಲ! ಸರ್ಕಾರ ಕಣ್ಣು ತೆರೆಯಬೇಕೆಂದರೆ ಇಲ್ಲೂ ದಲಿತರ ಹೆಣಗಳು ಬೀಳಲೇಬೇಕಾ?


-ರಾ. ಸೋಮನಾಥ್



ವೆಂಕಯ್ಯ ನಾಯ್ಡುವಿನ ಅಡ್ನಾಡಿ ವಾದ

ಈ ಬಜೆಪಿಗಳು ಇದ್ದಕ್ಕಿದ್ದಂತೆ ಸಮಾಜವಾದಿಗಳಾಗುತ್ತಾರೆ. ಇದ್ದಕ್ಕಿದ್ದಂತೆ ಬಂಡವಾಳವಾದಿಗಳಾಗುತ್ತಾರೆ. ಯಾವುದೂ ಗಿಟ್ಟಲಿಲ್ಲವೆಂದರೆ ರಾಷ್ಟ್ರೀಯವಾದಿಗಳಾಗಿ ಬಿಡುತ್ತಾರೆ. 1984ರ ಚುನಾವಣೆಯಲ್ಲಿ ಹೀನಾಯವಾದ ಸೋಲು ಅನುಭವಿಸಿದ ನಂತರ ಇದ್ದಕ್ಕಿದ್ದಂತೆ ಆಗ ಬಜೆಪಿ ಅಧ್ಯಕ್ಷರಾಗಿದ್ದ ವಾಜಪೇಯಿ ತಮ್ಮದು ಗಾಂಧೀ ಪ್ರಣೀತ ರಾಷ್ಟ್ರೀಯವಾದ ಎಂದು ಘೋಷಿಸಿಬಿಟ್ಟರು. ಅದಾದ ಮರುವರ್ಷವೇ ರಾಮಜನ್ಮಭೂಮಿ ಹೆಸರಿನಲ್ಲಿ ದೇಶಾದ್ಯಂತ ಉಗ್ರ ಹಿಂದೂತ್ವದ ಪ್ರತಿಪಾದನೆಗೆ ಇಳಿದುಬಿಟ್ಟರು. ಯಾವುದೇ ವಾದವಿದ್ದರೂ ಬಂಡವಾಳಶಾಹಿಗಳಿಗೆ ಮಾತ್ರ ನಮ್ರ ಸೇವಕರಾಗಿಯೇ ಬಂದಿರುವ ಈ ಚೆಡ್ಡಿಗಳು ಸ್ವದೇಶಿ ಬಂಡವಾಳವಾದಕ್ಕೆ ಮಾತ್ರವಲ್ಲದೆ, ವಿದೇಶೀ ಬಂಡವಾಳವಾದಕ್ಕೂ ಸೆರಗು ಹಾಸಿದ್ದರು. ಭಾರತಾಂಬೆಯ ತಲೆ ಹಿಡಿದಿದ್ದರು.

ಇದೀಗ ಉತ್ತರ ಪ್ರದೇಶದಲ್ಲಿ ಹೀನಾಯವಾಗಿ ಸೋತ ನಂತರ ವೆಂಕಯ್ಯ ನಾಯ್ಡು ಎಂಬ ಅವರ ರಾಷ್ಟ್ರೀಯ ಕಾರ್ಯದರ್ಶಿ ಬಜೆಪಿಯದು ಬಂಡವಾಳವಾದವೂ ಅಲ್ಲ, ಸಮಾಜವಾದವೂ ಅಲ್ಲ, ಬದಲಿಗೆ ರಾಷ್ಟ್ರೀಯವಾದ ಎಂಬ ಅಡ್ನಾಡಿ ವಾದವನ್ನು ಮುಂದಿಟ್ಟಿದ್ದಾರೆ. ಸಮಾಜವಾದವೂ ಅಲ್ಲದ, ಬಂಡವಾಳವಾದವೂ ಅಲ್ಲದ ಒಂದು ರಾಷ್ಟ್ರೀಯವಾದ ಇರಲು ಹೇಗೆ ಸಾಧ್ಯ? ಅದರರ್ಥವೇನೆಂದರೆ, ಅವರ ರಾಷ್ಟ್ರೀಯವಾದ ಸಮಾಜವನ್ನು ದಾರಿತಪ್ಪಿಸಲು ಬಂಡವಾಳ ಎಂದರ್ಥ.



ಕ್ರಿಸ್ತ ಬರಲಿದ್ದಾನೆ.... ಪಶ್ಚಿಮದ ಚೆಡ್ಡಿಗಳು

ಮೂಲಭೂತವಾದದ ಹಾವಳಿ ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ, ಮೂಲಭೂತವಾದದೊಂದಿಗೆ ಪ್ರಚಾರವಾಗುವ ಮೌಢ್ಯವೂ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ, ಭಾರತದಂತಹ ಮೂರನೇ ಪ್ರಪಂಚದ ಬಡ ದೇಶಗಳಲ್ಲಿ ಜನರ ದಿಕ್ಕು ತಪ್ಪಿಸಲು ಮೌಢ್ಯವನ್ನು ಮತ್ತು ಜನಾಂಗೀಯ ದ್ವೇಷವನ್ನೇ ಉಸಿರಾಡುವ ಸಂಘಟನೆಗಳು ಬಲಿಷ್ಠಗೊಳ್ಳುತ್ತಿರುವುದು ಎಲ್ಲಾ ಪತ್ರಿಕೆಗಳೂ ವರದಿ ಮಾಡುತ್ತವೆ.

ಆದರೆ ಜಗತ್ತಿಗೇ ನಾಗರೀಕತೆ ಕಲಿಸುತ್ತೇವೆಂಬ ದುರಹಂಕಾರದಿಂದ ಮೆರೆಯುವ ಪಶ್ಚಿಮದ ಬುದ್ಧಿಶಾಲಿಗಳು ಎಷ್ಟರಮಟ್ಟಿಗೆ ಆಧುನಿಕರು? ಎಷ್ಟರಮಟ್ಟಿಗೆ ಮೌಢ್ಯಕ್ಕೆ ಹೊರತಾದವರು? ಇದನ್ನು ಮಾತ್ರ ಯಾವ ಪತ್ರಿಕೆಗಳೂ ವರದಿ ಮಾಡುವುದಿಲ್ಲ. ಇಂದು ಪಶ್ಚಿಮದಲ್ಲಿ ಅಂದರೆ ಜಗತ್ತಿನ ಆಧುನಿಕತೆಯ ತವರೂರಾಗಿರುವ(!) ಅಮೆರಿಕಾ ಮತ್ತು ಯೂರೋಪಿನಲ್ಲಿ ಈಗ ಅತ್ಯಂತ ಜನಪ್ರಿಯವಾಗಿರುವ ರಾಜಕೀಯ ಸಿದ್ಧಾಂತವೆಂದರೆ "ಕ್ರಿಸ್ತ ಮರಳಿ ಬರುತ್ತಿದ್ದಾನೆ. ಆದ್ದರಿಂದ ಎಲ್ಲರೂ ಕ್ರಿಶ್ಚಿಯನ್ನರಾಗಬೇಕು" ಎಂದು ಪ್ರತಿಪಾದಿಸುವ ಕ್ರಿಶ್ಚಿಯನ್ ಜೇಯೋನಿಸ್ಟ್ ವಾದ. ಈ ವಾದಿಗಳು ಕ್ರಿಸ್ತ ಮತ್ತೆ ಹುಟ್ಟಿಬರಲಿದ್ದಾನೆ, ಅದೂ ಇಸ್ರೇಲಿನಲ್ಲೇ ಹುಟ್ಟಿಬರಲಿದ್ದಾನೆ, ಅಷ್ಟರೊಳಗೆ ಯಾರ್ಯಾರು ಕ್ರಿಶ್ಚಿಯನ್ನರಾಗಿರುತ್ತಾರೋ ಅವರೆಲ್ಲರನ್ನೂ ತಾನೇ ಕೈಹಿಡಿದು ಸ್ವರ್ಗಕ್ಕೆ ಕರೆದೊಯ್ಯುತ್ತಾನೆ ಎಂದು ಆಳವಾದ ನಂಬಿಕೆಯಿಂದ ಪ್ರಚಾರ ಮಾಡುತ್ತಿದ್ದಾರೆ. ಹೀಗಾಗಿ ಇಸ್ರೇಲಿನ ಯಹೂದಿಗಳಿಗೆ ಅವರ ಪ್ರಕಾರ ಇರುವುದು ಎರಡೇ ಅವಕಾಶ. ಒಂದೋ ಈ ಕೂಡಲೇ ಕ್ರಿಶ್ಚಿಯನ್ನರಾಗಿಬಿಡುವುದು. ಇಲ್ಲವೇ ಇಸ್ರೇಲಿನಲ್ಲೇ ನಿರ್ದಿಷ್ಟವಾದ ಜಾಗವೊಂದರಲ್ಲಿ ಸೈತಾನನ ಚಿತ್ರಹಿಂಸೆಗೆ ಗುರಿಯಾಗುವುದು. ಈ ಚಿತ್ರಹಿಂಸೆಯ ಜಾಗ ಯಾವುದೆಂಬುದನ್ನೂ ಈ ಜಿಯೋನಿಸ್ಟ್ ವಾದಿಗಳು ಗುರುತಿಸಿದ್ದಾರಂತೆ!

ಇಂತಹ ಅತ್ಯಂತ ಮೌಢ್ಯಭರಿತ ಸಿದ್ಧಾಂತವನ್ನು ಕನಿಷ್ಟ ಪಕ್ಷ ಹತ್ತು ಕೋಟಿ ಯೂರೋಪಿಯನ್ನರು ಅನುಸರಿಸುತ್ತಿದ್ದಾರಂತೆ. ಫ್ರಾನ್ಸ್‌ನಲ್ಲಿ ಅತ್ಯಂತ ಬಲಪಂಥೀಯ ಸರ್ಕೋಜಿ ಗೆದ್ದಿದ್ದು ಏಕೆ ಎಂದು ತಿಳಿಯಿತಲ್ಲವೇ?

Mirch Masala — ಮಿರ್ಚ್ ಮಸಾಲ

ಜೆಹಾದಿಗಳು ಮತ್ತು ಗಾಯತ್ರಿ ಮಂತ್ರ




ಸೆಪ್ಟೆಂಬರ್ 11ರ ನಂತರ ಜಗತ್ತಿನಾದ್ಯಂತ ಇಸ್ಲಾಮಿಕ್ ಉಗ್ರಗಾಮಿಗಳ ಬಗ್ಗೆ ಅತ್ಯಂತ ಆತಂಕ ಸೃಷ್ಟಿಯಾಗಿದೆಯಷ್ಟೇ. ಆ ಬಗೆಯ ಆತಂಕಕ್ಕೆ ಕಾರಣವಿಲ್ಲದ ದೇಶಗಳೂ ವಿನಾಃಕಾರಣ ತಮ್ಮ ತಮ್ಮ ದೇಶಗಳಲ್ಲಿ ಇಸ್ಲಾಮಿಕ್ ವಿರೋಧಿ ಕಾನೂನುಗಳನ್ನೊ ಮತ್ತೊಂದನ್ನೋ ಮಾಡುತ್ತಿದ್ದಾರೆ. ಕಾರಣವಿಷ್ಟೇ. ಜಗತ್ತೆಂದರೆ ಅಮೆರಿಕಾ. ಅಮೆರಿಕಾಕ್ಕೆ ಆತಂಕವೆಂದರೆ-ಜಗತ್ತಿಗೆ ಆತಂಕ. ಇಲ್ಲದಿದ್ದರೆ ಅಮೆರಿಕಾದಲ್ಲಿ ಸೆಪ್ಟೆಂಬರ್ 11ರ ದಾಳಿಗೆ ತುತ್ತಾದವರಲ್ಲಿ ಸೆಪ್ಟೆಂಬರ್ 18ರಂದು ಇಡೀ ಜಗತ್ತು ಒಂದು ನಿಮಿಷದ ಮೌನ ಆಚರಿಸುತ್ತಿತ್ತೇ? ಹಾಗೆ ನೋಡಿದರೆ ಅದಕ್ಕೆ ಒಂದು ವರ್ಷದ ಹಿಂದೆ ಗುಜರಾತಿನಲ್ಲಿ ಭೂಕಂಪ ಸಂಭವಿಸಿ 10 ಸಾವಿರಕ್ಕೂ ಹೆಚ್ಚು ಜನ ಅಸುನೀಗಿದ್ದರು. ಆಗಲೂ ಪ್ರಧಾನಿಯಾಗಿದ್ದ ವಾಜಪೇಯಿಯವರು ಅದನ್ನು ರಾಷ್ಟ್ರೀಯ ದುರಂತವೆಂತಲೂ ಪರಿಗಣಿಸಲಿಲ್ಲ, ಒಂದು ನಿಮಿಷದ ಮೌನವಿರಲಿ, ಒಂದು ಸೆಂಕೆಂಡಿನ ರಾಷ್ಟ್ರೀಯ ಮೌನಕ್ಕೂ ಆದೇಶ ನೀಡಲಿಲ್ಲ!

ಸೆಪ್ಟೆಂಬರ್ 11ರ ದಾಳಿಯ ನಂತರ ಅಮೆರಿಕದಲ್ಲಿ ಪ್ರಪಂಚದ ಎಲ್ಲಾ ಭದ್ರತಾ ಸಲಹೆಗಾರರ ಸಮ್ಮೇಳನವೊಂದನ್ನು ಕರೆಯಲಾಗಿತ್ತಂತೆ. ಅದರಲ್ಲಿ ಭಾರತದಿಂದ ಎಸ್.ಕೆ. ನಾರಾಯಣ್ ಎಂಬ ಭದ್ರತಾ ಸಲಹೆಗಾರರೊಬ್ಬರು ಭಾಗವಹಿಸಿದ್ದರು. ಅವರು ಇಸ್ಲಾಮಿಕ್ ಭಯೋತ್ಪಾದನೆಯ ಆತಂಕದಿಂದ ಜಗತ್ತನ್ನು ಮುಕ್ತಗೊಳಿಸಲು ಒಂದು ಅತ್ಯದ್ಭುತವಾದ ಸಲಹೆ ಮುಂದಿಟ್ಟಿದ್ದಾರೆ. ಅಂದು ಅವರು ಮಾಡಿದ ಭಾಷಣದ ಒಂದು ತುಣುಕು ಇಲ್ಲಿದೆ :

"ಈ ಇಸ್ಲಾಮಿಕ್ ಭಯೋತ್ಪಾದನೆಯಂತಹ ಧಾರ್ಮಿಕ ಭಯೋತ್ಪಾದನೆ ನಮ್ಮ ದೇಶಕ್ಕೆ ಹೊಸದೇನೂ ಅಲ್ಲ, ನಮ್ಮ ದೇಶ ಬಹಳ ವರ್ಷಗಳಿಂದ ಅಂತಹ ಭಯೋತ್ಪಾದನೆಗೆ ತುತ್ತಾಗಿದೆ. ಈ ಧಾರ್ಮಿಕ ಭಯೋತ್ಪಾದನೆಯ ಹಿಂದಿರುವ ಇಸ್ಲಾಮಿಕ್ ಧರ್ಮದಲ್ಲೇ ಇಂತಹ ಭಯೋತ್ಪಾದನೆಗೆ ಪ್ರಚೋದನೆಯಿದೆ. ಇಸ್ಲಾಮಿಕ್ ಧರ್ಮದಲ್ಲೇ ಭಯೋತ್ಪಾದನೆಯಿದೆ ಮತ್ತು ಅನಾಗರಿಕತೆಯಿದೆ. ಹೀಗಾಗಿ ಅದನ್ನು ಪ್ರಜಾತಾಂತ್ರಿಕ ಮಾರ್ಗಗಳಿಂದ ಬಗ್ಗುಬಡಿಯಲು ಸಾಧ್ಯವಿಲ್ಲ, ಇಂತಹ ಅಸಾಧಾರಣ ಸಮಸ್ಯೆಗೆ ಅಸಮಾನ್ಯವಾದ ಪರಿಹಾರವನ್ನೇ ಹುಡುಕಿಕೊಳ್ಳಬೇಕು. ಅದರಲ್ಲಿ ಒಂದು ಈಗ ಭಯೋತ್ಪಾದನೆಯ ವಿರುದ್ಧ ಯುದ್ಧ ನಡೆಸುತ್ತಿರುವ ಅಮೆರಿಕದ ಮಾರ್ಗವೂ ಒಂದಾಗುತ್ತದೆ." ಆದರೆ ಅವರು ಅಷ್ಟಕ್ಕೇ ನಿಲ್ಲಿಸಲಿಲ್ಲ, ಮಿಲಿಟರಿ ಮಾರ್ಗದ ಜೊತೆಜೊತೆಗೆ "ಈ ಇಸ್ಲಾಮಿಕ್ ಜೆಹಾದಿಗಳನ್ನು ತಡೆಯಲು ಇರುವ ಏಕೈಕ ಮಾರ್ಗವೆಂದರೆ ಗಾಯತ್ರಿಮಂತ್ರ ಜಪಿಸುವುದು" ಎಂಬ ಅತ್ಯದ್ಭುತ ಸಲಹೆ ನೀಡಿದ್ದಾರೆ. ಭಾರತ ಸರ್ಕಾರ ಇದನ್ನು ಪಾಲಿಸಿದರೆ ಕನಿಷ್ಟಪಕ್ಷ ದೇಶಾದ್ಯಂತ ಶಾಲೆ ಹಾಗೂ ಆಸ್ಪತ್ರೆಗಳನ್ನು ನಿರ್ಮಿಸಲು ದುಡ್ಡು ಉಳಿಸಬಹುದು!



ರಾಮಚಂದ್ರ ಗುಹಾ ಎಂಬ ಭಾರತದ ದುರಂತ



ಈ ದೇಶದಲ್ಲಿ ಈಗ ಯಾರು ಬೇಕಾದರೂ ಇತಿಹಾಸಕಾರರಾಗಬಹುದು. ಅದರಲ್ಲೂ ಪ್ರಖ್ಯಾತರಾಗಿದ್ದರೆ ಸಾಕು. ಅವರು ಹೇಳಿದ್ದೇ ಸಿದ್ಧಾಂತ, ಬರೆದಿದ್ದೇ ವೇದಾಂತ. ಇತಿಹಾಸವನ್ನು ಒಂದು ಅಧ್ಯಯನ ಶಿಸ್ತಾಗಿ ಕಲಿಯಬೇಕೆಂಬ ಮತ್ತು ಅರಿತುಕೊಳ್ಳಬೇಕೆಂಬ ಇಲ್ಲದಿದ್ದರೆ ಅಭಿಪ್ರಾಯಗಳು ಹಾಗೂ ಪೂರ್ವಾಗ್ರಹಗಳೇ ಇತಿಹಾಸವಾಗಿಬಿಡುತ್ತದೆಂಬ ಯಾವ ಪ್ರಾಥಮಿಕ ಇತಿಹಾಸ ಗ್ರಹಿಕೆಗಳೂ ಅವರಿಗೆ ಅನ್ವಯವಾಗುವುದಿಲ್ಲ, ಇತಿಹಾಸವನ್ನು ಅರಿಯಲು ಒಂದು ಪ್ರಾಪಂಚಿಕ ದೃಷ್ಟಿಕೋನವೂ ಬೇಕೆಂಬುದನ್ನು ನಿರಾಕರಿಸುವುದು, ಆ ಮೂಲಕ ತಮ್ಮ ಪ್ರಾಪಂಚಿಕ ದೃಷ್ಟಿಕೋನವನ್ನು ಎಲ್ಲಕ್ಕಿಂತ ಶ್ರೇಷ್ಠಮಟ್ಟಕ್ಕೇರಿಸಿಕೊಳ್ಳುವುದು ಈಗ ಫ್ಯಾಶನ್ ಆಗಿಬಿಟ್ಟಿದೆ.

ಇಷ್ಟೆಲ್ಲಾ ಏಕೆ ಹೇಳಬೇಕಾಯಿತೆಂದರೆ, ರಾಮಚಂದ್ರ ಗುಹಾ ಎಂಬ ಹವ್ಯಾಸಿ ಪತ್ರಕರ್ತ ಮತ್ತು ವಿನಾಕಾರಣ ಪ್ರಖ್ಯಾತಿ ಪಡೆದಿರುವ ಬರಹಗಾರರೊಬ್ಬರು ಭಾರತದ ಸಮಕಾಲೀನ ಇತಿಹಾಸದ ಬಗ್ಗೆ ಇಂಡಿಯಾ ಆಫ್ಟರ್ ಗಾಂಧಿ ಎಂಬ ಪುಸ್ತಕ ಬರೆದಿದ್ದಾರೆ. ಈ ಪುಸ್ತಕದ ಬಿಡುಗಡೆ ಸಮಾರಂಭ ಇತ್ತೀಚೆಗೆ ಬೆಂಗಳೂರಿನ ವಿಂಡ್ಸರ್ ಮ್ಯಾನರ್ ಎಂಬ ಪಂಚತಾರಾ ಹೋಟೆಲಿನಲ್ಲಿ ನಡೆಯಿತು. ಅದನ್ನು ಬಿಡುಗಡೆ ಮಾಡಿದವರು ನಂದನ್ ನಿಲೇಕಣಿ ಎಂಬ ಐಟಿ ಶ್ರೀಮಂತ. ಭಾಗವಹಿಸಿದ್ದವರೆಲ್ಲರೂ ಕನಿಷ್ಟ ಮೇಲ್ಮಧ್ಯಮ ವರ್ಗದವರು, ಉದ್ಯಮಿಗಳು, ಶ್ರೀಮಂತರು.... ತಥಾಕಥಿತ ಗಣ್ಯರು. ವಾಸ್ತವವಾಗಿ ಇಂಡಿಯಾ ಆಫ್ಟರ್ ಗಾಂಧಿ ಎಂದರೆ ಇವರಲ್ಲ, ವಿಂಡ್ಸರ್ ಮ್ಯಾನರ್‌ನ ಗೇಟನೊಳಗೂ ಪ್ರವೇಶಿಸಲು ಅನರ್ಹರಾಗಿರುವ ಕೋಟ್ಯಂತರ ಮಂದಿಗೆ ವಿಂಡ್ಸರ್ ಮ್ಯಾನರ್ ಒಳಗೂ ಅವಕಾಶವಿರಲಿಲ್ಲ, ರಾಮಚಂದ್ರ ಗುಹಾರವರ ಪುಸ್ತಕದೊಳಗೂ ಅವಕಾಶವಿರಲಿಲ್ಲ. ಗಾಂಧಿಯ ನಂತರ ಹಿಂದೆಂದೂ ಇಲ್ಲದ ರೀತಿ ಈ ದೇಶದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ, ಕಾರ್ಮಿಕರು, ಕೂಲಿಗಳು ಬಿಕಾರಿಗಳಾಗುತ್ತಿರುವ ಈ ಸಂದರ್ಭದಲ್ಲಿ, ದೇಶದ ಸಾರ್ವಭೌಮತೆಯನ್ನು ಅಮೆರಿಕಕ್ಕೆ ಹರಾಜು ಮಾಡಿಕೊಂಡಿರುವ ಸಂದರ್ಭದಲ್ಲಿ, ಎನ್‌ಕೌಂಟರ್‌ಗಳೇ ಈ ದೇಶದ ಪ್ರಜಾತಂತ್ರವನ್ನು ಅಣಕಿಸುತ್ತಿರುವ ಸಂದರ್ಭದಲ್ಲಿ ಶ್ರೀಮಾನ್ ರಾಮಚಂದ್ರ ಗೂಹಾರವರು ಭಾರತದ ಪ್ರಜಾತಂತ್ರ ಅತ್ಯದ್ಭುತವೆಂದು ವರ್ಣಿಸುತ್ತಾರೆ. ನವ ಉದಾರವಾದವೆಂಬ ಅಪ್ಪಟ ಬಂಡವಾಳಶಾಹಿ ಸಿದ್ಧಾಂತ ಈ ದೇಶವನ್ನು ಆಳುತ್ತಿರುವಾಗ ಮತ್ತು ಅದೇ ಈ ದೇಶದ ಆಳುವ ವರ್ಗಗಳ ಅಧಿಕೃತ ಸಿದ್ಧಾಂತವಾಗಿರುವಾಗ ಈ ಯಾವುದೇ ಸಿದ್ಧಾಂತವಿಲ್ಲದಿರುವುದೇ "ಈ ದೇಶದ ಪ್ರಜಾತಂತ್ರದ ಉಳಿವಿನ ಹಿಂದಿರುವ ಗುಟ್ಟು" ಎಂದು ಈ ಇತಿಹಾಸಕಾರ ಸಂಭ್ರಮಿಸುತ್ತಾರೆ.

ಅಷ್ಟು ಮಾತ್ರವಲ್ಲ, ಒಂದು ದೇಶ ದೇಶವಾಗಿ ಉಳಿಯಲು ಆ ದೇಶದ ಜನತೆಯ ಅಭ್ಯುದಯ ಮತ್ತು ಒಟ್ಟಾಗಿ ಉಳಿಯಬೇಕೆಂಬ ರಾಜಕೀಯ ಆಶಯ ಪ್ರಧಾನವಾಗಿರಬೇಕು. ಆದರೆ ಈ ನಮ್ಮ ಅರೆ ಜರ್ನಲಿಸ್ಟ್ ಹಾಗೂ ಅರೆ ಇತಿಹಾಸಕಾರ ರಾಮಚಂದ್ರ ಗುಹಾ ಪ್ರಕಾರ ಈ ದೇಶ ದೇಶವಾಗಿ ಉಳಿಯಲು ಆರು ಕಾರಣಗಳಿವೆಯಂತೆ. 1. ಬ್ರಿಟಿಷರ ಬಳುವಳಿಯಾಗಿ ಉಳಿದುಬಂದಿರುವ ಕ್ರಿಕೆಟ್ 2. ಹಿಂದಿ ಸಿನಿಮಾ 3. ಸಮಗ್ರತೆಯ ಐಕ್ಯತೆ 4. ಸರ್ವಮಾನ್ಯತೆಯುಳ್ಳ ಪ್ರಭುತ್ವ 5. ಧಾರ್ಮಿಕ ಬಾಹುಳ್ಯ ಮತ್ತು ೬. ಭಾಷಾ ಬಾಹುಳ್ಯ

ಈ ಇತಿಹಾಸಕಾರರ ಇತಿಹಾಸ ಪ್ರಜ್ಞೆ ಇನ್ನೂ ಮುಂದುವರಿದು ಪ್ರವಾದಿ ಸ್ವರವನ್ನು ಪಡೆಯುತ್ತದೆ. ಆ ಪುಸ್ತಕದ ಅಂತಿಮ ವಾಕ್ಯ ಹೀಗೆ ಹೇಳುತ್ತದೆ : "ಎಲ್ಲಿಯತನಕ ಈ ದೇಶದ ಜನ ಹಿಂದಿ ಚಿತ್ರಗಳನ್ನು ನೋಡುತ್ತಿರುತ್ತಾರೋ, ಹಿಂದಿ ಹಾಡುಗಳನ್ನು ಹಾಡುತ್ತಿರುತ್ತಾರೋ ಅಲ್ಲಿಯ ತನಕ ಭಾರತ ಉಳಿದಿರುತ್ತದೆ".

ಈ ಪುಸ್ತಕ ಓದುತ್ತೀರೋ, ಬಿಡುತ್ತೀರೋ ನಿಮಗೇ ಬಿಟ್ಟದ್ದು.

ಮನೆಯೇ ಜೈಲು, ಪತ್ನಿಯೇ ಖೈದಿ!

ರಾಕ್ಷಸ ಇನ್ಸ್‌ಪೆಕ್ಟರ್ ಶ್ರೀನಿಧಿ





ಜ್ಯೋತಿಶ್ರೀ

ಗುದ್ದಿದ ಏಟಿಗೆ ಎಡಗೆನ್ನೆಯಿಡೀ ಕಪ್ಪಿಟ್ಟಿದೆ. ಕಣ್ಣಿನ ಸುತ್ತ ರಕ್ತ ಹೆಪ್ಪುಗಟ್ಟಿದ್ದು ತಲೆ ತುಂಬ ಬಾವು ಗುಳ್ಳೆಗಳು ಮತ್ತು ಬೆನ್ನು, ತೋಳು, ಅಂಗೈ ಎಲ್ಲೆಂದರಲ್ಲಿ ಬಾಸುಂಡೆಗಳು. ಚೀರಾಡುತ್ತಿದ್ದ ಮಗುವನ್ನೇ ಗೋಡೆಗೆ ತಳ್ಳಿ, ತನ್ನ ಪತ್ನಿಯನ್ನು ಅಷ್ಟೊಂದು ಅಮಾನುಷವಾಗಿ ಹಿಂಸಿಸುತ್ತಿದ್ದವನು ಫ್ರೇಜರ್‌ಟೌನ್ ಇನ್ಸ್‌ಪೆಕ್ಟರ್ ಎನ್. ಶ್ರೀನಿಧಿ!

ದಾರುಣವೆಂದರೆ ಹಾಗೇ ತನ್ನ ಪತ್ನಿಯನ್ನು ಆತ ಮೃಗೀಯವಾಗಿ ಹಿಂಸಿಸುತ್ತಿದ್ದರೆ ಆತನ ಐವತ್ತೈದರ ತಾಯಿ ಜಯಲಕ್ಷ್ಮಮ್ಮ 'ಹೊಡೀ.... ಮುಂಡೆಗೆ ಕೊಬ್ಬು ಇಳಿಸು' ಎಂದು ಪ್ರೋತ್ಸಾಹಿಸಿದ್ದಾಳೆ.

ಇನ್ಸ್‌ಪೆಕ್ಟರ್ ಶ್ರೀನಿಧಿಯ ಅಣ್ಣ ನಲವತ್ತೊಂರರ ವಯಸ್ಸಿನ ಶ್ರೀನಿವಾಸ, ಆತನ ಪತ್ನಿ ತ್ರಿವೇಣಿ; ಯಾರೂ ಒದೆ ತಾಳಲಾರದೇ ಚೀರಾಡುತ್ತಿದ್ದ ಜ್ಯೋತಿಶ್ರೀಯ ರಕ್ಷಣೆಗೆ ಬರುವುದಿರಲಿ, ಬದಲಾಗಿ ಇನ್ನಷ್ಟು ಹಿಂಸಿಸುವಂತೆ ಛೇಡಿಸುತ್ತಿದ್ದಾರೆ. ಸರಿಸುಮಾರು ಮೂವತ್ತರ ಹರೆಯದ, ಒಂದು ಮಗುವಿನ ತಾಯಿ ಜ್ಯೋತಿಶ್ರೀ ಹಿಂಸೆ ತಾಳದೇ ಪ್ರಜ್ಞೆ ತಪ್ಪಿ ಬಿದ್ದರೆ ಆ ಮನೆಯ ಯಾರೊಬ್ಬರೂ ಆಕೆಯ ಮುಖದ ಮೇಲೆ ನೀರು ಚಿಮುಕಿಸುವುದಿಲ್ಲ, ಆಕೆಯನ್ನು ಆಸ್ಪತ್ರೆಗೆ ಸಾಗಿಸುವುದಿಲ್ಲ, ತಮ್ಮ ಪಾಡಿಗೆ ತಾವು ತಿಂಡಿ ತಿನ್ನುವುದರಲ್ಲಿ ಮಗ್ನರಾಗಿಬಿಡುತ್ತಾರೆ!


ಶ್ರೀನಿವಾಸ

ಇದು ವಿಜಯನಗರದ ಆರ್.ಪಿ.ಸಿ. ಲೇಔಟಿನ 3 ನೇ ಮೈನ್, 7 ನೇ 'ಬ' ಕ್ರಾಸ್‌ನ 2126 ನೇ ನಂಬರ್ ಮನೆಯಲ್ಲಿ ಅಂದರೆ ಇನ್ಸ್‌ಪೆಕ್ಟರ್ ಶ್ರೀನಿಧಿ ಸಾಹೇಬನ ಸಂಸಾರದಲ್ಲಿ ಇದೇ 2007 ರ ಮೇ 13 ರ ಬೆಳಿಗ್ಗೆ ಸಂಭವಿಸಿದ ಘಟನೆ.

ಹೊಡೆದವನು ಕಾನೂನು ಪರಿಪಾಲಕ. ಹಿಂಸೆ ಗೀಡಾದವಳು ಆತನ ಕೈಹಿಡಿದ ಪತ್ನಿ. ಆತನ ತಾಯಿ, ಅಣ್ಣ, ಅತ್ತಿಗೆ ಯಾರೂ ಚೀರಾಡುತ್ತಿದ್ದ ಆಕೆಯ ನೆರವಿಗೆ ಬರುವುದಿಲ್ಲ ಅಂದರೆ, ಇನ್ಸ್‌ಪೆಕ್ಟರ್ ಒಬ್ಬ ತನ್ನದೇ ಮಗುವನ್ನು ಗೋಡೆಗೆ ತಳ್ಳಿ ಹೆಂಡತಿಯನ್ನು ಹಿಂಸಿಸುತ್ತಾನೆಂದರೆ ಅಂಥವರನ್ನು ಯಾರಾದರೂ ಮನುಷ್ಯರೆನ್ನಲು ಸಾಧ್ಯವೆ? ಇನ್ನು ಆ ಮನೆಯ ವಾತಾವರಣ, ಅಲ್ಲಿದ್ದವರ ಮನಸ್ಥಿತಿ ಅದೆಷ್ಟು ಕರಾಳ? ಅಂಥವರ ಮಧ್ಯೆ ಕಳೆದ ಒಂಭತ್ತು ವರ್ಷಗಳಿಂದ ನರಳಿದ ಜ್ಯೋತಿಶ್ರೀಯ ಬದುಕು ಅದೆಷ್ಟು ಬರ್ಬರ?

ಇದು ಫ್ರೇಜರ್‌ಟೌನ್ ಇನ್ಸ್‌ಪೆಕ್ಟರ್ ಶ್ರೀನಿಧಿಯ ಪತ್ನಿ ಜ್ಯೋತಿಶ್ರೀಯ ಪಾಡಷ್ಟೇ ಅಲ್ಲ; ಕೆಲ ಪೊಲೀಸರಿಗೆ ಈ ಥರದ ಮನಸ್ಥಿತಿಯೊಂದು ಖಾಕಿಯ ಜೊತೆಗೇ ರಕ್ತಗತವಾಗಿ ಬಿಡುತ್ತದೆ. ಗೋವಿಂದ್ ನಿಹಲಾನಿಯ 'ಅರ್ಧಸತ್ಯ' ಚಿತ್ರದಲ್ಲಿ ಇನ್ಸ್‌ಪೆಕ್ಟರ್ ಓಂಪುರಿಯ ಪೊಲೀಸ್ ತಂದೆ ಪ್ರತಿನಿತ್ಯ ಕುಡಿದು ತನ್ನ ಪತ್ನಿಯನ್ನು ಪೀಡಿಸುತ್ತಾನಲ್ಲ; ಅಂಥದ್ದೇ ಮನಸ್ಥಿತಿಯದು!

ಇಂಥ ಪೊಲೀಸ್ ಮೆಂಟಾಲಿಟಿಗೆ ಇನ್ಸ್‌ಪೆಕ್ಟರ್ ಶ್ರೀನಿಧಿ ನಿದರ್ಶನವಷ್ಟೇ.

ಕುದುರೆಮುಖ ಕಾಡಿನಲ್ಲಿ ನಕ್ಸಲ್ ನಾಯಕ ಸಾಕೇತ್ ರಾಜನ್‌ನನ್ನು ಇದೇ ಇನ್ಸ್‌ಪೆಕ್ಟರ್ ಶ್ರೀನಿಧಿ ಗುಂಡಿಟ್ಟು ಕೊಂದಾಗ ಸರ್ಕಾರ ಈತನನ್ನು ಮಹಾನ್ ವೀರನೆಂದು ಘೋಷಿಸಿತು. ರಾಷ್ಟ್ರಪತಿ ಪದಕವೂ ಬಂತು. ಅರಣ್ಯವಾಸಿ ಗಿರಿಜನರನ್ನು ಸಂಘಟಿಸುತ್ತಾ, ಸಭೆ ಮುಗಿಸಿ ಬರುತ್ತಿದ್ದ ಕಾಮ್ರೇಡ್ ಸಾಕೇತ್ ರಾಜನ್, ಕಾಮ್ರೇಡ್ ಶಿವಲಿಂಗುರನ್ನು ಇನ್ಸ್‌ಪೆಕ್ಟರ್ ಶ್ರೀನಿಧಿ ಮನಸ್ಸು ಮಾಡಿದ್ದರೆ ಜೀವಂತವಾಗಿ ಸೆರೆಹಿಡಿಯಬಹುದಿತ್ತು. ಶರಣಾಗುವಂತೆ ಒತ್ತಾಯಿಸಿದರೆ ಸಾಕೇತ್ ಬೇರೇನೂ ತಾನೇ ಮಾಡಲು ಸಾಧ್ಯವಿತ್ತು?

ಆದರೆ ಶ್ರೀನಿಧಿಗೆ ಕೊಲ್ಲಲೇಬೇಕಿತ್ತು, ಅದು ಆತನ ವಿಕೃತ ಬುದ್ಧಿಯ ಪ್ರತಿಫಲವಷ್ಟೇ. ನಕಲಿ ಎನ್‌ಕೌಂಟರ್ ವಿರುದ್ಧ ಮಾನವಹಕ್ಕು ಹೋರಾಟಗಾರರು ಅದೆಷ್ಟೇ ಪ್ರತಿಭಟಿಸಿದಾಗಲೂ ಸರ್ಕಾರದ ಕಣ್ಣಿಗೆ ಮಾತ್ರ ಶ್ರೀನಿಧಿ ವೀರಯೋಧನಾಗಿದ್ದ. ಇಂಥವನ ಪೌರುಷ ಈಗ ಕೈಹಿಡಿದ ಹೆಂಡತಿಯ ಮೇಲೆ ತಿರುಗಿದೆ.


ತ್ರಿವೇಣಿ

ಅಷ್ಟಕ್ಕೂ ಈ ಶ್ರೀನಿಧಿ ಎಂಥಾ ವ್ಯಕ್ತಿಯೆಂದು ಕೆದಕಿದಂತೆಲ್ಲ ಅನಾಹುತಕಾರಿ ಸತ್ಯಗಳೇ ಹೊರಬೀಳುತ್ತವೆ. ಮೂಲತಃ ದೊಡ್ಡಬಳ್ಳಾಪುರ ತಾಲ್ಲೂಕು ಮರಳೇನಹಳ್ಳಿಯ ನಾರಾಯಣಸ್ವಾಮಿ ಎಂಬ ಪಿಡಬ್ಲ್ಯೂಡಿ ಇಂಜಿನಿಯರ್‌ನ ಎರಡನೇ ಮಗನೇ ಈ ಶ್ರೀನಿಧಿ. ಹಾಸನದಲ್ಲಿ ಇಂಜಿನಿಯರಿಂಗ್ ಮುಗಿಸಿ 1994 ರ ಹೊತ್ತಿಗೆ ಸಬ್‌ಇನ್ಸ್‌ಪೆಕ್ಟರ್ ಆಗಿ ಖಾಕಿ ತೊಟ್ಟವನು ಎಲ್ಲೂ ನಾಲ್ಕು ಮಂದಿ ಒಪ್ಪುವಂತೆ ಕೆಲಸ ಮಾಡಿದ್ದಿಲ್ಲ, ಪ್ರತಿ ಸಂಜೆಯಾದರೆ ವಿಸ್ಕಿ ಬೇಕೇಬೇಕು!

ಈತನ ಅಣ್ಣ ಶ್ರೀನಿವಾಸ್ ವಿದ್ಯಾವಂತನಾದರೂ ಕೆಲಸವಿಲ್ಲ, ಪ್ರಾರಂಭದಲ್ಲಿ ಕಡೂರು ತಾಲ್ಲೂಕು ಸಿಂಗಟಗೆರೆ ಠಾಣೆಗೆ ಎಸ್ಸೈ ಆದ ಶ್ರೀನಿಧಿ ಮೂಡಿಗೆರೆ ಪೊಲೀಸ್ ಠಾಣೆಗೆ ಬರುವ ಹೊತ್ತಿಗೆ ಖಾಕಿಯ ಎಲ್ಲಾ ಅವಗುಣಗಳನ್ನೂ ಮೈಗೂಡಿಸಿಕೊಂಡಿದ್ದ. ಪೊಲೀಸರನ್ನು ಕಂಡರೇನೇ ಜನ ಉಚ್ಚೆ ಹೊಯ್ಕೋಬೇಕು ಕಣ್ರೀ ಎಂದು ಪೇದೆಗಳಿಗೆ ಬೋಧಿಸುತ್ತಿದ್ದ. ದೂರು ಕೊಡಲು ಬಂದಿದ್ದ ಸಿಪಿಐ ಪಕ್ಷದ ಕಾಮ್ರೇಡ್ ಒಬ್ಬರನ್ನೇ ಲಾಕಪ್ಪಿಗೆ ಹಾಕಿ ಬಡಿದ. ಈತನ ವಿರುದ್ಧ ಜನ ಪ್ರತಿಭಟಿಸಿದ್ದರಿಂದ ಸರ್ಕಾರ ಎತ್ತಿ ಬೆಂಗಳೂರಿನ ವಿಜಯನಗರ ಟ್ರಾಫಿಕ್ಕಿಗೆ ಹಾಕಿತು.

ಹಾಗೇ ವಿಜಯನಗರ ಟ್ರಾಫಿಕ್ಕಿಗೆ ಬಂದ ಶ್ರೀನಿಧಿ ಬಂದು ಬಂದವನೇ ಫುಟ್‌ಪಾತ್ ವ್ಯಾಪಾರಿಗಳನ್ನು ಪೀಡಿಸಲಾರಂಭಿಸಿದ. ಈತನ ಹಾವಳಿಯ ವಿರುದ್ಧ ಆಗಿನ್ನೂ ಕೌನ್ಸಿಲರ್ ಆಗಿರದ ಆರ್.ಪಿ.ಸಿ. ಲೇಔಟಿನ ಜಯರಾಮ್ ನೂರಾರು ಜನರನ್ನು ಸಂಘಟಿಸಿ ಠಾಣೆಗೆ ಮುತ್ತಿಗೆ ಹಾಕಿದ್ದರು.

ಅಲ್ಲಿಂದ ಕಮರ್ಷಿಯಲ್ ಸ್ಟ್ರೀಟ್ ಠಾಣೆಗೆ ಬಂದ ಶ್ರೀನಿಧಿ ಅಲ್ಲಿ ಎಂಥಾ ಅನಾಹುತವೆಸಗಿದನೆಂದರೆ ಮರ್ಯಾದಸ್ಥ ಕುಟುಂಬ ಹೆಂಗಸೊಬ್ಬಳನ್ನು ವೇಶ್ಯಾವಾಟಿಕೆ ನಡೆಸುತ್ತಾಳೆಂದು ಖೊಟ್ಟಿ ಕೇಸು ಹಾಕಿ ಪೀಡಿಸಿದ. ಈ ಕಾರಣಕ್ಕೇ ಇಲಾಖೆಯಿಂದ ಸಸ್ಪೆಂಡಾದ. ಆನಂತರ ಬಡ್ತಿಗೊಂಡು ಅಲಸೂರು ಠಾಣೆಗೆ ಬಂದು ಅಲ್ಲಿ ಎರಡನೇ ಬಾರಿಗೆ ಸಸ್ಪೆಂಡಾದ. ಕೊನೆಗೆ ಬಿಎಂಟಿಸಿ ಟಾಸ್ಕ್ ಫೋರ್ಸ್‌ಗೆ ಎತ್ತಂಗಡಿಯಾದ. ಅಲ್ಲಿಂದ ಮಧುಕರ್ ಶೆಟ್ಟಿ ನಕ್ಸಲ್ ನಿಗ್ರಹದಳಕ್ಕೆ ಬಂದವನು ಅನ್ಯಾಯವಾಗಿ ಕಾಮ್ರೇಡ್ ಸಾಕೇತ್‌ರಾಜನ್ ಮತ್ತು ಶಿವಲಿಂಗುರನ್ನು ಗುಂಡಿಟ್ಟು ಕೊಂದ.


ಜಯಲಕ್ಷ್ಮಮ್ಮ

ಇದು ಶ್ರೀನಿಧಿಯ ಸಂಕ್ಷಿಪ್ತ ಇತಿಹಾಸವಾದರೆ ಇಂಥವನನ್ನು ಬಿಜೆಪಿ ಶಾಸಕ ಸಿ.ಟಿ. ರವಿಯಂಥವರು ಹೊತ್ತು ಮೆರೆಸಿದ್ದು ಮತ್ತೊಂದು ದುರಂತ. ನಕ್ಸಲ್ ಕಾಮ್ರೇಡುಗಳನ್ನು ಕೊಂದ ಖುಷಿಗೆ ಎಮ್ಮೆಲ್ಲೆ ಸಿ.ಟಿ. ರವಿ ಈತನನ್ನು ಬೆಂಗಳೂರಿನ ಭಾರತಿನಗರದ ಮಾರ್ವಾಡಿ ಶಾಸಕ ನಿರ್ಮಲ್‌ಕುಮಾರ್ ಸುರಾನನಿಗೆ ಪರಿಚಯಿಸಿದ್ದಾರೆ. ತನ್ನ ಸಿಂಗಲ್ ನಂಬರ್ ಲಾಟರಿ ದಂಧೆಗೆ ನೆರವಾಗಲೆಂದೇ ಶ್ರೀನಿಧಿಯನ್ನು ಸುರಾನಾ ಫ್ರೇಜರ್‌ಟೌನ್ ಪೊಲೀಸ್ ಠಾಣೆಗೆ ಹಾಕಿಸಿಕೊಂಡಿದ್ದಾನೆ.

ತನ್ನ ಸರ್ವೀಸಿನುದ್ದಕ್ಕೂ ಪ್ರಜಾಕಂಟಕನಾಗೇ ಬೆಳೆದವನು ಶ್ರೀನಿಧಿ. ಇಂಥವನ ಕೈಗೆ ಸಿಕ್ಕವಳು ಜ್ಯೋತಿಶ್ರೀ. ಈಕೆ ಮೂಡಿಗೆರೆಯ ಕಾಫಿ ಪ್ಲಾಂಟರ್ ಮಂಜುನಾಥ್ ಎಂಬುವವರ ಒಬ್ಬಳೇ ಮಗಳು. ಮುದ್ದಿನ ಮಗಳು. ಸಣ್ಣದೊಂದು ಕಾಫಿ ತೋಟವಿದ್ದ, ಮೂಡಿಗೆರೆಯಲ್ಲಿ 'ಸ್ನೇಹಾ ಬಾರ್' ನಡೆಸಿಕೊಂಡಿದ್ದ ಮಂಜುನಾಥ್ ಸುಸಂಸ್ಕೃತರು ಅವರ ಗಂಡು ಮಕ್ಕಳಿಬ್ಬರೂ ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಿದ್ದರು. ಮೂಡಿಗೆರೆಯಲ್ಲೇ ಪಿಯುಸಿ ಮುಗಿಸಿದ ಜ್ಯೋತಿಶ್ರೀಯನ್ನು 1998 ರ ಜೂನ್ ತಿಂಗಳಲ್ಲಿ ಶ್ರೀನಿಧಿಗೆ ಅದ್ದೂರಿಯಾಗೇ ಮದುವೆ ಮಾಡಿಕೊಟ್ಟಿದ್ದಾರೆ.

ಬಹುಶಃ ಅವತ್ತೇ ಆಕೆಯ ಅದೃಷ್ಟದ ಅಕೌಂಟು ಖಾಲಿಯಾಗಿರಬೇಕು!

ಶ್ರೀನಿಧಿ ಹುಟ್ಟಾ ಸ್ಯಾಡಿಸ್ಟ್. ವಿಜಯನಗರದ ಬಂಟ್ಸ್ ಸಂಘದ ಹಾಲ್‌ನಲ್ಲಿ ಮದುವೆಯಾಗಿದ್ದೇ ಕೊನೆ ಜ್ಯೋತಿಶ್ರೀ ಇನ್ಯಾವತ್ತೂ ನಗಲೇ ಇಲ್ಲ, ಶ್ರೀನಿಧಿಗೆ ತನ್ನ ಪತ್ನಿಯ ಮೇಲೆಯೇ ವಿನಾಕಾರಣದ ಗುಮಾನಿ. ತಾನು ಡ್ಯೂಟಿಯ ಮೇಲೆ ಹೊರಗಿದ್ದಾಗ ಆಕೆ ಊರು ಸುತ್ತಲು ಹೊರಡುತ್ತಾಳೆಂಬ ಅನುಮಾನ. ಆ ಕಾರಣಕ್ಕೇ ತನ್ನ ತಾಯಿ ಜಯಲಕ್ಷ್ಮಮ್ಮನನ್ನು ತಂದು ಆಕೆಯ ಕಾವಲಿಗಿಟ್ಟ. ಜೊತೆಗೆ ಅಣ್ಣ ಶ್ರೀನಿವಾಸ ಮತ್ತು ಆತನ ಪತ್ನಿ ತ್ರಿವೇಣಿಯನ್ನೂ ತಂದು ಅದೇ ಮನೆಯಲ್ಲಿಟ್ಟ.

ಜ್ಯೋತಿಶ್ರೀಯ ಪಾಲಿಗೆ ಮನೆಯೇ ಜೈಲಾಗಿ ಹೋಯಿತು. ಅನುಮಾನದ ಗಂಡ, ಪೀಡಕ ಅತ್ತೆ ದುಷ್ಟ ಭಾವ, ಕಾಟದ ಓರಗಿತ್ತಿ. ಮೊದಲೇ ಕೆಲಸವಿಲ್ಲದ ಅಣ್ಣ ಶ್ರೀನಿವಾಸ ತನ್ನೆಲ್ಲಾ ಚಾಕರಿಯನ್ನು ಜ್ಯೋತಿಶ್ರೀ ಕೈಯಲ್ಲೇ ಮಾಡಿಸುತ್ತಿದ್ದ. ಮಾತು ಮಾತಿಗೆ ಅತ್ತೆ ಜಯಲಕ್ಷ್ಮಮ್ಮ ನಿಂದಿಸುತ್ತಿದ್ದಳು. ಗಂಡನ ಚಾಕರಿಯಷ್ಟೇ ಅಲ್ಲ, ಆ ಮನೆಯಲ್ಲಿದ್ದ ಪ್ರತಿಯೊಬ್ಬರ ಸೇವೆಯನ್ನೂ ಜ್ಯೋತಿಶ್ರೀಯೇ ಮಾಡಬೇಕಾಯಿತು.

ಮದುವೆಯಾದ ಮರು ವರ್ಷಕ್ಕೇ ಮಗ ಧ್ರುವ ಹುಟ್ಟಿದ. ಆಗಲೂ ಶ್ರೀನಿಧಿ ಬದಲಾಗಲಿಲ್ಲ. ಹಿಂಸೆ ಇನ್ನಷ್ಟು ಹೆಚ್ಚಾಯಿತು. ತರಕಾರಿ ತರುವುದಕ್ಕೂ ಹೊರಗೆ ಕಳಿಸಕೂಡದೆಂದು ಶ್ರೀನಿಧಿ ತಾಕೀತು ಮಾಡಿದ್ದ. ಹಾಗಂತ ಜ್ಯೋತಿಶ್ರೀ ಸುಮ್ಮನಿರಲಿಲ್ಲ. ಪ್ರತಿಭಟಿಸಿದಾಗಲೆಲ್ಲ ಒದೆ ಬೀಳುತ್ತಿತ್ತು. ಇದು ವಿಪರೀತಕ್ಕೆ ಹೋಗಿದ್ದು 2007 ರ ಮೇ 13 ರ ಭಾನುವಾರದಂದು. ವಿಪರೀತ ಕುಡಿದು ನಡುರಾತ್ರಿ ಮನೆ ಸೇರಿದ್ದ ಶ್ರೀನಿಧಿ ಬೆಳಿಗ್ಗೆ ಹತ್ತಕ್ಕೆ ಎದ್ದವನೇ ಜ್ಯೋತಿಶ್ರೀಯನ್ನು ಹಿಡಿದು ಬಡಿದಿದ್ದಾನೆ. ಅದೂ ತನ್ನ ಬೂಟ್ ಪಾಲೀಶ್ ಮಾಡಲಿಲ್ಲ ಮತ್ತು ಖಾಕಿ ಯೂನಿಫಾರ್ಮಿಗೆ ಇಸ್ತ್ರೀ ಮಾಡಲಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕೆ!

ಕೊನೆಗೂ ಜ್ಯೋತಿಶ್ರೀಯನ್ನು ವಿಜಯನಗರದ ಶರಾವತಿ ಆಸ್ಪತ್ರೆಗೆ ಸೇರಿಸಲು ಆಕೆಯ ತಂದೆಯೇ ಬರಬೇಕಾಯಿತು!

ಮಾನಸಿಕ ಆರೋಗ್ಯ ಸರಿಯಿರುವ ಯಾವುದೇ ಮನುಷ್ಯ ಈ ರೀತಿ ವರ್ತಿಸುತ್ತಾನಾ? ಇಲ್ಲಿ ಶ್ರೀನಿಧಿಯ ಮನಸ್ಥಿತಿಯಷ್ಟೇ ಅಲ್ಲ; ಆತನ ತಾಯಿ, ಅಣ್ಣ, ಅತ್ತಿಗೆ ಎಲ್ಲರೂ ಮನೋವಿಕೃತರೆ. ಇಂಥ ಮೃಗಗಳ ಮಧ್ಯೆ ಕಳೆದ ಒಂಭತ್ತು ವರ್ಷಗಳಿಂದ ಹೆಣಗಿದಳಲ್ಲ; ಜ್ಯೋತಿಶ್ರೀ ಅವಳ ಪಾಡು ಯಾವ ಹೆಣ್ಣಿಗೂ ಬರಬಾರದು.

ಸಂತೋಷದ ಸಂಗತಿಯೆಂದರೆ ಒಂಭತ್ತು ವರ್ಷಗಳ ಆಕೆಯ ಜೈಲುವಾಸಕ್ಕೆ ಈಗ ಮುಕ್ತಿ ಸಿಕ್ಕಿದೆ. ರಕ್ಕಸ ಇನ್ಸ್‌ಪೆಕ್ಟರ್ ಶ್ರೀನಿಧಿ ಕೊನೆಗೂ ಕಂಬಿ ಎಣಿಸಿದ್ದಾನೆ. ಸಸ್ಪೆಂಡಾಗಿದ್ದಾನೆ. ದುರಂತವೆಂದರೆ ಇಂಥ ರಕ್ಕಸನ ಖಾಕಿ ಕಿತ್ತು ಮನೆಗಟ್ಟಬೇಕಿದ್ದ ಇಲಾಖೆಯ ಮುಖ್ಯಸ್ಥರೇ ನಿಂತು ಶ್ರೀನಿಧಿಯನ್ನು ರಕ್ಷಿಸುತ್ತಿದ್ದಾರೆ.

ಅರ್ಧಾಂಗಿಯನ್ನೇ ಅರೆಜೀವ ಮಾಡಿದವನು ಜನರನ್ನು ಬಿಡುತ್ತಾನಾ?

–ರಾ. ಸೋಮನಾಥ್

ಜೈಲಿಗಾದ್ರೂ ಹೋಗ್ತೀನಿ ಅವಳು ಮಾತ್ರ ಬೇಡ!

ಶ್ರೀನಿಧಿ ಇನ್ನೆಂಥಾ ದುರುಳ ಎಂಬುದಕ್ಕೆ 'ಜೈಲಿಗಾದರೂ ಹೋಗ್ತೀನಿ ಅವಳನ್ನು ಮಾತ್ರ ಮತ್ತೆ ಸೇರಿಸೋಲ್ಲ' ಎಂದು ಆತ ಕೋರ್ಟಿನ ಕಟಕಟೆಯಲ್ಲಿ ನಿಂತು ಹೇಳಿದ್ದೇ ಸಾಕ್ಷಿಯಂತಿತ್ತು.

ಮೇ 13 ರ ಭಾನುವಾರ ಒದೆ ತಿಂದು ಪ್ರಜ್ಞೆ ತಪ್ಪಿಬಿದ್ದಿದ್ದ ಜ್ಯೋತಿಶ್ರೀಯನ್ನು ಆಕೆಯ ತಂದೆ ಮಂಜುನಾಥರೇ ಬಂದು ಆಸ್ಪತ್ರೆಗೆ ಸೇರಿಸಿದ್ದಾರೆ. ಗಾಯಗೊಂಡಿದ್ದನ್ನು ಕಂಡೇ ಶರಾವತಿ ನರ್ಸಿಂಗ್ ಹೋಮಿನವರು ವಿಜಯನಗರ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ. ಅಲ್ಲಿಂದ ಅದು ಮಹಿಳಾ ಆಯೋಗದ ಗಮನಕ್ಕೆ ಹೋಗಿದೆ. ಆನಂತರವೇ ಜನವಾದಿ ಮಹಿಳಾ ಸಂಘಟನೆಯ ವಿಮಲಾ ಮತ್ತು ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನೇಸರ್ಗಿ ಜ್ಯೋತಿಶ್ರೀಯ ಬೆಂಬಲಕ್ಕೆ ನಿಂತಿದ್ದಾರೆ.


ಪ್ರಮಿಳಾ ನೇಸರ್ಗಿ

ಇಷ್ಟಾದ ಮೇಲೂ ಅಡಿಷನಲ್ ಕಮೀಷನರ್ ಬಿಪಿನ್ ಗೋಪಾಲಕೃಷ್ಣ ಶ್ರೀನಿಧಿಯನ್ನು ಕರೆಸಿಕೊಂಡು 'ಬೇಡಯ್ಯಾ, ಹೆಂಡ್ತಿ ಹತ್ರ ರಾಜಿ ಮಾಡ್ಕೋ. ತಪ್ಪಾಯ್ತು ಅಂತ ಕೇಳ್ಕೋ' ಎಂದು ಬುದ್ಧಿ ಹೇಳಿದ್ದಾರೆ. ಅನ್ನ ತಿನ್ನುವ ಯಾರೇ ಆದರೂ ತನ್ನ ತಪ್ಪನ್ನು ಅರಿತುಕೊಂಡು ಪತ್ನಿಯ ಕ್ಷಮೆ ಕೇಳುವುದು ಸಹಜ. ಅಷ್ಟಕ್ಕೂ ಆಕೆ ಅರ್ಧಾಂಗಿ!


ಕೊನೆಗೆ ವಿಜಯನಗರ ಪೊಲೀಸರೇ ಶ್ರೀನಿಧಿಯನ್ನು ಕರೆಸಿ ಬುದ್ಧಿ ಹೇಳಿದಾಗಲೂ ಶ್ರೀನಿಧಿ ಹೇಳಿದ್ದು 'ಜೈಲಿಗಾದರೂ ಹೋಗ್ತೀನಿ ಆಕೆಯ ಮುಖ ನೋಡಲ್ಲ!' ಜೈಲಿಗೆ ಕಳಿಸುವ ಮುನ್ನ ನ್ಯಾಯಾಧೀಶರೇ ಬುದ್ಧಿ ಹೇಳಿದರೂ ಇದೇ ಮಾತನ್ನು ಶ್ರೀನಿಧಿ ಹೇಳುತ್ತಾನೆಂದರೆ ಈತನನ್ನು 'ಮನುಷ್ಯ' ಎನ್ನಲು ಸಾಧ್ಯವೇ?

ಶ್ರೀನಿಧಿಗೆ ಒಂದೇ ದಿನಕ್ಕೆ ಜಾಮೀನು ಸಿಕ್ಕಿದ್ದಾದರೂ ಹೇಗೆ? ಇಡೀ ಪ್ರಕರಣವನ್ನು ಪೊಲೀಸರೇ ಮುಚ್ಚಿ ಹಾಕಲು ನಿಂತಿದ್ದಾರಾ?

ಮಹಿಳಾ ಸಂಘಟನೆಗಳು ಈ ಬಗ್ಗೆ ಎಚ್ಚರಿಕೆ ವಹಿಸಬೇಕಿದೆ. ಜ್ಯೋತಿಶ್ರೀಗೆ ಇಂಥ ಮೃಗದ ಜೊತೆ ಬದುಕುವುದಕ್ಕಿಂತ ದೊಡ್ಡ ಶಿಕ್ಷೆ ಯಾವುದಿದೆ?

ಪೆದ್ದಗುಂಡನ ಪರಾರಿ ಮುಲಾಮನ ತಯಾರಿ



ಪೆದ್ದಗುಂಡ


ಮುಲಾಮ

ಸೂರಿಯ ಹತ್ಯೆಯ ನಂತರ ಮತ್ತು ಹಿರಿಯೂರಿನ ಜೈಭಾರತ್ ಡಾಬಾದಲ್ಲಿ ಕೊರಂಗು ಮೇಲಿನ ಅಟ್ಯಾಕ್‌ಗೂ ಮುನ್ನ ನಡೆದ ಘಟನಾವಳಿಗಳಾದರೂ ಎಂಥಾದ್ದು?

ಯಾವುದೇ ಮಾನವಂತ ಸರ್ಕಾರವಾಗಿದ್ದರೆ ಮುಖ್ಯಮಂತ್ರಿಯಾದವನು ಜನಕ್ಕೆ ತಲೆ ತೋರಿಸುವುದಕ್ಕೇ ನಾಚಿಕೊಳ್ಳಬೇಕಿತ್ತು. ಒಂದು ಜವಾಬ್ದಾರೀಯುತ ವಿರೋಧ ಪಕ್ಷಕ್ಕೆ ಬೆಂಗಳೂರಿನ ಕಾನೂನು ಸುವ್ಯವಸ್ಥೆ ಅದ್ಯಾವ ಮಟ್ಟಕ್ಕೆ ಹದಗೆಟ್ಟಿದೆಯೆಂಬುದು ಅರ್ಥವಾಗಬೇಕಿತ್ತು. ಹಾಗಂತ ಪತ್ರಿಕೆಗಳು ಸುಮ್ಮನಾಗಲಿಲ್ಲ, ಅದರಲ್ಲೂ ಪ್ರಜಾವಾಣಿ ಬೆಂಗಳೂರಿನ ಅನಾಹುತಕಾರಿ ಗ್ಯಾಂಗ್‌ವಾರ್ ಮತ್ತು ಜನಸಾಮಾನ್ಯರ ಅತಂತ್ರ ಬದುಕಿನ ಬಗ್ಗೆ ಸಂಪಾದಕೀಯವನ್ನೇ ಬರೆದಿತ್ತು. ದುರಂತವೆಂದರೆ ಇದ್ಯಾವುದೂ ಬೆಂಗಳೂರಿನ ಪೊಲೀಸ್ ಕಮೀಷನರ್ ನೀಲಂ ಅಚ್ಯುತ ರಾವ್ ಸಾಹೇಬರ ಮಂದ ಬುದ್ಧಿಗೆ ಅರ್ಥವಾಗಲೇ ಇಲ್ಲ. ಸೂರಿ-ಟೋನಿ ಜೋಡಿ ಕೊಲೆಯ ಹೊತ್ತಿಗೆ ಕೊರಂಗು, ಮಾರೇನಹಳ್ಳಿ ಜಗ್ಗ, ಕಲಗಚ್ಚು ಸೀನ, ಹಂದಿ ಕುಮಾರ, ಬಾಯಿಬಡ್ಕ ಸೀನ, ಗೊಲ್ಲರಹಟ್ಟಿ ರಾಜಣ್ಣ, ಯದುಗಿರಿ, ಕಿವುಡ ಬಲರಾಮ, ಟೀಸಿ ರಾಜ-ಬೆಟ್ಟ ನಾಗೇಶ ಹೀಗೆ ಇಡೀ ಮಚ್ಚಿನ ಆಪ್ತವಲಯವೇ ಜೈಲು ಹೊಕ್ಕಿ ಕೂತಿತ್ತು. ಹೊರಗಿದ್ದವನು ಒಬ್ಬ ಪೆದ್ದಗುಂಡ ಮಾತ್ರ. ಆತನೇ ಮೀಸೆ ಬಲಿಯದ ಇನ್ನೂ ಪಿಯುಸಿ ಮಟ್ಟದಲ್ಲಿದ್ದ ಚಿಲ್ರೇ ಹುಡುಗರನ್ನು ಜಮಾಯಿಸಿ ಒಟ್ಟೊಟ್ಟಿಗೇ ಸೂರಿ-ಟೋನಿಯನ್ನು ಕೊಚ್ಚಿ ಹಾಕಿಸಿದ್ದ.

2006 ರ ಸೆಪ್ಟೆಂಬರ್ ಹತ್ತಿರ ಬೆಳಗಿನ ಸ್ಟ್ರೀಟ್ ಫೈಟಿಂಗ್ ಅದೆಷ್ಟು ಭೀಕರವಾಗಿತ್ತೆಂದರೆ ಸೂರಿ ರಿವಾಲ್ವರ್ ತೆಗೆದು ಒಂದರ ಮೇಲೊಂದು ಗುಂಡು ಹಾರಿಸುತ್ತಿದ್ದರೂ ಅದ್ಯಾವುದೂ ಲೆಕ್ಕಕ್ಕೇ ಇಲ್ಲ ಎಂಬಂತೆ ಪೆದ್ದಗುಂಡ ನುಗ್ಗಿ ಕತ್ತರಿಸಿದ್ದ!



ಸೂರಿ ಕೊಲೆಯಾಗಿದ್ದು ಗೊತ್ತಾಗಿದ್ದೇ once again ವಿಜಯನಗರದ ಪೊಲೀಸರು ತಿಮ್ಮೇನಹಳ್ಳಿಯ ಸುತ್ತ ಪೊಲೀಸ್ ತುಕಡಿಗಳನ್ನು ಹಾಕಿ ಪಹರೆ ಕಾಯ್ದರೆ, ಯಥಾವತ್ತಾಗಿ ಸಿಕ್ಕಿಬಿದ್ದವನು ಗೋವಿಂದ ಮಾತ್ರ. ಸೆಪ್ಟೆಂಬರ್ ಹತ್ತಿರ ಸರಿರಾತ್ರಿ ಕಂಠಮಟ್ಟ ಕುಡಿದ ಗೋವಿಂದ ಎಂಥಾ ದಾಂಧಲೆಗಿಳಿದನೆಂದರೆ, ಒಂದು ಹಿಂಡು ಹುಡುಗರಿಗೂ ಕುಡಿಸಿದ್ದೇ ಇಡೀ ವಿಜಯನಗರದ ಕಂಡಕಂಡ ಅಂಗಡಿಗಳ ಮೇಲೆಲ್ಲ ದಾಳಿ ಮಾಡಿಬಿಟ್ಟ. ಅದೂ ಕೋತಿಬಂಡೆಯಿಂದ ಅತ್ತಿಕುಪ್ಪೆ ಪೆಟ್ರೋಲ್ ಬಂಕ್ ತನಕದ ಸರ್ವೀಸ್ ರಸ್ತೆಯ ಅಷ್ಟೂ ಅಂಗಡಿಗಳು ಗೋವಿಂದನ ದಾಳಿಗೆ ತುತ್ತಾದವು. ಶಿಷ್ಯ ಸೂರಿ ಗೋವಿಂದನನ್ನೇ ಮೀರಿಸುವಷ್ಟು ಬೆಳೆದಿದ್ದ ನಿಜ. ಸಾಯುವ ಮುನ್ನ ಗೋವಿಂದನ ವಿರುದ್ಧವೇ ಬಂಡೆದ್ದು ಆತನ ಪ್ರಾಬಲ್ಯವಿದ್ದ ಮಾರೇನಹಳ್ಳಿ, ವಿಜಯನಗರ, ಮೂಡಲಪಾಳ್ಯ, ಕಾಮಾಕ್ಷಿಪಾಳ್ಯ, ಕಾವೇರಿಪುರ, ರಂಗನಾಥ್‌ಪುರ, ದಾಸರಹಳ್ಳಿ, ಚಂದ್ರಲೇಔಟ್, ನಾಗರಬಾವಿಯಿಂದ ಹಿಡಿದು ಕೆಂಗೇರಿಯ ತನಕ ಲೋಕಲ್ ಹುಡುಗರ ಅಸಂಖ್ಯಾತ ಗ್ಯಾಂಗ್‌ಗಳನ್ನು ಹುಟ್ಟುಹಾಕಿದ್ದ. ಒಂದೆಡೆ ಲ್ಯಾಂಡ್ ಡೀಲುಗಳಾದರೆ ಮತ್ತೊಂದೆಡೆ ಕಾಮಾಕ್ಷಿಪಾಳ್ಯದ ನಟೋರಿಯಸ್ ಕೇಬಲ್ ಆಪರೇಟರ್ ಶ್ರೀಧರನೇ ಸೂರಿಯ ಪಾಲಿಗೆ ಖಜಾನೆಯಾಗಿಬಿಟ್ಟಿದ್ದ.

ಗುರು-ಶಿಷ್ಯರಂತಿದ್ದ ಸೂರಿ ಮತ್ತು ಗೋವಿಂದರ ನಡುವೆಯೇ ವೈಷಮ್ಯವಿತ್ತಾದರೂ ಪರಸ್ಪರ ಯಾರೂ ಅದನ್ನು ದೊಡ್ಡದು ಮಾಡಿಕೊಂಡಿರಲಿಲ್ಲ. ಯಾವತ್ತು ಸೂರಿಯೇ ಮುಗಿದು ಹೋದನೋ ಆತನ ಇಡೀ ತಂಡವನ್ನಾದರೂ ತಾನು ಲೀಡ್ ಮಾಡಬೇಕಲ್ಲ; ಹಾಗೆಂದು ಲೆಕ್ಕ ಹಾಕಿಯೇ ಗೋವಿಂದ ತಾನು ವಿಪರೀತ ತಲೆ ಕೆಡಿಸಿಕೊಂಡಂತೆ ರಸ್ತೆ ದಾಂಧಲೆಗಿಳಿದುಬಿಟ್ಟ. ಹಾಗೇ ಕಂಠ ಮಟ್ಟ ಕುಡಿದು ಕಂಡಕಂಡ ಅಂಗಡಿಗಳ ಮೇಲೆ ದಾಳಿ ಮಾಡುತ್ತಿದ್ದ ಗೋವಿಂದನ ಪಡೆ ಅತ್ತಿಕುಪ್ಪೆ ಪೆಟ್ರೋಲ್ ಬಂಕ್ ಬಳಿ ಹಾವಳಿ ನಡೆಸುತ್ತಿರುವಾಗಲೇ ಪೊಲೀಸರಿಗೆ ಸಿಕ್ಕಿಬಿತ್ತು. ಬ್ಯಾಟರಾಯನಪುರ ಎಸಿಪಿ ರಮೇಶ್‌ಬಾಬು ಗೋವಿಂದನನ್ನು ಎಳೆದೊಯ್ದಿದ್ದೇ ಸಮಾರುಬ್ಬ ಜೈಲಿಗೆ ರವಾನಿಸಿಬಿಟ್ಟರು.

ವಿಶೇಷವೆಂದರೆ ಗೋವಿಂದನ ಬಳಿಯಿದ್ದ 38 ರಿವಾಲ್ವರ್ ಕೂಡ ಹೇಗೋ ಪೊಲೀಸರ ಕೈಗೆ ಸಿಕ್ಕಿಹೋಗಿತ್ತು!

ಸೂರಿ ಮುಗಿದುಹೋದ. ಗೋವಿಂದ ಜೈಲು ಪಾಲಾದ. ಹಾಗಂತ ಅಂಡರ್‌ವರ್ಲ್ಡ್ ಸುಮ್ಮನಾಗಬೇಕಲ್ಲ!

ಒಬ್ಬ ಸೂರಿ ಮುಗಿದ ಮಾತ್ರಕ್ಕೇ ಯಾವುದೂ ಮುಗಿಯುವಂಥದ್ದಲ್ಲ. ಮಚ್ಚಿನ ಹತ್ಯೆಗೆ ಹೋಲಿಸಿದರೆ ಅದಕ್ಕೆ ಸೂರಿಯ ಹತ್ಯೆಯೇ ಪರಿಹಾರವಾಗಿರಲಿಲ್ಲ. ಪರಸ್ಪರ ಹತ್ಯೆಗಳ ಹಿಂದಿದ್ದ ದೊಡ್ಡದೊಡ್ಡ ತಲೆಗಳ ಲೆಕ್ಕಾಚಾರಗಳೇ ಭೀಕರವಾಗಿದ್ದವು. ಸೂರಿಯ ಹತ್ಯೆಯಿಂದಾಗಿ ತಿಮ್ಮೇನಹಳ್ಳಿ ಗೋವಿಂದನೇ ಆಪಾಟ ತಲೆಕೆಡಿಸಿಕೊಂಡನೆಂದರೆ ಇನ್ನು ಇಡೀ ಜೇಕೆ ಸಾಮ್ರಾಜ್ಯ ತಾನೇ ಅದನ್ನು ಹೇಗೆ ಸಹಿಸಲು ಸಾಧ್ಯ? ಅದರಲ್ಲೂ ಕಾಮಾಕ್ಷಿಪಾಳ್ಯದ ಧಣಿಗಳು ಸುಮ್ಮನಿರುತ್ತಾರಾ?

ಇದ್ಯಾವುದನ್ನೂ ಕೊರಂಗು ಲೆಕ್ಕ ಹಾಕಲೇ ಇಲ್ಲ. ತನ್ನ ಎದುರಾಳಿಗಳು ಮುಟ್ಟಿ ನೋಡಿಕೊಳ್ಳುವಂಥ ಪೆಟ್ಟುಕೊಟ್ಟ ಬಗ್ಗೆ ಬಹಿರಂಗವಾಗಿಯೇ ಕೊಚ್ಚಿ ಕೊಂಡಿದ್ದ.

> ಒಂದೆಡೆ ಸೂರಿಯನ್ನು ಹತ್ಯೆಗೈದ ಪೆದ್ದಗುಂಡ ತಲೆಮರೆಸಿಕೊಂಡು ತನ್ನ ಪಾಡಿಗೆ ತಾನು ಪರಾರಿಯಾದ. ಮತ್ತೊಂದೆಡೆ ಹೇಗೆ ಕೊರಂಗು ಗುರಿ ಮುಲಾಮನ ಮೇಲಿತ್ತೋ ಹಾಗೇ ಮುಲಾಮನೂ ಕೊರಂಗುವನ್ನು ಮುಗಿಸಿಬಿಟ್ಟರೆ ತಾನಿನ್ನು ನಿರಾಳ ಎಂದೇ ಲೆಕ್ಕಹಾಕಿದ್ದ. ತಾನು ಮರೆಯಲ್ಲಿದ್ದುಕೊಂಡೇ ಕೊರಂಗು ಮತ್ತು ಆತನ ತಂಡದ ಗಮನವನ್ನು ಜೇಕೆ ಕಡೆ ಹರಿಸುವಂತೆ ಮಾಡುವುದು ಮತ್ತು ಕೋರ್ಟಿಗೆಂದು ಬಂದ ಕೊರಂಗುನನ್ನು ಕೋರ್ಟ್ ಆವರಣದಲ್ಲೇ ಮುಗಿಸಿಬಿಡಲು ತಯಾರಿ ನಡೆಸಿದ್ದ ಮುಲಾಮ....

ಮೊದಲು ಮಚ್ಚ ತದನಂತರ ನಡೆದ ಸೂರಿ-ಟೋನಿ ಕೊಲೆಗಳಿಂದಾಗಿ ಬೆಂಗಳೂರಿನ ಇಡೀ ಅಂಡರ್‌ವರ್ಲ್ಡ್ ಥರಗುಟ್ಟಿ ಹೋಗಿತ್ತು, ಜಿದ್ದಾಜಿದ್ದಿ ಅದೆಷ್ಟು ತಾರಕಕ್ಕೇರಿತ್ತೆಂದರೆ ಇಷ್ಟರಲ್ಲೇ ಜೇಡರಹಳ್ಳಿ ಕೃಷ್ಣಪ್ಪನನ್ನೇ ಸುನೀಲನ ಗ್ಯಾಂಗ್ ಮುಗಿಸಿಬಿಡ್ತದೆ ನೋಡ್ತಾ ಇರಿ ಎಂದು ಒಂದು ವರ್ಗ ಮಾತಾಡಿಕೊಂಡರೆ ಜೇಕೆ ಮೇಲೆ ಕೈ ಮಾಡೋದು ಅಂದ್ರೆ ತಮಾಷೇನಾ? ಯಾಕೋ ಕೊರಂಗುಗೆ ವಕ್ರ ಬಂದಂಗಿದೆ. ಹೇಗೂ ಕೋರ್ಟಿಗೆ ಬರ್‍ತಾನಲ್ಲ; ಅಲ್ಲೇ ಕೊರಂಗೂನ್ನ ತೆಗೆದುಬಿಡ್ತಾರೆ ಗೊತ್ತಾ?

ಇದು ಮತ್ತೊಂದು ವಲಯದಲ್ಲಿ ಕೇಳಿಬರುತ್ತಿದ್ದ ಡೈಲಾಗು!

ಅಂಡರ್‌ವರ್ಲ್ಡ್‌ನ ಜಾಯಮಾನ ಗೊತ್ತಿದ್ದ ಯಾರಿಗೂ ಇದು ಸುಖಾಸುಮ್ಮನೇ ಹೊಗೆಯಾಡುವ ವದಂತಿಯಲ್ಲ ಎಂಬುದು ಚೆನ್ನಾಗಿ ಗೊತ್ತಿತ್ತು. ಇಡೀ ಬೆಂಗಳೂರು ಭೂಗತಲೋಕ ಇಂಥದ್ದೇ ವಿಚಿತ್ರ ಕುತೂಹಲವೊಂದಕ್ಕೆ ಬಿದ್ದು ಬಿಟ್ಟಿತ್ತು. ಹಾಗೇ ನೋಡಿದರೆ ಕೊರಂಗುನೇ ಜೇಕೆಯ ಹಳೇ ಶಿಷ್ಯ. ಗ್ಯಾಂಗ್ ರೈವಲ್ರಿಯ ಹೊರತಾಗಿ ಜೇಕೆಗಾಗಲಿ ಮತ್ತು ಕೊರಂಗು ನಡುವೆಯಾಗಲಿ ಜಿದ್ದಾಜಿದ್ದಿಯಿಲ್ಲ. Of course ಕೊರಂಗು ಪಾಳಯದ ಸೈಲೆಂಟ್ ಸುನೀಲನಿಗೂ ಜೇಕೆ ಜೊತೆ ಸಣ್ಣದೊಂದು ಭಿನ್ನಾಭಿಪ್ರಾಯ ಕೂಡ ಇಲ್ಲ. ಅಷ್ಟಕ್ಕೂ ಜೇಕೆ ಅಂಡರ್‌ವರ್ಲ್ಡ್ ತೊರೆದೇ ಯಾವುದೋ ಕಾಲವಾಗಿದೆ. ಹೀಗಿದ್ದರೂ ಸುನೀಲನ ಗ್ಯಾಂಗ್ ಇಷ್ಟರಲ್ಲೇ ಜೇಕೆಯ ಮೇಲೆ ದಾಳಿ ಮಾಡಲಿದೆ ಎಂದು ಗುಲ್ಲೆಬ್ಬಿಸುತ್ತಿರುವುದು ಯಾರು?

ಇಂಥ ವಿಚಿತ್ರ ಊಹಾಪೋಹಗಳು ಒಂದೆಡೆಯಾದರೆ ಮತ್ತೊಂದೆಡೆ ಇಷ್ಟರಲ್ಲೇ ಪೊಲೀಸರು ಸರಣಿ ಎನ್‌ಕೌಂಟರ್ ಮಾಡಲಿದ್ದಾರೆಂಬ ಸುದ್ದಿಯೂ ಹುಟ್ಟಿಕೊಂಡಿದೆ. ಹೀಗೆ ಪೊಲೀಸರ ಹಿಟ್‌ಲಿಸ್ಟ್‌ನಲ್ಲಿದ್ದ ಮೊದಲನೇ ಹೆಸರೇ ಪೆದ್ದಗುಂಡ!

ಶಿವಮೊಗ್ಗ ನಾಗ, ಹೆಬ್ಬೆಟ್ಟು ಮಂಜ, ತಮಿಳು ಕುಮಾರ, ಆಂಜನಪ್ಪ ಗಾರ್ಡನ್ನಿನ ಪಾತಕ ಗುಪ್ತ, ತುಮಕೂರಿನ ಸುಂಜಿತ್; ಹೀಗೆ ಯಾವ ಕ್ಷಣದಲ್ಲಾದರೂ ಈ ಪೈಕಿ ಯಾರನ್ನಾದರೂ ಪೊಲೀಸರು ಮುಗಿಸುವ ಸಾಧ್ಯತೆಗಳಿದ್ದವು. ಬೆಂಗಳೂರಿನ ಮಟ್ಟಿಗೆ ಪೆದ್ದಗುಂಡ ದೊಡ್ಡ ರೌಡಿಯಲ್ಲ. ವೀರೇಶ್ ಥೇಟರ್ ಎದುರು ನಡೆದ ಬಯಲು ರವಿ ಕೊಲೆಕೇಸಿನ ಹೊರತಾಗಿ ಆತನ ಮೇಲೆ ಬೇರೆ ಕೊಲೆ ಕೇಸುಗಳಿರಲಿಲ್ಲ. ಆದರೆ ಸೂರಿ ತನ್ನ ರಿವಾಲ್ವರ್‌ನಿಂದ ಫೈರ್ ಮಾಡುತ್ತಿದ್ದರೂ ಲೆಕ್ಕಿಸದೇ ನುಗ್ಗಿ ಕತ್ತರಿಸಿದ ಪೆದ್ದಗುಂಡನ ಹೆಸರು ರಾತ್ರೋರಾತ್ರಿ ಉತ್ತುಂಗಕ್ಕೇರಿಬಿಟ್ಟಿತ್ತು.

ಇಂಥ ಪಾತಕಿಯನ್ನು ಎನ್‌ಕೌಂಟರ್ ಮಾಡುವ ಛಾತಿ ಯಾವ ಪೊಲೀಸ್ ಅಧಿಕಾರಿಗಿದೆ?

ಆ ಹೊತ್ತಿಗೆ ಪೆದ್ದಗುಂಡನ ಬೆನ್ನಿಗೆ ಬಿದ್ದ ಪೊಲೀಸರ ಸಂಖ್ಯೆಯೇನು ಕಮ್ಮಿಯಿತ್ತೆ? ವಿಜಯನಗರದ ಎಸಿಪಿ ಕುಮಾರಸ್ವಾಮಿ ಒಂದು ರೌಂಡ್ ಹೈದರಾಬಾದ್ ಸುತ್ತು ಹಾಕಿ ಬಂದರೆ, ಬ್ಯಾಟರಾಯನಪುರದ ಎಸಿಪಿ ರಮೇಶ್‌ಬಾಬು ಪಡೆ ಮಂಡ್ಯ, ಮೈಸೂರು, ಹಾಸನಗಳನ್ನೆಲ್ಲ ತಲಾಶ್ ಮಾಡಿ ಕೈಚೆಲ್ಲಿತ್ತು. ಡಿಸಿಪಿ ಶರತ್‌ಚಂದ್ರ, ಮತ್ತೊಬ್ಬ ಡಿಸಿಪಿ ಅಲೋಕ್ ಕುಮಾರ್, ಮಾಲಿನಿ ಕೃಷ್ಣಮೂರ್ತಿ, ಸಿಸಿಬಿಯ ಡಿಸಿಬಿ ರವಿಕಾಂತೇಗೌಡ, ಎಸಿಪಿ ಬಿ.ಕೆ. ಶಿವರಾಮ್, ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ, ನಂಜುಂಡೇಗೌಡ, ಅಶೋಕನ್; ಹೀಗೆ ಅರ್ಧ ಬೆಂಗಳೂರಿನ ಪೊಲೀಸರೆಲ್ಲ ಪೆದ್ದಗುಂಡನ ಬೆನ್ನಿಗೆ ಬಿದ್ದರು. ಪೊಲೀಸರ ಕೈಗೇನಾದರೂ ಪೆದ್ದಗುಂಡ ಸಿಕ್ಕಿದನೆಂದರೆ ಆತನ ಹೆಣ ಬೀಳುವುದಂತೂ ಗ್ಯಾರಂಟಿ ಎಂಬುದು ಇಡೀ ಬೆಂಗಳೂರಿಗೆ ಪುಕಾರಾಗಿತ್ತು. ಹಾಗಂತ ಆತ ಸಿಗಬೇಕಲ್ಲ!


ತಿಮ್ಮೇನಹಳ್ಳಿ ಸೂರಿ

ಯಾವತ್ತು ಸುನೀಲ ಮತ್ತು ಕೊರಂಗು ಸೇರಿಕೊಂಡು ಇಷ್ಟರಲ್ಲೇ ಜೇಕೆ ಮೇಲೆ ಅಟ್ಯಾಕ್ ಮಾಡುತ್ತಾರೆಂಬ ಸುದ್ದಿ ಹಬ್ಬಿತ್ತೋ ಇದರ ಹಿಂದಿನ ಹುನ್ನಾರ ಗೊತ್ತಿಲ್ಲದ ಅನೇಕರು ಈ ರೀತಿ ಸುದ್ದಿ ಹಬ್ಬಿಸುತ್ತಿರುವುದು ಯಾರು ಎಂಬ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಕೊರಂಗು ಮತ್ತು ಜೇಕೆ ಮಧ್ಯೆ ದುಷ್ಮನಿಯೇ ಇಲ್ಲ ಎನ್ನುವಾಗ ಈ ಥರದ ಗುಲ್ಲೆಬ್ಬಿಸುತ್ತಿರುವುದಾದರೂ ಯಾರು? ಅದರಿಂದ ಏನು ಲಾಭ? ಇತ್ಯಾದಿ ಪ್ರಶ್ನೆಗಳು ಬಹುಶಃ ಅಂಡರ್‌ವರ್ಲ್ಡ್‌ನಲ್ಲಿ ಆಳವಾಗಿ ಪಳಗಿರುವವರಿಗಷ್ಟೇ ಅರ್ಥವಾಗಬೇಕು?

ಇಂಥಾದ್ದೊಂದು ಕುಚೋದ್ಯದ ಹಿಂದಿದ್ದವನೇ ಮುಲಾಮ!

ಚಿತ್ರದುರ್ಗ ಜೈಲಿನಿಂದ ಬೆಂಗಳೂರಿನ ಕೋರ್ಟಿಗೆಂದು ಬರುವ ಕೊರಂಗುವನ್ನು ಹಿರಿಯೂರಿನ ಜೈಭಾರತ್ ಡಾಬಾದಲ್ಲಿ ಮುಲಾಮನ ಪಡೆ ಅಟ್ಯಾಕ್ ಮಾಡಲಿದೆ ಎಂಬುದಾಗಲಿ, ಕೊರಂಗು ಬಲಗೈ ಬಂಟ ಸಂದೀಪ್ ಅಲಿಯಾಸ್ ದೀಪು ಆ ದಾಳಿಯಲ್ಲಿ ಬಲಿಯಾಗಲಿದ್ದಾನೆ ಎಂಬುದಾಗಲಿ ಯಾರಿಗೆ ಗೊತ್ತಿತ್ತು?

ಅದೂ ಕೊರಂಗು ಕೋರ್ಟಿಗೆ ಬರುತ್ತಾನೆಂದರೆ ಆತನ ರಕ್ಷಣೆಗೆಂದು ಸ್ಟೆನ್ ಗನ್ನುಗಳಿರುವ ಕೆಎಸ್ಸಾರ್ಪಿ ತುಕಡಿಯೇ ಜೊತೆಗಿರುತ್ತಿತ್ತು. ಪೊಲೀಸ್ ವ್ಯಾನಿನಿಂದ ಇಳಿದು ಕೋರ್ಟ್ ಮುಗಿಸಿಕೊಂಡು ಮತ್ತೆ ವ್ಯಾನಿಗೆ ವಾಪಸ್ಸಾಗುವ ತನಕ ಕೊರಂಗುವನ್ನು ಶಸ್ತ್ರಧಾರಿ ಪೊಲೀಸರೇ ಮುತ್ತಿರುತ್ತಿದ್ದರು. ಇಂಥಾ ಸೆಕ್ಯೂರಿಟಿಯನ್ನು ಭೇದಿಸಿ ತನ್ನನ್ನು ಮುಗಿಸಲು ಯಾರಿಗಾದರೂ ಸಾಧ್ಯವಾ? ಹಾಗೆಂದೇ ಲೆಕ್ಕ ಹಾಕಿದ್ದ ಕೊರಂಗು ಗುರಿಯಿದ್ದನ್ನು ಜೇಕೆ ಆಗಲಿ, ಕಡಬಗೆರೆ ಪಾಯ್ಸನ್ ರಾಮನಾಗಲಿ ಅಲ್ಲ. ಅದು ಮುಲಾಮ!


ಹೇಗೆ ಕೊರಂಗು ಗುರಿ ಮುಲಾಮನ ಮೇಲಿತ್ತೋ ಹಾಗೇ ಮುಲಾಮನೂ ಕೊರಂಗುವನ್ನು ಮುಗಿಸಿಬಿಟ್ಟರೆ ತಾನಿನ್ನು ನಿರಾಳ ಎಂದೇ ಲೆಕ್ಕಹಾಕಿದ್ದ. ಬಹುಶಃ ಕೊರಂಗು ಮತ್ತು ಸುನೀಲ ಸೇರಿಕೊಂಡು ಇಷ್ಟರಲ್ಲೇ ಜೇಕೆ ಮೇಲೆ ಅಟ್ಯಾಕ್ ಮಾಡಲಿದ್ದಾರೆಂಬ ಸುದ್ದಿ ಹಬ್ಬಿಸಿದ್ದೇ ಈ ಮುಲಾಮ. ತಾನು ಮರೆಯಲ್ಲಿದ್ದುಕೊಂಡೇ ಕೊರಂಗು ಮತ್ತು ಆತನ ತಂಡದ ಗಮನವನ್ನು ಜೇಕೆ ಕಡೆ ಹರಿಸುವಂತೆ ಮಾಡುವುದು ಮತ್ತು ಕೋರ್ಟಿಗೆಂದು ಬಂದು ಕೊರಂಗುನನ್ನು ಕೋರ್ಟ್ ಆವರಣದಲ್ಲೇ ಮುಗಿಸಿಬಿಡುವುದು ಮುಲಾಮನ ಹುನ್ನಾರವಾಗಿತ್ತು. ಬದುಕಿದ್ದಷ್ಟೂ ದಿನ ಯಾವ ಹೆಬ್ಬೆಟ್ಟು ಮಂಜ ಎಂಬ ಪಾತಕಿಯನ್ನು ಸೂರಿ ಸಾಕಿಕೊಂಡಿದ್ದನೋ, ಸೂರಿಯ ಸಾವಿನ ನಂತರ ಅದೇ ಹೆಬ್ಬೆಟ್ಟು ಮಂಜನನ್ನು ಮುಲಾಮ ತನ್ನೆಡೆಗೆ ಸೆಳೆದುಕೊಂಡಿದ್ದ. ಒಳಗೊಳಗೇ ಶಿವಮೊಗ್ಗ ನಾಗನನ್ನು ಬುಟ್ಟಿಗೆ ಹಾಕಿಕೊಂಡ. ಜೊತೆಗೆ ಶ್ರೀರಾಂಪುರ ಏರಿಯಾದ ಪ್ರಕಾಶ್‌ನಗರದ ಕೆಲ ತಮಿಳು ಹುಡುಗರು, ಲಗ್ಗೆರೆಯ ಒಂದಷ್ಟು ಛಪ್ಪರ್‌ಗಳು ಮತ್ತು ಸುಂಕದಕಟ್ಟೆಯ ರಾಮ ಲಕ್ಷ್ಮಣರ ಅಳಿದುಳಿದ ಶಿಷ್ಯರ ಒಂದು ಹಿಂಡನ್ನೇ ಕೊರಂಗು ವಿರುದ್ಧ ರೆಡಿ ಮಾಡಿಬಿಟ್ಟಿದ್ದ. ಎಲ್ಲರೂ ಹೊಸ ಹುಡುಗರು. ಕೊರಂಗುಗೆ ಇವರ್‍ಯಾರದೇ ಮುಖ ಪರಿಚಯವಿಲ್ಲ. ಎದುರಿಗೆ ಬಂದರೂ ಕೊರಂಗು ಇವರನ್ನು ಗುರುತಿಸಲಾರ. ಇಂಥ ಹುಡುಗರನ್ನು ಸೂರಿ ಕೊಲೆಯಾಗಿ ಪ್ರತಿನಿತ್ಯ ಸತತ ಒಂದೂವರೆ ತಿಂಗಳುಗಳವರೆಗೂ ಬಿರಿಯಾನಿ, ಬಾರು, ಗಾಡಿ, ಬಟ್ಟೆ, ಮೊಬೈಲು ಮತ್ತು ಲಾಂಗ್ ಕೊಟ್ಟು ಸಾಕಿಕೊಂಡೇ ಇದ್ದ. ಕೊರಂಗು ಯಾವತ್ತು ಕೋರ್ಟಿಗೆ ಬರುತ್ತಾನೆ? ಆತನ ಬೆಂಗಾವಲಿಗೆ ಎಷ್ಟು ಮಂದಿ ಪೊಲೀಸರಿರುತ್ತಾರೆ? ಅವರ ಕೈಯಲ್ಲಿ ಎಂಥಾ ಆಯುಧವಿದೆ? ಮತ್ತು ದಾರಿ ಮಧ್ಯೆ ಕೊರಂಗು ಎಲ್ಲಿ ಊಟಕ್ಕೆ ನಿಲ್ಲುತ್ತಾನೆ ಎಂಬುದನ್ನೆಲ್ಲ ಸ್ಟಡಿ ಮಾಡಿಸಿದ್ದ.

ಅಂತಿಮವಾಗಿ ಕೊರಂಗು ವಧೆಗೆ ಮುಹೂರ್ತವನ್ನೂ ನಿಗದಿಗೊಳಿಸಿಬಿಟ್ಟ!

(ಮುಂದುವರೆಯುವುದು)

ರಿವೇಂಜ್ ಕಿಲ್ಲಿಂಗ್ಸ್ 30

ರಾ. ಸೋಮನಾಥ್



ಅಶ್ಲೀಲ ಶಿಲ್ಪಗಳು ನಮ್ಮ ಸಂಸ್ಕೃತಿಯೇ?

ಶಿಲ್ಪಾಶೆಟ್ಟಿ-ರಿಚರ್ಡ್ ಗೇರ್ ಚುಂಬನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಲವು ಮಡಿವಂತರು ತೋರಿಸುತ್ತಿರುವ ಉಗ್ರ ಪ್ರತಿಕ್ರಿಯೆ ಭಾರತೀಯರ ದ್ವಂದ್ವ ವ್ಯಕ್ತಿತ್ವಕ್ಕೆ ಸಾಕ್ಷಿ. ಈ ಮಡಿವಂತರು ಹೇಳುತ್ತಿರುವ ಭಾರತೀಯ ಸಂಸ್ಕೃತಿಯೆಂದರೆ 13 ನೇ ಶತಮಾನದ ನಂತರ ವಿದೇಶಿ ಮುಸ್ಲಿಮರು ಭಾರತಕ್ಕೆ ಬಂದ ಮೇಲೆ ಭಾರತೀಯ ಸಮಾಜ ಚಿಪ್ಪಿನೊಳಗೆ ಹುದುಗಿಕೊಂಡು, ಕುಂಠಿತಗೊಂಡು ಉಂಟಾದ 'ಬೋನ್‌ಸಾಯ್' ಮನೋಸ್ಥಿತಿಯ ಸಂಸ್ಕೃತಿ. ಇದನ್ನೇ ಪುರಾತನ ಭಾರತದ ನಿಜ ಸಂಸ್ಕೃತಿ ಎಂದುಕೊಂಡಿರುವ ಕುಬ್ಬರೇ ಮಹಾ ಮಡಿವಂತರಂತೆ ಈಗ ಹಿಂದೂ ಸಂಸ್ಕೃತಿಗೆ ಶಿಲ್ಪಾ-ಗೇರ್‌ನಿಂದ ಅಪಚಾರವಾಗಿದೆ ಎಂದು ಬೀದಿ ನಾಟಕವಾಡುತ್ತಿರುವುದು.

ನಿಜವಾದ ಭಾರತೀಯ ಸಂಸ್ಕೃತಿಯೆಂದರೆ ಯವನರು ಭಾರತಕ್ಕೆ ಬರುವ ಮೊದಲು ಇದ್ದ ಮುಕ್ತ ಸಂಸ್ಕೃತಿ, ಮಹಿಳೆ ಹೀನಳೆಂದು ಬೋಧಿಸುವ 'ಮನುವಾದವನ್ನು' ಸಾರಾಸಗಟಾಗಿ ಧಿಕ್ಕರಿಸಿದ ಸಮಾಜ ಆಗಿನದು. **``1000 Years ago the West was the East, and India was the West''** ಎಂಬ ಮಾತೇ ಇದೆ.

ಅದಿರಲಿ, ಈಗಿನ ಭಾರತೀಯ ದ್ವಂದ್ವ ವ್ಯಕ್ತಿತ್ವಕ್ಕೆ, ದ್ವಿಮುಖ ನೀತಿಗೆ ಒಂದು ಅತ್ಯುತ್ತಮ ಉದಾಹರಣೆ ಇದು: ಖಜೂರಾಹೋದಂತಹ ದೇವಾಲಯವಿರುವ ಮಧ್ಯಪ್ರದೇಶದ ಭೋಪಾಲ್, ಇಂದೋರ್‌ನಲ್ಲೇ ಶಿಲ್ಪಾ-ಗೇರ್ ವಿರುದ್ಧ ಹೆಚ್ಚು ಬೀದಿ ಪ್ರತಿಭಟನೆ ನಡೆದಿದ್ದು ವಿಪರ್ಯಾಸ. ಇಡೀ ಜಗತ್ತಿನಲ್ಲಿ ಎಲ್ಲಿಯೂ ಇಲ್ಲದ ಅತಿ ಭೀಭತ್ಸ, ಪ್ರಚೋದನಕಾರಿ ಮೈಥುನ ಶಿಲ್ಪಗಳಿರುವ ಖಜೂರಾಹೋದಲ್ಲಿ ಮನುಷ್ಯ ಮನುಷ್ಯರ ನಡುವೆ ಮಾತ್ರವಲ್ಲ, ಮನುಷ್ಯ ಮತ್ತು ಕುದುರೆ ನಡುವೆ ಸಂಭೋಗಕ್ರಿಯೆ ತೋರಿಸುವ ಪ್ರಕೃತಿ ವಿರೋಧಿ ಶಿಲ್ಪಗಳಿರುವ ಸ್ಥಳವದು. ಅದೂ ಪವಿತ್ರ ದೇವಸ್ಥಾನದ ಗೋಡೆಯ ಮೇಲೆ!

ಒಂದು ಪತ್ರ

ಮಾನ ಮುಚ್ಚಲು ಒಂದು ಸಪೂರ ಆಭರಣ ಸೊಂಟದ ಸುತ್ತ ತೊಟ್ಟಿರುವ ಬೇಲೂರಿನ ಶಿಲಾಬಾಲಿಕೆಗಳೂ, ಕೊನಾರ್ಕದ ಮಿಥುನ ಶಿಲ್ಪಗಳೂ ಆಗಿನ ಕಾಲದಲ್ಲಿ ಭಾರತೀಯ ಮಹಿಳೆಯರು ಬಿಲ್‌ಕುಲ್ ಬಟ್ಟೆಗಳನ್ನು ಮುಟ್ಟುತ್ತಿರಲಿಲ್ಲವೇನೊ ಎಂಬ ಸಂದೇಹ ನೋಡುಗರಲ್ಲಿ ಮೂಡುವುದು ಸಹಜ. ಆದರೆ ಬೇಲೂರಿನ ಶಿಲ್ಪಗಳಲ್ಲಿ ಅಪ್ರತಿಮ ಕಲಾ ಸೌಂದರ್ಯ ಹಾಗೂ ಸಾತ್ವಿಕ ಭಾವವಾದರೂ ಇದೆ. ಆದರೆ ಖಜೂರಾಹೊದ ಮೈಥುನ ಶಿಲ್ಪಗಳಲ್ಲಿ ಒಂದು ಹನಿ ಕಲಾ ಸೌಂದರ್ಯವಿಲ್ಲ, ಅಲ್ಲಿ ಇರುವುದೆಲ್ಲಾ ಅತಿ ಕ್ರೂಡ್ (crude) ಆದ ವಿವಿಧ ಭಂಗಿಯಲ್ಲಿ ಸಂಭೋಗ ತಲ್ಲೀನ ಅಶ್ಲೀಲ ಶಿಲ್ಪಗಳು. ಇಂತಹ **perverted** ರಸಿಕತೆ (ಕಾಮುಕತೆ) ಹೊಮ್ಮಿಸುವ ಶಿಲ್ಪಗಳನ್ನು ನಮ್ಮ ಸಂಸ್ಕೃತಿಯ ಪ್ರತೀಕ, **rich heritage** ಎಂಬಂತೆ ಜಗತ್ತಿನವರನ್ನೆಲ್ಲಾ ಕರೆ-ಕರೆದು ತೋರಿಸುತ್ತೇವೆ, ಕೋಟಿಗಟ್ಟಲೆ ಡಾಲರ್ ಕಮಾಯಿಸುತ್ತೇವೆ, ಪ್ರವಾಸೋದ್ಯಮ ಅಭಿವೃದ್ಧಿ ನೆಪದಲ್ಲಿ ಈ ಅಶ್ಲೀಲ ಶಿಲ್ಪಗಳ ಪಿಕ್ಚರ್-ಪೋಸ್ಟ್ ಕಾರ್ಡ್‌ಗಳನ್ನು ತಯಾರಿಸಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಹಂಚುತ್ತೇವೆ. ಆಗೆಲ್ಲಾ ನಮ್ಮ ನೈತಿಕ ಪೊಲೀಸರಿಗೆ, ಸಂಸ್ಕೃತಿಯ ರಕ್ಷಕರಿಗೆ ಇದು ತಪ್ಪು ಅನ್ನಿಸುವುದೇ ಇಲ್ಲ, ಇದೇ ನಮ್ಮಲ್ಲಿರುವ **paradox.**

ನಾಗರಿಕ ಜಗತ್ತಿನಲ್ಲಿ ಮಾನವ ಜಾತಿಯಲ್ಲಿ ಮೊಟ್ಟಮೊದಲಿಗೆ ಏಡ್ಸ್ ರೋಗ ಹರಡಲು ಕಾರಣ ಪ್ರಕೃತಿಗೆ ವಿರೋಧವಾಗಿ ಮನುಷ್ಯ ಪ್ರಾಣಿಗಳೊಂದಿಗೆ ಲೈಂಗಿಕ ಕ್ರಿಯೆ ನಡೆಸಿದ್ದೇ ಆಗಿದೆ ಎಂಬುದು ಸಂಶೋಧಕರ ಅಭಿಪ್ರಾಯ. ಹಾಗಾದರೆ ಏಡ್ಸ್‌ನ ಮೂಲ ತವರು ಭಾರತದ ಖಜೂರಾಹೊ ಆಗಿರಬಹುದೆ ಎಂಬ ಪ್ರಶ್ನೆ ಕುಹುಕ ಅನ್ನಿಸಬಹುದು. ಕಾಮಸೂತ್ರದ ಜನಕನ ದೇಶದ ಇಂದಿನ ವಿಚಾರವಂತರಿಗೆ ಕೆಲವು ಪ್ರಶ್ನೆಗಳು ಅಪಥ್ಯ

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಚೀನಾದಲ್ಲಿ ಏನೆನಿಸ್ತು ಈಶ್ವರಪ್ಪ?


ಥೂತ್ತೇರಿ

ಯಾಹೂ

ಮಂತ್ರಿ ಪದವಿ ಸಿಕ್ಕಲಿಲ್ಲವೆಂದು ಮೌನವ್ರತ ಆಚರಿಸಿ ಸತತವಾಗಿ ಒಂದು ತಿಂಗಳು ಸುಮ್ಮನಿದ್ದ ಮಹಿಮಾ ಪಟೇಲ್, 'ಅಮ್ಮಾ' ಎಂಬ ಶಬ್ದ ಹೊರಡಿಸಿ ಬಾಯಿ ಬಿಟ್ಟನಂತರ ಜೆಡಿಎಸ್‌ನ ಅಪ್ಪನ ಬಳಿ ಕಾಣಿಸಿಕೊಂಡು "ತಪ್ಪಾಯ್ತು" ಎಂದರಂತಲ್ಲಾ, ಕಿರುಗಣ್ಣುಬಿಟ್ಟು ನೋಡಿದ ಜೆಡಿಎಸ್‌ನ ಅಪ್ಪ "ಆಯ್ತು, ಇನ್ನು ಮುಂದೆ ಅಂತಹ ಚೇಷ್ಟೆಗಳನ್ನು ಮಾಡಬೇಡ" ಎಂಬಂತೆ ಒಂದು ಪುಟಗೋಸಿ ಜಾಗವನ್ನು ಕರುಣಿಸಿದರಂತಲ್ಲಾ, ಇದರಿಂದ ಕೃತಾರ್ಥನಾಗಿ ಹೋದ ಮಹಿಮಾ "ಸಾರ್, ನನ್ನ ಕ್ಷೇತ್ರ ಈಗಾಗಲೇ ಕೈಬಿಟ್ಟು ಹೋಗಿದೆ. ನೀವು ಬಂದು ಯಾರದ್ದಾದರೂ ಮನೆಯಲ್ಲಿ ಮಲಗಿದರೆ ಚೆನ್ನಗಿರಿ ಪುನಃ ನನ್ನ ಕೈ ಸೇರುತ್ತದೆ" ಎಂದು ಕುಮಾರಣ್ಣನ ಬಳಿ ಗೋಗರೆದನಂತಲ್ಲಾ, ಅದರಂತೆ ಕುಮಾರಣ್ಣ ಚೆನ್ನಗಿರಿ ತಾಲ್ಲೂಕಿಗೆ ಭೇಟಿ ಕೊಟ್ಟಾಗ, ಸೋತು ಸುಣ್ಣವಾದಂತೆ ಕಂಡ ಮಹಿಮಾ "ಯಾವ ವಿಷಯಕ್ಕೂ ಪ್ರತಿಭಟನೆ ಒಳ್ಳೆಯದಲ್ಲ, ಹೊಂದಿಕೊಂಡು ಹೋಗಬೇಕು" ಎಂದರಂತಲ್ಲಾ, ಥೂತ್ತೇರಿ!

* * * * * * *

ಇದ್ದಕ್ಕಿದ್ದಂತೆ ಹಗಲು ಹೊತ್ತೇ ಎಣ್ಣೆ ಹಾಕಿಕೊಂಡಂತೆ ಹಾರಾಡಿದ ಚಿನ್ನಿಗಪ್ಪನೆಂಬ ಮಂತ್ರಿ, ತನ್ನ ಸಹೋದ್ಯೋಗಿಗಳ ರಾಜೀನಾಮೆಯನ್ನೇ ಕೇಳಿಬಿಟ್ಟರಂತಲ್ಲಾ, ಇದರಿಂದ ಕಂಗಾಲಾದ ಅಲಂಗೂರ್ ಮತ್ತು ಮಹದೇವ ಪ್ರಸಾದ್, ದೇವೇಗೌಡರ ಬಳಿ ಹೋಗಿ "ಆ ಚಿನ್ನಿಗ ಬೈತನೆ ಸಾ, ವಡಿತನೆ ಸಾ, ನಿನ್ನವುನ್ ಅಂತನೆ ಸಾ" ಎನ್ನುವಂತೆ ದೂರೇಳಿದವಂತಲ್ಲಾ, ಇದಕ್ಕೆ ಏನೂ ಉತ್ತರಿಸದ ಜೆಡಿಎಸ್‌ನ ಅಪ್ಪ ಚಿನ್ನಿಗನನ್ನು ಕರೆಸಿಕೊಂಡು "ಏನೋ? ನೀನಿನ್ನೂ ಕುಡಿಯೋದ ಬಿಡಲಿಲ್ವೆ? ಕುಡದ ಮೇಲೆ ಮನೆಗೋಗಿ ಮಲಕ್ಕೋಬೇಕು ಅಂತ ನಿನಗೆ ಎಷ್ಟು ಬಾರಿ ಹೇಳಿದ್ದೀನಿ. ಕುಡುದ ನೀನು ಬೇರೆ ಪಾರ್ಟಿಯವರ ಜೊತೆ ಜಗಳ ಆಡೋದ ಬಿಟ್ಟು ನಮ್ಮವರ ಮೇಲೆ ಬಿದ್ದಿದ್ದಿಯಲ್ಲಾ, ನಿನಿಗೇನು ಮಾಡಬೇಕು ಈಗ?" ಎಂದರಂತಲ್ಲಾ, ಇದರಿಂದ ಹೆದರಿದ ಚೆನ್ನಿಗ "ನವ್ಮ್ಮ ತಾಯಾಣೆ ಕುಡಿಯುದಿಲ್ಲ ಕಣಪ್ಪ ನಾನು. ಇನ್ನೊಂದು ಸತಿ ಕುಡುದ್ರೆ ಮುಕಳಿ ಮ್ಯಾಲೆ ಮೆಟ್ಟನಲ್ಲಿ ವಡಿ. ಆ ಸೀನಿವಾಸ, ಮಾದೇವ, ಕಳ್ಳಬಡಿ ಮಕ್ಕಳು ಸುಳ್ಳೇಳ್ತರೆ. ಆ ಬೋಳಿ ಮಕ್ಕಳ ಹತ್ರ ಸೇರಸಬ್ಯಾಡಿ" ಎಂದು ಜಗ್ಗೇಶನಂತಾಡಿ ಓಡಿಬಿಟ್ಟನಂತಲ್ಲಾ, ಥೂತ್ತೇರಿ!



* * * * * * *

ಜೆಡಿಎಸ್‌ನ ಪಿತಾಮಹರಿಗೆ ಎಪ್ಪತ್ತೈದು ವರ್ಷ ತುಂಬಿದ್ದು ನೆನಪಿಗೆ ಬಂದ ಕೂಡಲೇ ಜೆಡಿಎಸ್‌ನ ಕಂಟ್ರಾಕ್ಟ್‌ದಾರರೆಲ್ಲಾ ಸೇರಿ ಬೆಂಗಳೂರು ತುಂಬಾ ಅಪ್ಪನ ಕಟವುಟ, ಬ್ಯಾನರ್, ಬಂಟಿಂಗ್ಸ್‌ನೆಲ್ಲಾ ಯದ್ವಾತದ್ವ ಕಟ್ಟಿ ಹುಚ್ಚುಮುಂಡೆ ಮಕ್ಕಳಂತೆ ಕುಣಿಯುತ್ತಿದ್ದಾರಂತಲ್ಲಾ, ಇತ್ತ ಅಪ್ಪನವರು ತನಗೆ ಎಪ್ಪತ್ತೈದು ತುಂಬಲು ತಿರುಪತಿ ತಿಮ್ಮಪ್ಪನೇ ಕಾರಣ, ಇಲ್ಲದಿದ್ದರೆ ತಾನು ಆ ರಾಮಯ್ಯ, ನಾಗ, ಭೈರ, ಪುಟ್ಟಸ್ವಾಮಿಯಂತೆ ಪರಂಧಾಮಗೈಯುತ್ತಿದ್ದೆನೆಂದು ಓಡಿಹೋಗಿ ತಿರುಪತಿ ಹುಂಡಿಗೆ ಪಿಂಡಿ ಹಾಕಿ ಲಾಡು ತಿಂದು ಬಂದರಂತಲ್ಲಾ, ಥೂತ್ತೇರಿ!

* * * * * * *

ದೇವೇಗೌಡರಿಗೆ ಎಪ್ಪತ್ತೈದು ತುಂಬಿದ್ದಕ್ಕೆ ಅಭಿನಂದಿಸಬೇಕಾದದ್ದು ನಮ್ಮ ಕರ್ತವ್ಯ ಎಂದು ಫೋನ್ ಮಾಡಿದಾಗ ಸಿಕ್ಕಿಬಿಟ್ಟರು.

"ಹಲೋ ಸಾರ್, ನಾನು ಯಾಹೂ ಮಾತನಾಡ್ತಯಿದ್ದಿನಿ."

"ಏನೇಲಿ ಯಾಹೂ ಅವರೆ?"

"ತಮ್ಮ ಹುಟ್ಟುಹಬ್ಬದ ಶುಭಾಶಯಗಳು ಸಾರ್."

"ಥ್ಯಾಂಕ್ಯೂ."

"ಈ ಸಮಯದಲ್ಲಿ ಏನಾದ್ರು ಹೇಳಿ ಸಾರ್?"

"ಈ ಸಂದರ್ಭದಲ್ಲಿ ನಾನು ಹೇಳೋ ಅಂತದ್ದೇನು ಅಂದ್ರೇ ಯಾವುದೇ ಜನಪ್ರತಿನಿಧಿಯಾಗಿರಬೌದು, ರಾಜ್ಯದಲ್ಲೇ ಆಗಲಿ ಕೇಂದ್ರದಲ್ಲೇ ಆಗಲಿ, ಬಡವರ ತಕ್ಕಂತಹ ಆಡಳಿತವನ್ನು ಮತ್ತು ಸುಧಾರಣೆಯನ್ನಾ ಕೊಡತಕ್ಕಂತಹಾ...."

"ಥೂ, ಥೂತ್ತೇರಿ!!"

* * * * * * *

ಯಾವುದೋ ಟ್ರ್ಯಾಕ್ಟರ್ ಏಜೆನ್ಸಿ ಮುಖಾಂತರ ನೀರಾವರಿ ಸಚಿವ ಈಶ್ವರಪ್ಪ ಚೀಣಾ ದೇಶಕ್ಕೆ ಹೋಗಿಬಂದು ಕಮ್ಯುನಿಸ್ಟ್ ನಾಗರಾಜನಂತೆ ಮಾತನಾಡುತ್ತಿದ್ದಾನೆಂದು ನಮಗೆ ವರ್ತಮಾನ ಬಂದಾಗಿನಿಂದ ಈಶ್ವರಪ್ಪನನ್ನು ಮಾತನಾಡಿಸಲೇಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು

"ಅನಿಸುತಿದೆ ಯಾಕೊ ಇಂದು ನೀನೇನೆ ನನ್ನವಳೆಂದೂ, ಅನಿಸುತಿದೆ ಯಾಕೊ ಇಂದು..."

"ಹಲೊ, ಯಾರ್ರಿ?"

"ನಾನು ಸಾರ್, ಯಾಹೂ ಅಂತ ಪತ್ರಕರ್ತ."

"ಏನಾಗಬೇಕು ಹೇಳ್ರಿ?"

"ಚೀಣಾದಿಂದ ಯಾವಾಗ ಬಂದ್ರಿ ಸಾರ್?"

"ನಾನು ಬಂದು ವಾರದ ಮೇಲಾಯ್ತು ಕಂಡ್ರಿ."

"ಚೀಣಾ ದೇಶ ಯಂಗಿದೆ ಸಾರ್?"

"ಭಾಳ ಚನ್ನಾಗಿದೆ ಕಂಡ್ರಿ. ಎಷ್ಟು ಚನ್ನಾಗಿದೆ ಅಂದ್ರೆ ಅದನ್ನ ಹೇಳಕ್ಕೆ ಬರಲ್ಲ, ಅಂತ ವ್ಯವಸ್ಥೆಯಿದೆ ಅಲ್ಲಿ."

"ನಮ್ಮ ದಕ್ಷಿಣ ಕನ್ನಡದಂಗೆ ಇದೆಯಾ ಸಾರ್?"

"ಸ್ವಲ್ಪ ಉಡುಪಿ ತರ ಇದೆ ಕಂಡ್ರಿ. ಆದ್ರು ಏನು ದೇಶ ಅದು ಬಿಡ್ರಿ. ನನಿಗಂತೂ ವಾಪಸು ಇಂಡಿಯಾಕ್ಕೆ ಬರಕ್ಕೇ ಮನಸಿರಲಿಲ್ಲ, ಅಲ್ಲೇ ಇದ್ದು ಬಿಡಾಣ ಅನ್ನಿಸಿತ್ತು. ಯಾವಾಗ ಎಡೂರಪ್ಪ, ಆಯನೂರ್, ಮಂಜುನಾಥ್ ಜ್ಞಾಪಕಕ್ಕೆ ಬಂದ್ರೋ ಕೂಡಲೇ ಓಡಿಬಂದೆ ಕಂಡ್ರಿ."

"ಒಳ್ಳೆ ಕೆಲಸ ಮಾಡಿದ್ರಿ. ಆ ಚೀಣಾ ದೇಶದಲ್ಲೂ ದನ ತಿಂತರಾ ಸಾರ್?"

"ದನ ತಿನ್ನದೇನು, ಆಡು ಕುರಿಯಿಂದ ಹಿಡಿದು ಹಾವು, ಮುಂಗುಸಿ, ಹಲ್ಲಿ ಕಪ್ಪೆನೂ ಬಿಡದಿಲವಂತೆ. ಅಂತಾ ರಾಕ್ಷಸ ಜನ ಅವರು."

"ಮತ್ತೆ ನೀವು ಸುಮ್ಮನೆ ಬಂದ್ರ?"

"ನಾನೇನೂ ಮುಟ್ಟಲಿಲ್ಲ ಕಂಡ್ರಿ. ಬರಿ ಚಪಾತಿ, ಅನ್ನ, ಬ್ರೆಡ್ಡು ತಿಂದೆ."

"ಅದಲ್ಲ ಸಾರ್, ನೀವು ಹಾವು ತಿನ್ನೋರ ಹಲ್ಲು ಮುರಿತಿನಿ, ಮುಂಗಸಿ ತಿಂದೋರ ಮೂಳೆ ಮುರಿತಿನಿ, ಕಪ್ಪೆ ತಿನ್ನೋರ ಕಪ್ಪೆಗೆ ವಡಿತಿನಿ ಅಂತ ಹೇಳಿ ಬರಬೇಕಾಗಿತ್ತು."

"ಅಂಗೇಳಿದ್ರೆ ನಾನಿಲ್ಲಿಗೆ ಬರ್ತನೇ ಇರಲಿಲ್ಲ, ನಮ್ಮ ದೇಶದಲ್ಲೇನೋ ಹೇಳಿ ಕೊಳ್ತಿವಿ. ಆದ್ರೆ ಅಲ್ಲಿ ಹೇಳಿ ಬದುಕಿ ಬರಕ್ಕಾಯ್ತದೇನ್ರೀ?"

"ಚೀಣಾ ಕಮ್ಯುನಿಸ್ಟ್ ದೇಶ. ಆ ದೇಶ ನೋಡಿ ಏನನ್ನುಸ್ತು?"

"ನಿಜವಾಗ್ಲು ನಾವು ಕಮ್ಯುನಲ್ ದೇಶ ಆಗಬೇಕು, ಇಲ್ಲ ಕಮ್ಯುನಿಸ್ಟ್ ದೇಶ ಆಗಬೇಕು ಅನ್ನಸ್ತು. ಅದೇನು ವ್ಯವಸ್ಥೆರಿ ಅಲ್ಲೀ. ಆ ರಸ್ತೆ, ಸೈಕಲ್, ಆ ಜನ ಒಂದೇ ತರ ಕುರಿಯಂಗಿದ್ರು ಕಣ್ರಿ. ಅವರು ನೀರು ಕುಡಿಯದು ನೋಡಿ ನಾವು ನಮ್ಮ ಜನಕ್ಕೆ ಆ ತರ ನೀವು ಬಳಸದ ಕಲುಸಬೇಕು ಅನ್ನುಸ್ತು ಕಂಡ್ರಿ. ನಿಜಕ್ಕೂ ನಮ್ಮ ಮಕ್ಕಳಿಗೆ ಒಂದನೇ ತರಗತಿಯಿಂದ ಇಂಗ್ಲಿಸ್ ಶಿಕ್ಷಣ ಕೊಡದಕಿಂತ ನೀರು ಬಳಸೊ ಪಠ್ಯ ಅಳವಡಸಬೇಕು ಅನ್ನುಸ್ತು."

"ನಿಜ ಸಾರ್, ನಮ್ಮ ಜನ ಸಿಕ್ಕಾಬಟ್ಟೆ ನೀರು ಕುಡುದು ಸಿಕ್ಕಾಬಟ್ಟೆ ಹುಚ್ಚೆ ಹುಯ್ತರೆ. ಇಲ್ಲ ಅಂದ್ರೆ ಈ ಬೇಸಗೆಲೂ ತುಂಗಾ ನದಿಲಿ ಉಚ್ಚೆ ವಾಸನೆ ನೀರು ಹರಿಯುತ್ತೆ ಅಂದ್ರೆ ಆಶ್ಚರ್ಯ."

"ಹೌದು ಕಂಡ್ರಿ. ದನದ ಹುಚ್ಚಿನ ನಮ್ಮ ರಾಘವೇಶ್ವರ ಸಾಮಿ ತಲೆಗಚ್ಚಿಗಂಡು ಕಾರ್ಯಕ್ರಮ ರೂಪುಸ್ತಾ ಅವ್ರೆ; ಮನುಸರ ಉಚ್ಚೆ ಉಪಯೋಗವಾಗಿ ಬಳಸಬಹುದು. ಚೀಣಾ ದೇಶ ಏನನ್ನು ವೇಸ್ಟಾಗದಕ್ಕೆ ಬಿಡೋದಿಲ್ಲ."

"ನೀವು ಭಜರಂಗಿತರ ಇದ್ದು ಕಮ್ಯುನಿಸ್ಟ್ ಚೀಣಾ ಹೊಗಳತಿರಲ್ಲಾ, ಯಾವ ಚೆಡ್ಡಿಗಳು ಸಿಟ್ಟಾಗಿಲ್ಲವೆ?"

"ಯಾಕೆ ಸಿಟ್ಟಾಗ್ತರೆ? ನಾನೇನು ಕಮ್ಯುನಿಸ್ಟಾಗಿದ್ದನ? ನಾನು ಸಾಯೋವರಿಗೂ ಚೆಡ್ಡಿ... ಅಲ್ಲ ಅರೆಸೆಸ್ಸೇ ಕಂಡ್ರೀ."

"ಥೂತ್ತೇರಿ!!!"

ದ್ರಾವಿಡರ ಯುದ್ಧ
ಗೌಡರ ಮಕ್ಕಳೂ ಸಿದ್ಧ

ತಮಿಳುನಾಡಿನ ಡಿಎಂಕೆ ನಾಯಕ ಹಾಗೂ ಮುಖ್ಯಮಂತ್ರಿ ಕರುಣಾನಿಧಿಗೀಗ 84 ವರ್ಷ. ಅವರ ಐವರು ಮಕ್ಕಳ ಪೈಕಿ ಇಬ್ಬರು ಮಕ್ಕಳಾದ ಅಳಗಿರಿ ಹಾಗೂ ಸ್ಟಾಲಿನ್ ಇಬ್ಬರೂ ರಾಜಕೀಯದಲ್ಲಿರುವವರಷ್ಟೇ ಅಲ್ಲ, ಮಹತ್ವಾಕಾಂಕ್ಷಿಗಳೂ ಕೂಡ.


ಇತ್ತ ಕರ್ನಾಟಕ ಕೋ-ಜಾ ಮೈತ್ರಿ ಸರ್ಕಾರದ ಸೂಪರ್ ಮುಖ್ಯಮಂತ್ರಿ ದೇವೇಗೌಡರಿಗೆ 75 ವರ್ಷ. ಅವರ ಇಬ್ಬರು ಮಕ್ಕಳಾದ ರೇವಣ್ಣ ಹಾಗೂ ಕುಮಾರಸ್ವಾಮಿ ರಾಜಕೀಯದಲ್ಲಿದ್ದಾರೆ. ಅಷ್ಟೇ ಅಲ್ಲ, ಕರುಣಾನಿಧಿಯ ಮಕ್ಕಳಂತೆ ಇವರೂ ಮಹತ್ವಾಕಾಂಕ್ಷಿಗಳೇ.


ಇದೊಂದು ತಮಿಳು ಸಿನಿಮಾದ ಕತೆಯ ಎಳೆ ಇಟ್ಟುಕೊಂಡು ದುರ್ಬಲ ಕನ್ನಡ ರಿಮೇಕ್ ಸಿನಿಮಾ ಮಾಡಿದಂತೆ ಅಂತ ಅನ್ನಿಸಬಹುದಾದರೂ ಇಂಟರ್‌ವೆಲ್ ನಂತರ ಕತೆ ಸ್ವಲ್ಪ ಬದಲಾಗುತ್ತದೆ.

ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿಯ ಉತ್ತರಾಧಿಕಾರಿ ಯಾರೆಂಬ ಬಗ್ಗೆ ಮೇ 9 ರಂದು ದಿನಕರನ್ ಪತ್ರಿಕೆ ಒಂದು ಸಮೀಕ್ಷೆ ಪ್ರಕಟಿಸಿದ ನಂತರ ಗಲಾಟೆಗಳಾಗಿ ಮೂವರು ಹತ್ಯೆಗೀಡಾದರು. ಸ್ಟಾಲಿನ್ ಮುಂದಿನ ನಾಯಕ ಎಂಬ ಕುಚೋದ್ಯದ ಸಮೀಕ್ಷೆ ವರದಿಯು ಕರುಣಾನಿಧಿಯ ಹಿರಿಯ ಮಗ ಅಳಗಿರಿಯನ್ನು ಎಷ್ಟು ರೊಚ್ಚಿಗೆಬ್ಬಿಸಿತ್ತೆಂದರೆ ಅವನು ತನ್ನ ಹಿಂಬಾಲಕರನ್ನು ಸೋದರ ಸಂಬಂಧಿಗಳ ಮಾಲೀಕತ್ವದ ದಿನಕರನ್ ಕಚೇರಿಗೇ ನುಗ್ಗಿಸಿ ಬೆಂಕಿ ಹಚ್ಚಿಸಿ ಮೂವರ ಸಾವಿಗೂ ಕಾರಣನಾಗಿಬಿಟ್ಟ.



ಇದು ದೇವೇಗೌಡರಿಗೆ ಅಷ್ಟು ಕಷ್ಟದ ವಿಚಾರವಲ್ಲ, ಗೌಡರು ಕಟ್ಟಿರುವ ಜೆಡಿಎಸ್ ಸಾಮ್ರಾಜ್ಯಕ್ಕೆ ಕುಮಾರಸ್ವಾಮಿಯೇ ಉತ್ತರಾಧಿಕಾರಿ ಎಂಬುದು ಈಗಾಗಲೇ ತೀರ್ಮಾನವಾಗಿ ಹೋಗಿದೆ. ಆದರೆ ಇನ್ನೊಬ್ಬ ಹಕ್ಕುದಾರ ರೇವಣ್ಣ ಚಲಾವಣೆಯಲ್ಲಿ ಇರುವ ತನಕವೂ ಉತ್ತರಾಧಿಕಾರಿ ಪ್ರಶ್ನೆ ಜೀವಂತವಾಗೇ ಇರುತ್ತದೆ ಅಲ್ಲವೆ?





ಸ್ಟಾಲಿನ್



ಅಳಗಿರಿ



ದಯಾನಿಧಿ ಮಾರನ್



ಕಲಾನಿಧಿ



ಕನಿಮೋಜಿ



ಬಾಲಕೃಷ್ಣೇಗೌಡ



ರೇವಣ್ಣ



ಕುಮಾರಸ್ವಾಮಿ



ರಮೇಶ್



ಭವಾನಿ ರೇವಣ್ಣ



ಅನಿತಾ ಕುಮಾರಸ್ವಾಮಿ

ಯಾವುದೇ ಸಾಮ್ರಾಜ್ಯ ಉದ್ಯಮ ಅಥವಾ ಕುಟುಂಬಗಳಲ್ಲಿ ಎಂತಾ ಸಮಸ್ಯೆ ಬಂದರೂ ಬಗೆಹರಿಸಬಹುದೇನೊ. ಆದರೆ ಮುಂದಿನ ಉತ್ತರಾಧಿಕಾರಿ ಯಾರೆಂಬ ಪ್ರಶ್ನೆ ಮಾತ್ರ ಸಲೀಸಾಗಿ ಬಗೆಹರಿಯುವುದಿಲ್ಲ. ಅಂತಾ ಮೊಗಲ್ ದೊರೆ ಷಹಜಹಾನ್‌ನನ್ನೇ ಕಿರಿ ಮಗ ಔರಂಗಜೇಬ್ ಜೈಲಿಗೆ ದೂಡಿ, ಹಿರಿಯಣ್ಣಂದಿರನ್ನು, ಸೆರೆ ಹಿಡಿದು ಕೊಲ್ಲಿಸಿ ಸಿಂಹಾಸನವನ್ನೇರಿದ್ದ.

ವಿಜಯನಗರದ ಅರಸರುಗಳ ಫ್ಯಾಮಿಲಿಯಲ್ಲಂತೂ ಉತ್ತರಾಧಿಕಾರಿ ಪ್ರಶ್ನೆ ಬಂದಾಗ ಪ್ರತಿಸ್ಪರ್ಧಿಗಳ ಕಣ್ಣು ಕೀಳಿಸುವುದು, ವಿಷ ಹಾಕಿ ಸಾಯಿಸುವುದೆಲ್ಲಾ ಮಾಮೂಲಿ ಸಂಗತಿಯಾಗಿತ್ತು ಬಿಡಿ. ಇನ್ನು ತೀರಾ ಆಧುನಿಕ ಕಾಲಕ್ಕೆ ಬಂದರೆ ಇಂದಿರಾ ಗಾಂಧಿಗೆ ಕಿರಿಮಗ ಸಂಜಯಗಾಂಧಿಯೇ ಉತ್ತರಾಧಿಕಾರಿ ಎಂಬಂತಿತ್ತು. ಅವನು ಅಕಸ್ಮಾತ್ತಾಗಿ ಸತ್ತ ಮೇಲೇ ಹಿರಿಮಗ ರಾಜೀವ್‌ಗಾಂಧಿಗೆ ರಾಜಕೀಯದಲ್ಲಿ ಜಾಗ ಸಿಗುವಂತಾಯಿತು.

ಇನ್ನೂ ರಿಲೆಯನ್ಸ್‌ನ ಧೀರೂಬಾಯಿ ಅಂಬಾನಿ ಸತ್ತ ಮೇಲೆ ಲಕ್ಷ ಕೋಟಿ ಬೆಲೆಯ ಅವನ ಉದ್ಯಮ ಸಾಮ್ರಾಜ್ಯದ ಅಧಿಪತಿ ಯಾರೆಂದು ಮುಖೇಶ್ ಹಾಗೂ ಅನಿಲ್ ಅಂಬಾನಿಗಳು ಹಾದಿರಂಪ ಬೀದಿರಂಪ ಮಾಡಿಕೊಂಡು ಕೊನೆಗೆ ಇದೀ ಸಾಮ್ರಾಜ್ಯವನ್ನೇ ಸಿಗಿದು ಹಂಚಿಕೊಂಡರು.

ಇವತ್ತು ಕರುಣಾನಿಧಿಯ ಕುಟುಂಬದಲ್ಲಿ ಸ್ಫೋಟಿಸಿರುವುದೂ ಇದೇ ಉತ್ತರಾಧಿಕಾರಿಯೆಂಬ ಜ್ವಾಲಾಮುಖಿಯೆ. ಇದಕ್ಕೆ ಪ್ರಚೋದನೆ ನೀಡಿ ಅಳಗಿರಿ ಮತ್ತು ಸ್ಟಾಲಿನ್‌ರನ್ನು ಜಗಳಕ್ಕೆ ಹಚ್ಚಿದ್ದು ಬೇರೆ ಯಾರೂ ಅಲ್ಲ, ಕರುಣಾನಿಧಿಯ ಭಾವ ದಿವಂಗತ ಮುರಸೋಲಿ ಮಾರನ್‌ರ ಮಕ್ಕಳಾದ ಸನ್ ಟಿವಿಯ ಕಲಾನಿಧಿ ಮಾರನ್ ಹಾಗೂ ಮಾಜಿ ಕೇಂದ್ರ ಮಂತ್ರಿ ದಯಾನಿಧಿ ಮಾರನ್‌ಗಳೇ!

ಈಗ 20 ಟೀವಿ ಚಾನಲ್ಲುಗಳು, 8 ಎಫ್‌ಎಂ ರೇಡಿಯೋ ಕೇಂದ್ರಗಳು, 2 ದಿನಪತ್ರಿಕೆಗಳ ಮಾಲೀಕನಾಗಿರುವ ಕಲಾನಿಧಿ ಮಾರನ್ ಹತ್ತಿರತ್ತಿರ 15 ಸಾವಿರ ಕೋಟಿಯ ಕುಳ. ಅವನ ಸೋದರ ದಯಾನಿಧಿ ಮಾರನ್ ಕರುಣಾನಿಧಿಯ ಕೃಪೆಯಿಂದ ಇದೇ ಮೊದಲ ಬಾರಿಗೆ ಸಂಸತ್ ಸದಸ್ಯನಾಗಿ ಗೆದ್ದು ಕೇಂದ್ರ ಸಚಿವನೂ ಆಗಿದ್ದ. ದಯಾನಿಧಿ ಕರುಣಾನಿಧಿಯ ಮಕ್ಕಳಂತೆ ಇರಲಿಲ್ಲ. ಇಂಗ್ಲಿಷ್-ಹಿಂದಿ ಗೊತ್ತಿದ್ದಾತ. ಸಂಪ್ರದಾಯಸ್ಥ ತಮಿಳು ರಾಜಕಾರಣಿಯಂತಿರದೆ ಬೆಳ್ಳಗೆ ಸೂಟು ಬೂಟು ಹಾಕಿಕೊಂಡು ದೆಹಲಿಯಲ್ಲಿ ತನ್ನದೇ ವರ್ಚಸ್ಸು ಬೆಳೆಸಿಕೊಂಡು ಸೋನಿಯಾ ಗಾಂಧಿಗೂ ಹತ್ತಿರದವನಾಗಿದ್ದ. ಇಷ್ಟೆಲ್ಲಾ ಕ್ವಾಲಿಟಿ ಲಿಂಕುಗಳಿರುವ ನಾನು ತಾನೆ ಕರುಣಾನಿಧಿಯ ಅರ್ಥಾತ್ ಡಿಎಂಕೆ ಪಾರ್ಟಿಯ ಉತ್ತರಾಧಿಕಾರಿಯಾಗಬೇಕೆಂಬ ದಯಾನಿಧಿಯ ಗುಪ್ತ ಆಸೆಯೆ ಮೊನ್ನಿನ ಗಲಾಟೆಗಳಿಗೆ ಪ್ರೇರಣೆ,

ಆದರೆ ಕರುಣಾನಿಧಿಯ ಮಕ್ಕಳು ಥೇಟ್ ದೇವೇಗೌಡರ ಮಕ್ಕಳ ತರಹವೆ. ತಮ್ಮತಮ್ಮಲ್ಲಿ ಎಷ್ಟೇ ಜಗಳವಿದ್ದರೂ ಕುಟುಂಬದ ವಿಚಾರ ಬಂದಾಗ ಥಟ್ಟೆಂದು ಒಗ್ಗಟ್ಟಾಗಿ ಶತ್ರುಗಳ ಮೈಮೇಲೆ ಏರಿ ಹೋಗಿ ಸದೆಬಡಿದು ಬಿಡುತ್ತಾರೆ; ಆಮೇಲೆ ತಮ್ಮ ಮಾಮೂಲಿ ಜಗಳ ಮುಂದುವರೆಸುತ್ತಾರೆ. ಹಾಗೆ ನೋಡಿದರೆ ತನ್ನ ಉತ್ತರಾಧಿಕಾರಿ ಯಾರೆಂಬ ಪ್ರಶ್ನೆಯನ್ನು ಬಗೆಹರಿಸುವುದು ಕರುಣಾನಿಧಿಗೆ ಸದ್ಯದ ಪರಿಸ್ಥಿತಿಯಲ್ಲಿ ಕಷ್ಟವೇ. ಅಳಗಿರಿ ಹಾಗೂ ಸ್ಟಾಲಿನ್ ಇಬ್ಬರೂ ಸಮಾನ ಬಲಿಷ್ಠರೆ, ತಂತ್ರ, ಕುತಂತ್ರ, ಕ್ರೌರ್ಯ ಆಕಾಂಕ್ಷೆಗಳಲ್ಲೂ ಸಮಬಲರೆ.

ಇದು ದೇವೇಗೌಡರಿಗೆ ಅಷ್ಟು ಕಷ್ಟದ ವಿಚಾರವಲ್ಲ, ಗೌಡರು ಕಟ್ಟಿರುವ ಜೆಡಿಎಸ್ ಸಾಮ್ರಾಜ್ಯಕ್ಕೆ ಕುಮಾರಸ್ವಾಮಿಯೇ ಉತ್ತರಾಧಿಕಾರಿ ಎಂಬುದು ಈಗಾಗಲೇ ತೀರ್ಮಾನವಾಗಿ ಹೋಗಿದೆ. ಆದರೆ ಇನ್ನೊಬ್ಬ ಹಕ್ಕುದಾರ ರೇವಣ್ಣ ಚಲಾವಣೆಯಲ್ಲಿ ಇರುವ ತನಕವೂ ಉತ್ತರಾಧಿಕಾರಿ ಪ್ರಶ್ನೆ ಜೀವಂತವಾಗೇ ಇರುತ್ತದೆ ಅಲ್ಲವೆ? ಇದು ಹೊರಗಡೆ ಗೊತ್ತಾಗದಿದ್ದರೂ ಗೌಡರ ಮನೆಯೊಳಗೆ ಸೊಸೆಯಂದಿರಾದ ಅನಿತಾ-ಭವಾನಿ ನಡುವೆ ಈಗಾಗಲೇ cold war ಚಾಲೂ ಆಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ ತಾನೆ. ಇದನ್ನು ಸುಸೂತ್ರವಾಗಿ ಬಗೆಹರಿಸಲು ಗೌಡರು ಕುಟುಂಬ ಒಳ ಮೀಸಲಾತಿ ಸ್ಕೀಂ ಒಂದನ್ನು ಹೇಗೂ ರೆಡಿ ಮಾಡಿಟ್ಟುಕೊಂಡಿದೆ. ಹಾಲಿ ಕೋ-ಜಾ ಸರ್ಕಾರದಲ್ಲಿ ಕುಮಾರಸ್ವಾಮಿಯ ಸಿಎಂ ಅವಧಿ ಮುಗಿದ ನಂತರ ಸರ್ಕಾರ ಆಗಲೂ ಉಳಿದಿದ್ದರೆ ಯಡ್ಡಿ ಸಿಎಂ ಆಗಿ ರೇವಣ್ಣ ಉಪಮುಖ್ಯಮಂತ್ರಿಯಾಗುವುದು ಖಚಿತ. ಆದರೆ ಅಷ್ಟಕ್ಕೆ ಸಮಾಧಾನ ಪಟ್ಟುಕೊಳ್ಳುವ ಜೀವವೇ ಗೌಡರದ್ದು? ರೇವಣ್ಣನೂ ಒಂದು ಸಾರಿ ಸಿಎಂ ಆಗಲಿ ಎಂಬುದೇ ಅವರ ಒಳ ಆಸೆ. ಇದು ರೇವಣ್ಣನ ಮಹತ್ವಾಕಾಂಕ್ಷೆಯೂ ಹೌದು. ಸದ್ಯಕ್ಕೆ ರೇವಣ್ಣನ ಆಸೆಗೆ ಅಡ್ಡಗೋಡೆಯಾಗಿ ನಿಂತಿರುವುದು ಸ್ವತಃ ಸೋದರ ಕುಮಾರಸ್ವಾಮಿಯೇ.

ಡಿಎಂಕೆಯೊಳಗೆ ಸಿವಿಲ್ ವಾರ್

ಡಿಎಂಕೆ ಸ್ಥಾಪನೆಯಾದಾಗಿನಿಂದಲೂ ರಾಮಸ್ವಾಮಿ ನಾಯ್ಕರ್ ಹಾಗೂ ಅಣ್ಣಾ ದೊರೈ, ಎಂಜಿಆರ್, ಕಾಮರಾಜ್ (ಮುಖ್ಯಮಂತ್ರಿಗಳು)ರಿಗೆ ತಮ್ಮ ಉತ್ತರಾಧಿಕಾರಿ ಪ್ರಶ್ನೆ ಉದ್ಭವಿಸಲೇ ಇಲ್ಲ, ಏಕೆಂದರೆ ಅವರ್ಯಾರಿಗೂ ಮಕ್ಕಳಿರಲಿಲ್ಲ. ಆದರೆ

ಬಳಿದಾಳೆ ಈಶ

ಕರುಣಾನಿಧಿಗೆ ಮೂವರು ಹೆಂಡತಿಯರು, ಐವರು ಮಕ್ಕಳಿದ್ದಾರೆ. ಅವರ ಪೈಕಿ ಮುತ್ತುಸೆಲ್ವಿ ಹಾಗೂ ತಮಿಳರಸನ್ ಹೊರತುಪಡಿಸಿ ಮಿಕ್ಕವರಾದ ಅಳಗಿರಿ, ಸ್ಟಾಲಿನ್ ಎಂಬ ಗುಂಡುಗೂಳಿಗಳು ನೇರ ರಾಜಕೀಯದೊಳಗಿದ್ದಾರೆ. ಮಗಳು ಕನಿಮೋಜಿ ಅಪ್ಪನಂತೆ ಬರಹಗಾರ್ತಿ, ಮದುವೆಗೂ ಮುಂಚಿನ ಸೆಕ್ಸ್ ವಿಚಾರದಲ್ಲಿ ನಟಿ ಖುಷ್ಬೂ ವಿವಾದಾಸ್ಪದ ಹೇಳಿಕೆ ನೀಡಿ ಪ್ರತಿಭಟನೆ ಎದುರಿಸಿದಾಗ ದಿಟ್ಟತನದಿಂದ ಖುಷ್ಬೂ ಪರ ದನಿ ಎತ್ತಿದಾಕೆ.

ಈ ಮೂವರಿಗೂ ಅಂತಹ sophistication ಇಲ್ಲ, ಜೊತೆಗೆ ಚುರುಕುಮತಿಗಳೂ ಅಲ್ಲ ಎಂದು ಭಾವಿಸಿದ್ದ ಮಾರನ್ ಕುಟುಂಬ ತನ್ನ ಕೈಲಿದ್ದ ಮೀಡಿಯಾಗಳ ಮೂಲಕ ಕರುಣಾನಿಧಿ ಮಕ್ಕಳನ್ನು ಸೈಡ್‌ಲೈನ್ ಮಾಡುತ್ತಾ ದಯಾನಿಧಿ ಮಾರನ್‌ನನ್ನೇ ಮುಂದಿನ ಡಿಎಂಕೆ ಲೀಡರ್ ಎಂಬಂತೆ ಪ್ರಮೋಟ್ ಮಾಡಲು ಶುರು ಮಾಡಿತ್ತು, ಈಗ್ಗೆ ಕೆಲವು ತಿಂಗಳ ಹಿಂದೆ ಏಕಾಏಕಿ 'ತಮಿಳುನಾಡಿನ ಕೇಂದ್ರ ಸಚಿವರ ಪೈಕಿ ದಕ್ಷರ್ಯಾರು?' ಎಂಬ ಸಮೀಕ್ಷೆ ನಡೆಸಿ ತಾನೇ 'ದಯಾನಿಧಿ ಮಾರನ್' ಎಂಬ ಉತ್ತರ ಪ್ರತಿಪಾದಿಸಿತ್ತು, ಹಿರಿಯ ಪಿ. ಚಿದಂಬರಂ, ಟಿ.ಆರ್. ಬಾಲು, ಪಿಎಂಕೆಯ ರಾಮದಾಸ್ ಮುಂತಾದವರನ್ನು ದಿನಕರನ್ ಪತ್ರಿಕೆ ಲೆಕ್ಕಕ್ಕೇ ತೆಗೆದುಕೊಂಡಿರಲಿಲ್ಲ,

ಆಗಲೇ ಕಿರಿಕಿರಿಗೊಳಗಾಗಿದ್ದ ಕರುಣಾನಿಧಿ 'ಇಂತಾ ಸರ್ವೆಗಳನ್ನು ಇನ್ನು ಮುಂದೆ ಪ್ರಕಟಿಸಬೇಡಿ' ಎಂದು ಎಚ್ಚರಿಸಿದ್ದರಂತೆ. ಹಾಗಂತ ಹೇಳಿದ ಮೇಲೂ ಮೊನ್ನೆ ದಿನಕರನ್ ಮತ್ತೆ ಪ್ರಕಟಿಸಿದ್ದೇ 'ಕರುಣಾನಿಧಿ ಉತ್ತರಾಧಿಕಾರಿ ಯಾರೆಂಬ' ಸಮೀಕ್ಷಾ ವರದಿ. ಅದರಲ್ಲಿ ಸ್ಟಾಲಿನ್ ಪರ 70%, ಅಳಗಿರಿ ಹಾಗೂ ಕನಿಮೊಜಿ ಪರ ತಲಾ 2% ಜನಾಭಿಪ್ರಾಯವಿದೆ ಎಂದು ಪ್ರಕಟಿಸಿ ಇತರರು (ದಯಾನಿಧಿ ಮಾರನ್) 20% ಎಂದು ಬಿಂಬಿಸಲಾಗಿತ್ತು,

ಕರುಣಾನಿಧಿ ಬೇಡವೆಂದಿದ್ದರೂ ಕಲಾನಿಧಿಯ 'ದಿನಕರನ್' ಈ ಸಮೀಕ್ಷೆ ಪ್ರಕಟಿಸಿದ್ದು ಅಳಗಿರಿ-ಸ್ಟಾಲಿನ್ ನಡುವಿನ ಜಗಳ ಹುಟ್ಟುಹಾಕಲು ಎಂಬುದು ಎಂತವರಿಗೂ ಗೊತ್ತಾಗುವಂತಿತ್ತು, ಅವರ ಗದ್ದಲದಲ್ಲಿ ದಯಾನಿಧಿ ಮಾರನ್ ಸರ್ವಸಮ್ಮತ ಉತ್ತರಾಧಿಕಾರಿಯಾಗಬೇಕೆಂಬುದೇ ಮಾರನ್ ಕುಟುಂಬದ ಪ್ಲಾನ್ ಆಗಿತ್ತು, ಆದರೀಗ ಅವರ ಪ್ಲಾನ್ ಅಳಗಿರಿ ಏಟಿಗೆ ಸಿಕ್ಕು ಚಿಂದಿಯಾಗಿದೆ. ಅಣ್ಣತಮ್ಮಂದಿರು ತಮ್ಮತಮ್ಮಲ್ಲೇ ಕಚ್ಚಾಟ ನಿಲ್ಲಿಸಿ ದಯಾನಿಧಿ ಮಾರನ್‌ನನ್ನೇ ಪಾರ್ಟಿಯಿಂದ ಒದ್ದೋಡಿಸಿದ್ದಾರೆ.

ಕರುಣಾನಿಧಿಗೂ ದಯಾನಿಧಿ ಮೇಲೆ ಕೋಪ ಬರಲು ಇನ್ನೊಂದು ಕಾರಣ ಇತ್ತು. ಈ ಸಮೀಕ್ಷೆ ಗಲಾಟೆಗಳಾದಾಗಲೇ ಕರುಣಾನಿಧಿ ಶಾಸಕರಾಗಿ 50 ವರ್ಷ ಪೂರೈಸಿದ ಸಂಭ್ರಮಾಚರಣೆ ಇತ್ತು. ಅದನ್ನು ಡಿಸ್ಟರ್ಬ್ ಮಾಡಲೆಂದೇ ಮಾರನ್‌ಗಳು ಈ ಸರ್ವೆ ಬೆಂಕಿ ಹಚ್ಚಿದರೆಂಬ ಅನುಮಾನಗಳಿವೆ.

ಜೊತೆಗೆ ಮೇ 1 ರಂದು ಸ್ಟಾಲಿನ್ ಅಭಿಮಾನಿಗಳು ತಮ್ಮ ನಾಯಕನ ಹುಟ್ಟಿದ ದಿನ ಆಚರಿಸುತ್ತಿದ್ದಾಗ ಅದೇ ದಿನ 'ದಿನಕರನ್' ಮುಖಪುಟದಲ್ಲಿ ಅಮೆರಿಕದ ಸ್ಯಾನ್ ಡಿಯಾಗೋದ ಜೂನಲ್ಲಿದ್ದ 'ಸ್ಟಾಲಿನ್' ಎಂಬ ಹೆಸರಿನ ಚಿಂಪಾಂಜಿಯೊಂದರ ಬರ್ತ್‌ಡೇ ಆಚರಣೆ ಫೋಟೋ ಪ್ರಕಟಿಸಲಾಗಿತ್ತು, ಅದೂ ಮುಖಪುಟದಲ್ಲೇ! ಅದೊಂದು ಉದ್ದೇಶಪೂರ್ವಕ ಕುಚೋದ್ಯವಾಗಿತ್ತು, ಈಗ ಬೀದಿ ಜಗಳವಾಗಿ ಹೊರಬಂದಿದೆ. ಬಂಧುಗಳಾಗಿದ್ದ ಕರುಣಾನಿಧಿ-ಮಾರನ್ ಕುಟುಂಬಗಳು ಈಗ ವೈರಿಗಳಾಗಿದ್ದಾರೆ.

ಈಗ ತಕ್ಷಣದಲ್ಲಿ ಉತ್ತರಾಧಿಕಾರಿ ಯಾರೆಂಬ ಪ್ರಶ್ನೆಗಿಂತ ಬಗೆಹರಿಯಬೇಕಾದ ಇನ್ನೊಂದು ಕುತೂಹಲಕಾರಿ ವಿಚಾರವಿದೆ.

ಅದು, ಮಾರನ್-ಕರುಣಾನಿಧಿ ಕುಟುಂಬಗಳ ದ್ರಾವಿಡ ಜಗಳದಲ್ಲಿ ರಾಜಕೀಯ ಅಧಿಕಾರ-ತೋಳ್ಬಲ ಇರುವವರು ಗೆಲ್ಲುತ್ತಾರೋ (ಕರುಣಾನಿಧಿ) ಅಥವಾ ಹಣ, ಮೀಡಿಯಾ ಬಲವಿರುವವರು (ಮಾರನ್) ಗೆಲ್ಲುತ್ತಾರೋ ಎಂಬುದು!

ಈ ವಿಚಾರಗಳಲ್ಲೆಲ್ಲಾ ದೇವೇಗೌಡರು ಅದೃಷ್ಟಶಾಲಿಗಳೆಂದೇ ಹೇಳಬೇಕು. ಗೌಡರಿಗೆ 4 ಗಂಡು, 2 ಹೆಣ್ಣುಮಕ್ಕಳಿದ್ದಾರೆ, ಆದರೆ ಅದೃಷ್ಟವಶಾತ್ ಚೆನ್ನಮ್ಮ ಒಬ್ಬರೆ ಪತ್ನಿ. ಗೌಡರ ಮಕ್ಕಳು, ಸೊಸೆಯಂದಿರು, ಅಳಿಯಂದಿರೆಲ್ಲಾ ದುಡ್ಡು ನುಂಗಲು ಬೇರೆಬೇರೆ ಕಡೆ ಕೈಹಾಕುತ್ತಾರಾದರೂ ದಿನದ ಕೊನೆಯಲ್ಲಿ ಎಲ್ಲಾ

ಚೆಲುವರಾಯಸ್ವಾಮಿ–ಡಿಕೆ ಡಿಂಗ್‌ಡಾಂಗ್

ಪಾಪ, 75 ರ ಈ ಇಳಿವಯಸ್ಸಿನಲ್ಲೂ ಮಣ್ಣಿನ ಮಗ ದೇವೇಗೌಡ್ರು ತಾವು ಸಾಗುವಳಿ ಮಾಡಿಕೊಂಡು ಬಂದಿದ್ದ ಜಾತ್ಯತೀತ ದಳವೆಂಬ ಗದ್ದೆಯನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಈಗ ಮಕ್ಕಳಿಗೆ ಆಸ್ತಿ-ಅಧಿಕಾರ ನಿರ್ವಹಣೆಯ ಜವಾಬ್ದಾರಿ ಹೊರಿಸಿ ಗೌಡರು ಹಗಲೂ ರಾತ್ರಿ ಕಾವಲು ಕಾಯುತ್ತಾ ಎಲ್ಲೂ ಗದ್ದೆ ಬದು ಒಡೆದು ಹೋಗದಂತೆ ಜೋಪಾನ ಮಾಡುತ್ತಿದ್ದಾರಾದರೂ ಈಗ ಅನಾಹುತವೊಂದು ಸಂಭವಿಸಿಬಿಟ್ಟಿದೆ.



ಆಯಕಟ್ಟಿನ ಜಾಗದಲ್ಲೇ ಗದ್ದೆಯ ಬದು ಬಿರುಕು ಬಿಟ್ಟಿದೆ! ಅರ್ಥಾತ್ ಗೌಡರ ನೆಚ್ಚಿನ ನೀಲಿಕಣ್ಣಿನ ಹುಡುಗ, ಒಕ್ಕಲಿಗರ ಉಯುವ ಮುಖಂಡ, ಸಾರಿಗೆ ಸಚಿವ ಚೆಲುವರಾಯಸ್ವಾಮಿ ಈಗ ಗೌಡರಿಗೇ ಕೈ ಕೊಡಲು ರೆಡಿಯಾಗುತ್ತಿದ್ದಾರೆ. ಅಷ್ಟೇ ಅಲ್ಲ, ಕಾಂಗ್ರೆಸ್‌ನ ಇನ್ನೋರ್ವ ಒಕ್ಕಲಿಗ ಲೀಡರ್ ಡಿ.ಕೆ. ಶಿವಕುಮಾರ್ ಜೊತೆ ಸರಸ ಶುರುಮಾಡಿಕೊಂಡಿದ್ದಾರೆ.


ಇತ್ತೀಚೆಗೆ ಮೇ 15ರಂದು ಡಿ.ಕೆ. ಶಿವಕುಮಾರ್ ತನ್ನ 46 ನೇ ಬರ್ತಡೇ ಆಚರಿಸಿಕೊಂಡಾಗ ಶುಭಾಷಯ ಕೋರಿದವರು ಅಸಂಖ್ಯಾತ ಜನ. ಅವರಲ್ಲಿ ಸ್ವತಃ ಆದಿಚುಂಚನಗಿರಿ ಸ್ವಾಮಿಯೂ ಒಬ್ಬರು. ಆದರೆ ಗೌಡರ ನೆಚ್ಚಿನ ಭಂಟ ಅರಣ್ಯ ಸಚಿವ ಚೆನ್ನಿಗಪ್ಪ ತಾನೇ ಡಿಕೆ ಮನೆಗೂ ಹೋಗಿ ಅಭಿನಂದಿಸಿ ಬಂದರು. ಅದಕ್ಕಿಂತ ಆಶ್ಚರ್ಯಕರ ಘಟನೆ ಆಮೇಲೆ ನಡೆಯಿತು. ಗೌಡರ ಇನ್ನೊಬ್ಬ ನಂಬಿಕಸ್ತ ಸಚಿವ ಚೆಲುವರಾಯಸ್ವಾಮಿ ತಾವೇ ನೇರವಾಗಿ ಡಿಕೆಗೆ ಫೋನ್ ಮಾಡಿ ಶುಭಾಶಯ ತಿಳಿಸಿದ್ದೇ ಅಲ್ಲದೆ ಅಂದು ರಾತ್ರಿ ಡಿಕೆ ಅರೇಂಜ್ ಮಾಡಿದ್ದ ಖಾಸಗಿ ಪಾರ್ಟಿಯಲ್ಲೂ ಕಾಣಿಸಿಕೊಂಡಿದ್ದಾರೆ ಮತ್ತು ಇದು ಇಂಟೆಲಿಜನ್ಸ್ ಮೂಲಕ ಪದ್ಮನಾಭನಗರ ನಿವಾಸಿ ದೊಡ್ಡಗೌಡರಿಗೂ, ರಾಧಿಕಾ ನಿವಾಸಿ ಕುಮಾರಸ್ವಾಮಿಗೂ ಗೊತ್ತಾಗಿದೆ.

ಇಂಥದೊಂದು ಸೀಕ್ರೆಟ್ ವಿದ್ಯಮಾನ ಕೆಲವು ತಿಂಗಳುಗಳಿಂದ ನಡೆಯುತ್ತಾ ಬಂದಿದೆ. ಯಾವ ಉದ್ದೇಶ, ಎತ್ತಿನ್ಯಾವ ಲಿಂಕುಗಳಿವೆಯೊ ಭಗವಂತನೇ ಬಲ್ಲ. ಆದರೆ ಗೌಡರ ನಂಬಿಕಸ್ತ ನಾಗಮಂಗಲ ಶಾಸಕ ಚೆಲುವರಾಯಸ್ವಾಮಿಗೂ ಗೌಡರ ಆಜನ್ಮ ವೈರಿ ಡಿ.ಕೆ. ಶಿವಕುಮಾರ್‌ಗೂ ಇತ್ತೀಚೆಗೆ ಭಾರಿ ದೋಸ್ತಿ ಕುದುರಿಬಿಟ್ಟಿದೆ. ಗೌಡರ ಪಾಳೆಯದೊಳಗೇ ಡಿಕೆ ಪರ ಬೇಹುಗಾರಿಕೆ ನಡೆಸುತ್ತಿರುವ ಅನೇಕ ಜನ ಇದ್ದಾರೆ. ಆದರೆ ಅವರ್‍ಯಾರೂ ಚೆಲುವರಾಯಸ್ವಾಮಿ ಹೋದಷ್ಟು ಡಿಕೆ ಹತ್ತಿರ ಹೋಗಿಲ್ಲ.

ಸಾರಿಗೆ, ಆರೋಗ್ಯ ಇಲಾಖೆಗಳಲ್ಲೂ ಚೆನ್ನಾಗಿ ಮೇದು ದಪ್ಪಗಾಗಿರುವ ಚೆಲುವರಾಯಸ್ವಾಮಿಗೀಗ ತಾನೇ ಮುಂದಿನ ಉಪಮುಖ್ಯಮಂತ್ರಿ ಆಗಬಾರದೇಕೆ ಎಂಬ ಹುಳುವೂ ಹತ್ತಿಬಿಟ್ಟಿದೆ. ಇದು ಗೌಡರಿಗೂ ಗೊತ್ತಾಗಿ ಚೆಲುವರಾಯಸ್ವಾಮಿಗೆ ಲಗಾಮು ಹಾಕಿ ತುಳಿಯಲು ನೋಡುತ್ತಿದ್ದಾರೆ. ಈ ನಡುವೆ ಕಾಂಗ್ರೆಸ್‌ನ ಡಿ.ಕೆ., ಬಿಜೆಪಿಯ ಆರ್. ಅಶೋಕ್ ಹಾಗೂ ಜೆಡಿಎಸ್‌ನ ಚೆಲುವರಾಯಸ್ವಾಮಿ ಈ ಮೂವರ ಕೂಟವೊಂದು ರಚನೆಯಾಗಿದೆ. ಮುಂದಿನ ಒಕ್ಕಲಿಗ ನಾಯಕರೆನಿಸಿಕೊಳ್ಳಬೇಕಾದ ತಾವುಗಳು ಯಾವುದೇ ಪಕ್ಷದೊಳಗಿರಲಿ ಪರಸ್ಪರರಿಗೆ ನೆರವಾಗುತ್ತಾ ರಾಜಕೀಯ ಭವಿಷ್ಯ ರೂಪಿಸಿಕೊಳ್ಳಬೇಕೆಂಬ ಒಪ್ಪಂದವೂ ಇವರ ನಡುವೆ ಆಗಿರುವಂತಿದೆ.

ಚೆಲುವನ ಭಯ

ಒಬ್ಬ ಆರ್ಡಿನರಿ ಕಂಟ್ರಾಕ್ಟರ್ ಹಾಗೂ ಜಿಲ್ಲಾ ಪಂಚಾಯತಿ ಮೆಂಬರ್ ಆಗಿದ್ದ ಚೆಲುವರಾಯಸ್ವಾಮಿಯನ್ನು ಫುಲ್‌ಟೈಂ ರಾಜಕಾರಣಿಯಾಗಿಸಿ ಅಸೆಂಬ್ಲಿಗೆ ನಿಲ್ಲಿಸಿ ಶಾಸಕನನ್ನಾಗಿಸಿದ್ದೇ ದೇವೇಗೌಡ. ಚುನಾವಣಾ ರಾಜಕೀಯಕ್ಕೆ ಬೇಕಾದ ಎಲ್ಲಾ ವುಂಡು ವರಸೆಗಳನ್ನು ಅರೆದು ಕುಡಿದಿದ್ದ ಚೆಲುವರಾಯಸ್ವಾಮಿ 2004 ರ ಎಲೆಕ್ಷನ್‌ನಲ್ಲೂ ಗೆದ್ದು ಧರಂಸಿಂಗ್ ಸಂಪುಟದಲ್ಲಿ ಆರೋಗ್ಯ ಸಚಿವರಾದರು. ಆದರೆ ಗೌಡರು ಗಮನಿಸಿರದಿದ್ದ ಸಂಗತಿ ಏನೆಂದರೆ ಜಿಲ್ಲಾ ಪಂಚಾಯತಿ ಮೆಂಬರ್ ಆಗಿದ್ದಾಗಿನಿಂದಲೂ ಚೆಲುವಣ್ಣನಿಗೆ ಡಿಕೆ ಜೊತೆ ವಿಧೇಯತೆಯ ಗೆಳೆತನವಿತ್ತೆಂಬುದನ್ನು. ಹೀಗೆ ಒಂದು ದಶಕದಿಂದಲೂ ಬೆಳೆದುಕೊಂಡು ಬಂದಿರುವ ಇವರ ಸ್ನೇಹ ಈಗ ಇನ್ನಷ್ಟು ಗಟ್ಟಿಯಾಗಲು ಗೌಡರ ಪುತ್ರವ್ಯಾಮೋಹ ಹಾಗೂ ಚೆಲುವರಾಯಸ್ವಾಮಿಯ ಮಹತ್ವಾಕಾಂಕ್ಷೆಗಳೇ ಕಾರಣವಾಗಿದೆ. ಜೊತೆಗೆ ತನ್ನ ರಾಜಕೀಯ ಭವಿಷ್ಯದ ಬಗ್ಗೆ ಚೆಲುವನಿಗೆ ಭಯವಾಗಿರುವುದೂ ಇನ್ನೊಂದು ಕಾರಣ.



ಈಗ ರಾಜಕೀಯವಾಗಿ ಬೆಳೆದು ಬಲಿತ ತೋಳನಂತಾಗಿರುವ ಚೆಲುವರಾಯಸ್ವಾಮಿ ಮೊದಲಿಗೆ ಆರೋಗ್ಯ ಮಂತ್ರಿಯಾದಾಗ ಅಜೀರ್ಣವಾಗುವಷ್ಟು ದುಡ್ಡು ನುಂಗಿದ್ದರು. ಹಣ ಮಾಡುವಲ್ಲಿ ಈತ ತೋರಿದ ದಕ್ಷತೆ-ವೇಗ ಗಮನಿಸಿ ಖುಷಿಯಾದ ಗೌಡರು ಸಾರಿಗೆ ಇಲಾಖೆಗೆ ತಂದುಬಿಟ್ಟರು. ಚೆಲುವಣ್ಣ ಅಲ್ಲೂ ಮಿಂಚಿಬಿಟ್ಟ. ಆದರೆ ಗೌಡರ ಕುಟುಂಬಕ್ಕೆ ಸಲ್ಲಿಸಬೇಕಿದ್ದ ಕಪ್ಪು ಕಾಣಿಕೆ ನೀಡಲು ಮರೆತ ಕಾರಣ ಗೌಡರೇ ಖುದ್ದು ನಿಂತು ಸಣ್ಣ ಪಂಕ್ಚರ್ ಮಾಡಿಸಿಬಿಟ್ಟರು. ಅಂದರೆ ಐಪಿಎಸ್ ನಾರಾಯಣಗೌಡನನ್ನು ಸಾರಿಗೆ ಇಲಾಖೆ ಕಮಿಷನರ್ ಆಗಿ ತಂದು ಕೂರಿಸಿದರು. ಚೆಲುವರಾಯಸ್ವಾಮಿಗೆ ಲಗಾಮು ಹಾಕಲೆಂದೇ ಈ ಕೆಲಸ ಮಾಡಲಾಗಿತ್ತು. ಅಷ್ಟರಲ್ಲಿ ಚೆನ್ನಾಗಿ ಮೇದು ದುಂಡಗಾಗಿದ್ದ ಚೆಲುವುಗೆ ಕುಮಾರ ಸ್ವಾಮಿ ಅವಧಿ ಮುಗಿದ ನಂತರ ಯಡ್ಡಿ ಸಿಎಂ ಆದರೆ ನಾನೇ ಉಪಮುಖ್ಯಮಂತ್ರಿ ಆಗಬಾರದೇಕೆ ಎಂಬ ಯೋಚನೆ ಬಂತು. ಅಂಥದ್ದೊಂದು ಗಾಳಿಸುದ್ದಿಯನ್ನು ಚೆಲುವರಾಯಸ್ವಾಮಿಯೇ ತೇಲಿಬಿಟ್ಟರು.

ರೇವಣ್ಣ ತುಂಬಬೇಕಿರುವ ಸ್ಥಾನ ಅದು!

ತಮ್ಮ ಮಕ್ಕಳ ವಿಚಾರ ಬಂದರೆ ಆಗತಾನೆ ಈದ ಹುಲಿಯಂತಾಗಿ ಬಿಡುವ ವಯೋವೃದ್ಧ ಗೌಡರು ಚೆಲುವರಾಯಸ್ವಾಮಿ ಬೆಳೆದಿದ್ದು ಸಾಕು ಎಂದು ನಿರ್ಧರಿಸಿಕೊಂಡರು. ಚೆಲುವನನ್ನು ಆದಷ್ಟೂ ದೂರ ವಿಡುತ್ತಾ ಆತನ ಕಮಾಯಿ ಕಾಲುವೆಗಳಿಗೆ ಮಣ್ಣು ಹಾಕಿಬಿಟ್ಟರು. ಜೆಡಿಎಸ್‌ನಲ್ಲಿ ಇನ್ನೇನು ಲಾಗ ಹಾಕಿದರೂ ತನಗಲ್ಲಿ ಭವಿಷ್ಯವಿಲ್ಲ ಎಂದು ಕೊರಗುತ್ತಿರುವ ಚೆಲುವ ಈಗ ಆ ಕಾರಣಕ್ಕೇನೆ ಡಿಕೆ ಜೊತೆ ಕೈ ಜೋಡಿಸುತ್ತಿದ್ದಾರೆ. ಇದಕ್ಕೆ ಇತ್ತೀಚೆಗೆ ಜೊತೆಗೂಡಿದ್ದೇ ಸಿದ್ದರಾಮಯ್ಯ ಕಾಂಗ್ರೆಸ್ ಸೇರಿದ ಪ್ರಸಂಗ.

ನಾಗಮಂಗಲದಲ್ಲಿ ಒಕ್ಕಲಿಗ ಮತದಾರರೇ ಮೆಜಾರಿಟಿ ಇದ್ದರೂ 26 ಸಾವಿರ ಕುರುಬರೂ 15 ಸಾವಿರ ಮುಸ್ಲಿಂ ಓಟುಗಳಿವೆ. ಬಹುಪಾಲು ಒಕ್ಕಲಿಗರ ಓಟುಗಳು ಕಾಂಗ್ರೆಸ್‌ನ ಶಿವರಾಮೇಗೌಡರಿಗೆ ಬೀಳುವುದು ಅಲ್ಲಿನ ವಾಡಿಕೆ. ಆದರೆ ಈ ಕ್ಷೇತ್ರದ ನಿರ್ಣಾಯಕ ಓಟುಗಳಿರುವುದು ಕುರುಬ ಮತದಾರರ ಕೈಯಲ್ಲಿ. ಮತ್ತವರಿಗೆ ಸಿದ್ದರಾಮಯ್ಯನವರೇ ನಾಯಕ. ಅಂತಾ ಸಿದ್ದರಾಮಯ್ಯ ಈಗ ಕಾಂಗ್ರೆಸ್ ಸೇರಿರುವುದರಿಂದ ಕುರುಬರು ಗೌಡರ ಭಂಟ ಜೆಡಿಎಸ್‌ನ ಚೆಲುವನತ್ತ ತಿರುಗಿಯೂ ನೋಡುವುದಿಲ್ಲವೆಂಬ ಸತ್ಯ ಸ್ವತಃ ಚೆಲುವುಗೂ ಗೊತ್ತಿದೆ. ಇನ್ನೂ ಜೆಡಿಎಸ್ ಕೋಮುವಾದಿ ಬಿಜೆಪಿ ಜೊತೆ ಸೇರಿರುವುದರಿಂದ ಮುಸ್ಲಿಮರ ಬೆಂಬಲವೂ ಸಿಗುವ ಛಾನ್ಸ್ ಇಲ್ಲ. ನಾಳಿನ ಚುನಾವಣಾ ಭವಿಷ್ಯ ಹೀಗೆ ಅಪಾಯಕಾರಿಯಾಗಿ ಬದಲಾಗುತ್ತಿರುವಾಗ ಮತ್ತು ಹಾಲಿ ದೇವೇಗೌಡರೇ ತುಳಿಯುತ್ತಿರುವುದರಿಂದ ಚೆಲುವರಾಯ ಸ್ವಾಮಿಗೆ ಕಾಂಗ್ರೆಸ್ಸೇ ತನ್ನ ನಾಳಿನ ಮನೆ ಎಂಬ ಅನಿಸಿಕೆ ಬಾರದಿರುತ್ತದೆಯೇ?

ಚೆಲುವು ವಿರುದ್ಧ ಗೌಡರು ಮುನಿಸಿ ಕೊಳ್ಳಲು ಇನ್ನೊಂದು ಕಾರಣವೂ ಇದೆ. ಜೆಡಿಎಸ್ ವಿಭಜಿಸಿ ಒಮ್ಮೆ 20 ಶಾಸಕರನ್ನು ಕರೆದುಕೊಂಡು ಕಾಂಗ್ರೆಸ್‌ನತ್ತ ಚೆಲುವ ಹೊರಡುವ ತಯಾರಿಯಲ್ಲಿದ್ದರೆಂಬ ರೂಮರ್ ಅದು ಹೇಗೋ ದೇವುಗೆ ತಲುಪಿತು ಎನ್ನಲಾಗಿದೆ. ಇದೂ ಕೂಡ ಡಿ.ಕೆ. ಹಾಕಿಕೊಟ್ಟಿದ್ದ ಸ್ಕೀಂ!

ಈ ಚೆಲುವರಾಯಸ್ವಾಮಿಗೆ ತನ್ನ ರಾಜಕೀಯ ಭವಿಷ್ಯದ ಬಗ್ಗೆ ಅದಿನ್ನೆಷ್ಟು ಭಯವಾಗಿದೆಯೆಂದರೆ ಚಾಮುಂಡೇಶ್ವರಿ ಉಪಚುನಾವಣೆ ವೇಳೆ ನಾಗಮಂಗಲದಿಂದಲೇ ಕನಿಷ್ಠ ಒಂದು ಸಾವಿರ ಕುರುಬ ಕಾರ್ಯಕರ್ತರನ್ನು ಅಲ್ಲಿಗೆ ಕಳುಹಿಸಿ ಕೊಟ್ಟಿದ್ದರು.....!

ಕಾಂಗ್ರೆಸ್‌ನ ಸಿದ್ದರಾಮಯ್ಯ ಪರ ಕೆಲಸ ಮಾಡಿ ಕುರುಬರ ಓಟು ಹಾಕಿಸಲು!!

ಅಷ್ಟೇ ಅಲ್ಲ ಡಿ.ಕೆ. ಆದೇಶದಂತೆ ಸಿದ್ಧರಾಮಯ್ಯನವರ ಎಲೆಕ್ಷನ್ ಖರ್ಚಿಗೂ ಹಣ ಕಳುಹಿಸಿದ್ದರೆಂಬುದು ಆಗಲೇ ಗೊತ್ತಾಗಿತ್ತು. ಆ ಹಣ ಕೋಟಿಗಳ ಮೊತ್ತದಲ್ಲಿತ್ತು.



ಇಂಥ ಡಬಲ್‌ಗೇಂ ಮಾಡುವವನನ್ನು ದೇವೇಗೌಡರು ನಂಬುತ್ತಾರಾ?

ಅದು ಹೋಗಲಿ ಬಿಡಿ, ಬೇರೆಯವರನ್ನೆಲ್ಲಾ ಪಾತಾಳಕ್ಕೆ ತುಳಿಯುತ್ತಾ ಕೇವಲ ತನ್ನ ಮಕ್ಕಳ ಬಗ್ಗೆ ಯೋಚಿಸುವ ಗೌಡರನ್ನು ಚೆಲುವರಾಯಸ್ವಾಮಿ ತಾನೆ ಯಾಕೆ ನಂಬಬೇಕು?

ನಂಬ ಕೆಡಬೇಕು ಹೇಳಿ?

–ಈಶ

...ದುಡ್ಡುರಾಶಿ ಸುರಿದು ತಮ್ಮತಮ್ಮ ಸಾಧನೆ ಪ್ರದರ್ಶಿಸಿಕೊಳ್ಳುತ್ತಾರೆ. ಪರಸ್ಪರ ಪೈಪೋಟಿಗೆ ಬಿದ್ದವರಂತೆ ಆಸ್ತಿ ...ಡವೆ ಖರೀದಿಸಿ ಬೀಗುತ್ತಿರುತ್ತಾರೆ. ಇವರ ಮಧ್ಯೆ ...ಳ ತಂದಿಡಲು ಪ್ರಯತ್ನಿಸಿದ ಯಾವನೂ ಇದುವರೆಗೂ ...ಸ್ ಆಗಿಲ್ಲ. ಒಂದು ವೇಳೆ ಕುಮಾರಸ್ವಾಮಿ-ರೇವಣ್ಣ ...ಡಿಕೊಂಡಂತೆ ತೋರಿಸಿಕೊಂಡರೂ ಅದರ ಹಿಂದೆ ...ಷ್ಟು ಕುಟುಂಬದ ಹೊರಗಿನ ಪಾರ್ಟಿ ಅತ್ಯಾಪ್ತರನ್ನು ...ಹಚ್ಚುವ ಪಿತೂರಿಯೇ ಆಗಿರುತ್ತದೆಯೇ ವಿನಃ ಅದು ... ಜಗಳವಾಗಿರುವುದಿಲ್ಲ. ಏನೋ ಪುಣ್ಯವಶಾತ್ ...ಡರು ಕರುಣಾನಿಧಿಯಂತೆ ಮೂರು ಮದುವೆ ...ಮಾಡಿಕೊಳ್ಳಲಿಲ್ಲ. ಇಲ್ಲದಿದ್ದರೆ ಆ ಮೂವರೂ ಪತ್ನಿಯ... ಇನ್ನೂ ಒಬ್ಬೊಬ್ಬ ಕುಮಾರಸ್ವಾಮಿ, ರೇವಣ್ಣ ...ದವರು ಸೃಷ್ಟಿಯಾಗಿ ಅವರ ಪಡಪೋಶಿ ರಾಜಕೀಯಕ್ಕೆ ... ಕರ್ನಾಟಕ ಸಾಲದೆ ಇಡೀ ಭಾರತವೇ ಸಿಕ್ಕು ...ಂಗಬೇಕಾಗಿ ಬರುತ್ತಿತ್ತೊಂದು ಅನಿಸುತ್ತಿದೆ.

ಅಂತಾ ಅಸಾಧ್ಯ ರಾಜಕಾರಣಿ ಕರುಣಾನಿಧಿಯೇ ಬಗೆಹರಿಸಿಕೊಳ್ಳಲಿಕ್ಕಾಗದ ಉತ್ತರಾಧಿಕಾರಿ ಪ್ರಶ್ನೆಯನ್ನು ನಮ್ಮ ದೇವೇಗೌಡರು ಎಷ್ಟು ಚೆನ್ನಾಗಿ ನಿಭಾಯಿಸುತ್ತಾ ಬಂದಿದ್ದಾರೆ ನೋಡಿ!

ಹಾಗೆ ಹೇಳಬೇಕೆಂದರೆ ಸದ್ಯಕ್ಕೆ ಕರುಣಾನಿಧಿ ಜೊತೆಗಿದ್ದುಕೊಂಡೇ ಒಳಗೊಳಗೇ ಫಿಟ್ಟಿಂಗ್ ಇಡಲು ಯತ್ನಿಸಿದ ಮಾರನ್ ಬ್ರದರ್ಸ್ ತರ ಗೌಡರ ಜೊತೆಗಿದ್ದುಕೊಂಡೇ ಅವರಿಗೇ ಬತ್ತಿ ಇಡಲು ನೋಡುತ್ತಿರುವ ಒಬ್ಬ ರಾಜಕಾರಣಿ ಇದ್ದಾನೆ.

ಅದು ಬೇರೆ ಯಾರೂ ಅಲ್ಲ, ಸಾರಿಗೆ ಸಚಿವ ಚೆಲುವರಾಯಸ್ವಾಮಿ! ಈತನಿಗೆ ತೆರೆಮರೆಯಲ್ಲಿ ಬೆಂಬಲ ಕೊಡುತ್ತಿರುವುದು ಯಾರು ಗೊತ್ತೆ?

ಗೌಡರ ಪರಮವೈರಿ ಡಿ.ಕೆ. ಶಿವಕುಮಾರ್!!

"ಲೋ, ಎಲ್ಲೋ ಅಪ್ಪ ಕೊತ್ವಾಲ"

ಚೆಲುವರಾಯಸ್ವಾಮಿ ಬಗ್ಗೆ ದೇವೇಗೌಡರ ಅಚ್ಚುಮೆಚ್ಚಿನ ಡೈಲಾಗ್ ಇದು. ತಮ್ಮ ಒಂದು ಕಾಲದ ಭಂಟನನ್ನು ಅಪ್ಪಿತಪ್ಪಿಯೂ ಚೆಲುವ, ಚೆನ್ನಿಗನೆಂದು ಸಂಬೋಧಿಸದ ಗೌಡರು ಎದುರಿಗೆ ಯಾರೇ ಪಾರ್ಟಿ ವರ್ಕರುಗಳಿರಲಿ 'ಲೋ ಎಲ್ಲೋ ಅಪ್ಪ ಕೊತ್ವಾಲ' ಎನ್ನುವರು. ಚೆನ್ನಾಗಿ ಮೇದೂ ಮೇದು ಒಳ್ಳೇ ಕೊಬ್ಬಿದ ತೋಳನಂತಿರುವ ಚೆಲುವರಾಯಸ್ವಾಮಿಯ ಬಿರುದು ಇದಾದರೆ ಈತನ ಸೋದರ ಎನ್. ಲಕ್ಷ್ಮಿಕಾಂತ್‌ಗೆ ಗೌಡರು 'ಶಿಶುಪಾಲ' ಎಂದೆನ್ನುತ್ತಾರೆ.

ಕ್ಲಾಸ್ ಒನ್ ಕಂಟ್ರಾಕ್ಟರ್ ಆಗಿರುವ ಲಕ್ಷ್ಮಿಕಾಂತ್ ಲಾಗಾಯ್ತಿನಿಂದಲೂ ಗೌಡರ ಹಿಂಬಾಲಕ. ಈಗ ಚನ್ನರಾಯಪಟ್ಟಣದ ಶಾಸಕನಾಗಿರುವ ಪುಟ್ಟರಾಜು, ಈ ಲಕ್ಷ್ಮೀಕಾಂತ ಎಲ್ಲರೂ ಮಾಜಿ ಸಬ್‌ಓವರ್ ಸೀಯರ್ ದೇವೇಗೌಡರ ಕೃಪಾಶೀರ್ವಾದದಿಂದ ಕಂಟ್ರಾಕ್ಟರ್‌ಗಳಾಗಿ ಭಾರಿ ಹಣ ಮಾಡಿಕೊಂಡಿರುವವರೇ.

ತಮಾಷೆ ಏನೆಂದರೆ ಕಾಂಗ್ರೆಸ್‌ನೊಳಗೆ ಒರಟೊರಟಾಗಿ ವರ್ತಿಸುವ ಡಿಕೆಗೆ ಮೊದಲೆಲ್ಲಾ 'ಕೊತ್ವಾಲ' ಎಂದೇ ಅಡ್ಡ ಹೆಸರಿತ್ತು. ಈಗ ಡಿಕೆ ಗೆಳೆಕಾರ ಚೆಲುವುಗೆ ಜೆಡಿಎಸ್‌ನೊಳಗೆ ಆ ಬಿರುದು ದಕ್ಕಿದೆ.

ತಮ್ಮ ಮಕ್ಕಳ ಹಾದಿಗೆ ಅಡ್ಡ ಬರಬಹುದಾದ ಯಾರನ್ನೇ ಆಗಲಿ ಗೌಡರು ಸುಮ್ಮನೆ ಬಿಡುವವರಲ್ಲ. ಇನ್ನು ಗೌಡರಿಗೆ ಈ ಕೊತ್ವಾಲರೇನು ಲೆಕ್ಕ ಅಲ್ಲವೇ?

ದುಬೈನಲ್ಲಿ ಚೆಲುವನ ಹೋಟೆಲ್

ದೇವೇಗೌಡರ ಮಕ್ಕಳು ಬೆಂಗಳೂರು, ಮೈಸೂರು ಸುತ್ತಮುತ್ತ ಆಸ್ತಿ ಮಾಡಿಕೊಳ್ಳುತ್ತಿದ್ದರೆ ಚೆಲುವರಾಯಸ್ವಾಮಿ ಕರ್ನಾಟಕವಿರಲಿ ಇಡೀ ಇಂಡಿಯಾ ದೇಶವನ್ನೇ ದಾಟಿ ದುಬೈನಲ್ಲಿ ಆಸ್ತಿ ಮಾಡಿದ್ದಾರೆ ಎಂಬ ಸುದ್ದಿಗಳಿವೆ.

ಅಲ್ಲೊಂದು ಭಾರಿ ಹೋಟೆಲ್ ಕಟ್ಟಡ ಎಬ್ಬಿಸುತ್ತಿದ್ದಾರೆ ಚೆಲುವಣ್ಣ. ಅಂದ ಮೇಲೆ ಅದು ಹತ್ತಿಪ್ಪತ್ತು ಕೋಟಿ ವ್ಯವಹಾರವಾಗಿರಲು ಸಾಧ್ಯವೇ ಇಲ್ಲ. ಚೆಲುವು ಸೋದರ ಕಂಟ್ರಾಕ್ಟರ್ ಲಕ್ಷ್ಮೀಕಾಂತ್ ಉಸ್ತುವಾರಿಯಲ್ಲಿ ಈ ಕೆಲಸ ನಡೆಯುತ್ತಿದೆ ಎಂದು ಇಡೀ ನಾಗಮಂಗಲ ಮಾತಾಡಿಕೊಳ್ಳುತ್ತಿದೆ. ಹೀಗೆ ಟ್ರಾನ್ಸ್‌ಪೋರ್ಟ್ ದುಡ್ಡು ದುಬೈಗೆ ಟ್ರಾನ್ಸ್‌ಫರ್ ಆಗುತ್ತಿರುವುದೂ ಗೌಡರ ಕಣ್ಣನ್ನೂ ಕೆಂಪಗಾಗಿಸಿಬಿಟ್ಟಿದೆ. ಚೆಲುವರಾಯ ಸ್ವಾಮಿಯ ಇತ್ತೀಚಿನ ದೀಲುಗಳ ಹೇಗಿರುತ್ತವೆ ಗೊತ್ತೆ?

ಬೆಂಗಳೂರು ನಗರ ಸಾರಿಗೆಗೆಂದು ಖರೀದಿಸಿ ತಂದಿರುವ ವೋಲ್ವೋ ಬಸ್‌ಗಳು ಸಂಸ್ಥೆಗೆ ಭಾರಿ ಲಾಸ್ ಮಾಡುತ್ತಿವೆ. ಆದರೂ ಇನ್ನಷ್ಟು ವೋಲ್ವೋ ಬಸ್ ಖರೀದಿಸುವುದಾಗಿ ಚೆಲುವು ಹೇಳುತ್ತಿದ್ದಾರೆ. ಒಂದೊಂದು ಬಸ್‌ಗೂ ಕನಿಷ್ಠ 80 ಲಕ್ಷದ ಬೆಲೆ ಇದೆ. ಒಂದು ಸಾರಿ ನೂರು ವೋಲ್ವೋ ಖರೀದಿಸಿದರೆ ಬರುವ ಕಮೀಷನ್ ದುಡ್ಡೆಷ್ಟು ಲೆಕ್ಕಾ ಹಾಕಿ!

ಅಂತಾ ದುಡ್ಡಿನಲ್ಲಿ ಬರೀ ಹೋಟೆಲ್ ಏನು ಅರಮನೆಯನ್ನೇ ಕಟ್ಟಬಹುದು. ಉಪಮುಖ್ಯಮಂತ್ರಿಯ ಕನಸೂ ಕಾಣಬಹುದು.

ಮೀಟರ್ ಬಡ್ಡಿಗೆ ಗುದ್ದ ಕೊಡಗಿದ ನಡುಮನಿ

ವಾಣಿಜ್ಯ ನಗರಿ ಎಂದೇ ಪ್ರಸಿದ್ಧವಾಗಿರುವ ಹುಬ್ಬಳ್ಳಿಯಲ್ಲಿ ಎಗ್ಗಿಲ್ಲದೇ ನಡೆಯುತ್ತಿರುವ ನಕಲಿ ಮದ್ಯ ಮತ್ತು ಮೀಟರ್ ಬಡ್ಡಿಗೆ ಪೊಲೀಸ್ ಕಮೀಷನರ್ ನಾರಾಯಣ ನಡುಮನಿ ಗುದ್ದತೊಡಗಿದ್ದಾರೆ. ಇವರಿಗೆ ಹೆಗಲು ಕೊಟ್ಟು ನಿಲ್ಲಬೇಕಿದ್ದ ಇನ್‌ಕಂ ಟ್ಯಾಕ್ಸ್ ಹಾಗೂ ಅಬಕಾರಿ ಅಧಿಕಾರಿಗಳು ಕುಂಭಕರ್ಣ ನಿದ್ರೆಯಲ್ಲಿದ್ದಾರೆ. ಇವರಿಗೆ ಆಪರೇಷನ್ ಮಾಡಬೇಕಿದ್ದ ಯಡ್ಡಿ-ಕುಮಾರಸ್ವಾಮಿ ಗ್ರಾಮವಾಸ್ತವ್ಯದ ನಿದ್ದೆಯಲ್ಲಿದ್ದಾರೆ.

ಈ ಹಿಂದೆಯೂ ಮದ್ಯ-ಬಡ್ಡಿಗಳ ಹಾವಳಿ ತಾರಕಕ್ಕೇರಿದಾಗ ಅಂದಿನ ಅವಳಿ ನಗರಗಳ ಪೊಲೀಸ್ ಕಮಿಷನರ್ ಗಗನದೀಪ್‌ರವರು ಅವುಗಳ ವಿರುದ್ಧ ಸಮರ ಸಾರಿದ್ದರು. ಇವರ ಆರ್ಭಟಕ್ಕೆ ಮದ್ಯದ ದೊರೆಗಳು ಮೂಲೆ ಸೇರಿದ್ದರು. ಮದ್ಯದ ದೊರೆಗಳೊಂದಿಗೆ ಕಮಿಷನ್ ತಿನ್ನುವಲ್ಲಿ ಶಾಮೀಲಾಗಿರುವ ಚಡ್ಡಿ ಪಟಾಲಂ ಪಡೆ ಗಗನದೀಪರ ವಿರುದ್ಧವೇ ಸೆಡ್ಡು ಹೊಡೆದು ಕೊನೆಗೆ ಅವರನ್ನು ಅಕ್ರಮ ಆಸ್ತಿ ಹೊಂದಿದ ಅಪರಾಧದಲ್ಲಿ ಸಿಕ್ಕಿಸಿ ಹಾಲು ಕುಡಿದಿತ್ತು. ಆದರೆ ಗಗನ್‌ದೀಪರು ಅದರಿಂದ ಬಚಾವಾಗಿ ಹೊರ ಬಂದದ್ದು ಬೇರೆ ಮಾತು.

ಈಗ ಮತ್ತೆ ಮದ್ಯ-ಬಡ್ಡಿ ಮಾಫಿಯಾ ಬೆಳೆದು ನಿಂತು ಅವಳಿ ನಗರಗಳ ಜನಸಾಮಾನ್ಯರನ್ನು ಹಿಂಡ ತೊಡಗಿದೆ. ಇದನ್ನು ಸದೆಬಡಿಯಲು ಈ ಬಾರಿ ಸೆಟೆದು ನಿಂತವರು ಅವಳಿ ನಗರಗಳ ಪ್ರಸ್ತುತ ಪೊಲೀಸ್ ಕಮೀಷನರ್ ನಾರಾಯಣ ನಡುಮನಿ. ಹಿಂದಿನಂತೆ ಈಗಲೂ

ಹುಬ್ಬಳ್ಳಿ

ಇದರಿಂದ ಭಾರಿ ನಷ್ಟವಾಗುತ್ತಿರುವುದು ಒಂದೆಡೆ ಮದ್ಯ-ಬಡ್ಡಿ ಮಾಫಿಯಾದ ದೊರೆಗಳಿಗಾದರೆ, ಇನ್ನೊಂದೆಡೆ ಸಂಘ ಪರಿವಾರದ ಚಡ್ಡಿಗಳಿಗೆ. ಆದ್ದರಿಂದಲೇ ಗಗನದೀಪ್‌ರವರಿಗೆ ಮಾಡಿದಂತೆ ನಡುಮನಿಯವರಿಗೂ ಶಾಸ್ತಿ ಮಾಡಲು ಚಡ್ಡಿ ಪಡೆ ತಯಾರಾಗಿ ನಿಂತಿದೆ.

ಚಡ್ಡಿಗಳು ನಡುಮನಿಯವರ ವಿರುದ್ಧ ಕೂಗಾಡಲು ಇನ್ನೂ ಒಂದು ಕಾರಣವಿದೆ. ಈ ಹಿಂದೆ ನಡೆದ ಹಿಂದೂ ಸಮಾಜೋತ್ಸವ ಎಂಬ ಚಡ್ಡಿ ಉತ್ಸವಕ್ಕೆ ನಾರಾಯಣ ನಡುಮನಿಯವರು ಸಹಕಾರ ನೀಡಿರಲಿಲ್ಲ. ಹಾಗಾಗಿ ಹಳೆ-ಹೊಸ ದ್ವೇಷ ಸೇರಿಸಿ ಅವರನ್ನು ಪರ್ಮನೆಂಟಾಗಿ ಎತ್ತಿಹಾಕಲು ತಯಾರಿ ನಡೆಸುತ್ತಿದೆ ಚಡ್ಡಿ ಗ್ಯಾಂಗ್. ಇದಕ್ಕಾಗಿಯೇ ಚಡ್ಡಿ ಸಂಸದ ಪ್ರಹ್ಲಾದ್ ಜೋಷಿ ಹಾಗೂ VRL ಕಂಪನಿಯ ಮಾಲೀಕ ವಿಜಯ ಸಂಕೇಶ್ವರ್ ಇಬ್ಬರೂ ಸೇರಿ, ಅವಳಿ ನಗರಗಳಲ್ಲಿ ಲಾ ಆಂಡ್ ಆರ್ಡರ್ ಕುಸಿದುಬಿದ್ದಿದೆ, ದರೋಡೆ-ಹಲ್ಲೆ ಕಳ್ಳತನ ಎಲ್ಲೆ ಮೀರಿ ನಡೆಯುತ್ತಿವೆ, ನಾರಾಯಣ ನಡುಮನಿ ಅವರು ಇವುಗಳನ್ನು ನಿಯಂತ್ರಿಸಲು ವಿಫಲರಾಗಿದ್ದಾರೆ ಎಂದು ಕಂಡಕಂಡಲ್ಲಿ ಒದರತೊಡಗಿದ್ದಾರೆ. ನಡುಮನಿಯವರನ್ನು ಆದಷ್ಟು ಬೇಗ ಇಲ್ಲಿಂದ ಟ್ರಾನ್ಸ್‌ಫರ್ ಮಾಡಿ ಅಂತ ಚಡ್ಡಿ ನಾಯಕ ಜಗದೀಶ್ ಶೆಟ್ಟರ್‌ರವರನ್ನು ದುಂಬಾಲು ಬದ್ದು ಕಾಡತೊಡಗಿದ್ದಾರೆ. ಅದಕ್ಕೆ ಜಗದೀಶ್ ಶೆಟ್ಟರ್, "ಕುಮಾರಸ್ವಾಮಿ ಅವಧಿ ಮುಗಿಯುತ್ತ ಬಂದಿದೆ. ಇನ್ನೇನು ಬಿಜೆಪಿ ಅಧಿಕಾರಕ್ಕೆ ಬಂದು ಯಡಿಯೂರಪ್ಪನವರು ಸಿಎಂ ಆಗೇ ಬಿಡ್ತಾರೆ. ಆವಾಗ ನಡುಮನಿ ಗೊಂದು ಗತಿ ಕಾಣಿಸೋಣ, ಸ್ವಲ್ಪ ತಡಕೊಳ್ರಿ" ಎಂದು ಸಮಾಧಾನ ಪಡಿಸುತ್ತಿದ್ದಾರೆ. ಇಷ್ಟು ಆಶ್ವಾಸನೆ ಸಿಕ್ಕಿದ್ದೇ ತಡ ಚಡ್ಡಿ ಚತುರರು "ನಾರಾಯಣ ನಡುಮನಿ ಟ್ರಾನ್ಸ್‌ಫರ್ ಆಗ್ಯಾನ, ಆರ್ಡರ್ ಕಾಪಿ ರೆಡಿ ಐತಿ. ಇನ್ನೇನು ಎಂಪಿ ಪ್ರಕಾಶರ ಸಹಿ ಬಿಳೋದು ಬಾಕಿ. ಇದು ಗೊತ್ತಾಗಿ ನಡುಮನಿ ಹೋಗಾಕ ಮುಂದ ರೇಡುಗೀಡು ಅಂತ ನಾಟಕ ಶುರು ಮಾಡ್ಯಾನ. ನೀವೇನ್ ಹೆದ್ರಬ್ಯಾಡ್ರಿ" ಅಂತ ಹುಬ್ಬಳ್ಳಿಯ ಬಡ್ಡಿ ಕುಳಗಳಿಗೆ ಧೈರ್ಯ ತುಂಬ ತೊಡಗಿದ್ದಾರೆ.

> ಹುಬ್ಬಳ್ಳಿಯಲ್ಲೀಗ ಬಡ್ಡಿಮಕ್ಕಳದೇ ದರ್ಬಾರ್ ಆಗಿ ಹೋಗಿದೆ. ಕೆಲವರು ಅಧಿಕೃತ ಬಡ್ಡಿಮಕ್ಕಳಾದರೆ, ಇನ್ನು ಕೆಲವರು ಅನಧಿಕೃತ. ರೇಲ್ವೆ, ಮಹಾನಗರ ಪಾಲಿಕೆ, ಎ.ಕೆ. ಇಂಡ್ರಸ್ಟ್ರೀಸ್, ಕೆ.ಎಸ್.ಆರ್.ಟಿ.ಸಿ ಹೀಗೆ ಎಲ್ಲ ರೀತಿಯ ನೌಕರರನ್ನು ಹಿಂಡಿ ಹಿಪ್ಪೆ ಮಾಡಿ ಹಾಕಿದೆ ಈ ಬಡ್ಡಿ ಮಾಫಿಯಾ.



ನಾರಾಯಣ ನಡುಮನಿ



ಎಂ. ಸಿಂಧೆ

ಬಡ್ಡಿ ಮಕ್ಕಳ ಅಡ್ಡೆಯಾದ ಹುಬ್ಬಳ್ಳಿ

ಹುಬ್ಬಳ್ಳಿಯಲ್ಲೀಗ ಬಡ್ಡಿಮಕ್ಕಳದೇ ದರ್ಬಾರ್ ಆಗಿ ಹೋಗಿದೆ. ಕೆಲವರು ಅಧಿಕೃತ ಬಡ್ಡಿಮಕ್ಕಳಾದರೆ, ಇನ್ನು ಕೆಲವರು ಅನಧಿಕೃತ. ರೇಲ್ವೆ, ಮಹಾನಗರ ಪಾಲಿಕೆ, ಎ.ಕೆ. ಇಂಡ್ರಸ್ಟ್ರೀಸ್, ಕೆ.ಎಸ್.ಆರ್.ಟಿ.ಸಿ ಹೀ... ಎಲ್ಲ ರೀತಿಯ ನೌಕರರನ್ನು ಹಿಂಡಿ ಹಿಪ್ಪೆ ಮಾಡಿ ಹಾಕಿದೆ ಈ ಬಡ್ಡಿ ಮಾಫಿಯಾ. ಕೆಲವರು ಖಾಲಿ ಬಾಂಡ್‌ಗಳನ್ನು ಇಟ್ಟುಕೊಂಡು ಸಾಲ ನೀಡಿದರೆ ಇನ್ನು ಕೆಲವರು ವಾಹನದ ದಾಖಲೆ ಇಟ್ಟುಕೊಂಡು ಸಾಲ ನೀಡುತ್ತಾರೆ. ವ್ಯಾಪಾರಸ್ಥರಿಗೆ ಸಾಲ ನೀಡುವಾಗ ಅವರ ಮನೆ, ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಅಡವಿಟ್ಟುಕೊಳ್ಳುತ್ತಾರೆ. ಮತ್ತೆ ಕೆಲವರು ರಸ್ತೆಬದಿ ಕಾಯಿಪಲ್ಯ ಮಾರುವ ಜನರಿಗೂ ಸಾಲ ನೀಡಿ ದುಪ್ಪಟ್ಟು ವಸೂ... ಮಾಡುತ್ತಾರೆ. ವಸೂಲಿಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಒಬ್ಬೊಬ್ಬ ಬಡ್ಡಿಮಗನ ಹತ್ತಿರ ಕನಿಷ್ಠ ಒಂದೊಂದು ಗೂಂಡಾ ಗ್ಯಾಂಗ್ ಇದೆ. ಹುಬ್ಬಳ್ಳಿಯ ಬಡ್ಡಿಮಕ್ಕಳ... ಹೆಚ್ಚಿನವರು ಇರುವುದು ಸೆಟ್ಲಮೆಂಟ್‌ನಲ್ಲಿ.

ರಸ್ತೆಬದಿ ವ್ಯಾಪಾರ ಮಾಡುವವರಿಗೆ ಬೆಳಗ್ಗೆ 100 ರೂಪಾಯಿ ಕೊಟ್ಟು ಸಂಜೆಗೆ 110 ರೂಪಾಯಿ ವಸೂಲಿ ಮಾಡುತ್ತದೆ ಈ ಮಾಫಿಯಾ. ಇನ್ನು ಮಹಾನಗರ ಪಾಲಿಕೆಯ ನೌಕರರಿಗೆ ಕೊಟ್ಟ ಸಾಲವನ್ನು ವಸೂಲಿ ಮಾಡುವ ಪರಿಯನ್ನು ನೋಡಬೇಕು. ಸಂಬಳದ ದಿನ ಸಾಲ ಕೊಟ್ಟವರು ನೇರವಾಗಿ ಮಹಾನಗರ ಪಾಲಿಕೆಗೆ ಬಂದಿರುತ್ತಾರೆ. ನೌಕರರ ಸಂಬಳ ನೇರವಾಗಿ ಇವರ ಕೈ ಸೇರುತ್ತದೆ. ನಂತರ ಅವರು ತಮಗೆ ಬೇಕಾದಷ್ಟು ಮುರಿದುಕೊಂಡು ಉಳಿದದ್ದನ್ನು ನೌಕರರಿಗೆ ಕೊಡುತ್ತಾರೆ. ಹೀಗಾಗಿ ಅರ್ಧಕ್ಕರ್ಧ ಸಂಬಳ ನೇರವಾಗಿ ಬಡ್ಡಿ ಮ... ಕೈ ಸೇರುತ್ತದೆ.

ಮೀಟರ್ ಬಡ್ಡಿ ಕ್ರೌರ್ಯದ ಸ್ಯಾಂಪಲ್‌ಗಳು

ಸೆಟ್ಲಮೆಂಟಿನ ಶ್ರೀಕಾಂತ ಮಲ್ಲೂರ ಎಂಬ ಬಡ್ಡಿಮ... ರೇಲ್ವೆ ಕಾರ್ಯಾಗಾರದ ಒಬ್ಬ ಕಾರ್ಮಿಕನ ಮ... ಮದುವೆಗೆ ಎಂದು 50 ಸಾವಿರ ರೂಪಾಯಿ ಸಾ... ಕೊಟ್ಟಿದ್ದ. ಅದಕ್ಕಾಗಿ ಅವರಿಂದ ಬಡ್ಡಿ ಕಕ್ಕಿಸಿದ್ದು ... ಲಕ್ಷ! ಅದೂ ಸಾಲದೆಂಬಂತೆ ಮತ್ತೆ 2 ಲಕ್ಷ ತೆಗೆ... ಕೊಂಡು ಬಾ ಎಂದು ಪೀಡಿಸಿ ಕೊನೆಗೆ ಅ... ಮನೆಯನ್ನೇ ತನ್ನ ಹೆಸರಿಗೆ ಬರೆಸಿಕೊಂಡ.

ಈ ಶ್ರೀಕಾಂತ ಮಲ್ಲೂರ ಎಂಬ ಬಡ್ಡಿ ಆಸಾ... ಮೊದಲು ಸೆಟ್ಲಮೆಂಟಿನ ಹುಡುಗರನ್ನು ಕಟ್ಟಿಕೊಂ... ಶ್ರೀರಂಗಾ ಟಾಕೀಸಿನ ಎದುರು ಸಿನಿಮಾ ಟಿಕೆಟ್‌ಗಳ... ಮಾರುತ್ತಿದ್ದ. ಈತ ಮಹಾಲಕ್ಷ್ಮಿ ಟ್ರೇನ್ ದರೋ... ಪ್ರಕರಣದಲ್ಲಿ ಸೆಟ್ಲಮೆಂಟಿನ ಕೆಲವು ಜನರ ಜೊ... ತಾನೂ ಸೆಟ್ಲ್ ಆಗಿದ್ದು ಸುಳ್ಳೇನಲ್ಲ. ಅದೇ ಹಣದ... ಸಣ್ಣಗೆ ಬಡ್ಡಿ ವ್ಯಾಪಾರ ಶುರು ಮಾಡಿಕೊಂಡ ಈ... ಇಂದು ಕೋಟ್ಯಾಧಿಪತಿ. ಇವನು ಕೆಲವು ವರ್ಷ... ಹಿಂದೆ ಕೋರ್ಟ್ ಪಕ್ಕದ ಸಾಯಿ ಮಂದಿರದ ಟ್ರ... ಕೂಡ ಆಗಿದ್ದ. ಅಲ್ಲಿ ಅವ್ಯವಹಾರ ಮಾಡಿ ಹ... ತಿಂದು ಮೈಕೈ ಹೊಲಸು ಮಾಡಿಕೊಂಡಾಗ ಸಾ... ಭಕ್ತರು ಇವನ ಕುಂಡೆಯ ಮೇಲೆ ಒದ್ದು ರಾತ್ರೋರಾ... ಓಡಿಸಿಬಿಟ್ಟರು.


ಅಲ್ಲಿಂದ ಬಂದವನೇ ಸ್ಟೇಷನ್ ರೋಡಿನ ಅಂಕು... ಆರ್ಕೇಡ್‌ನ ಸ್ಟಾಲ್‌ನಲ್ಲಿ ಸಾಯಿ ಫೈನಾನ್ಸ್ ಆ... ಪ್ರಾರಂಭಿಸಿ ಪರ್ಮನೆಂಟಾಗಿ ಬಡ್ಡಿ ವ್ಯಾಪಾ... ಶುರುಮಾಡಿಬಿಟ್ಟ. ಇವನು ಹೇರುವ ಸಾಲದ ಮೇಲಿ... ಬಡ್ಡಿ, ಬಡ್ಡಿಯ ಮೇಲಿನ ಬಡ್ಡಿ, ಹೀಗೆ ಮೀಟ... ಬಡ್ಡಿ ಲೆಕ್ಕದಲ್ಲಿ ಅದೆಷ್ಟು ಕುಟುಂಬಗಳನ್ನು ಶಾಶ್ವತವಾ... ಹಾಳು ಮಾಡಿದ್ದಾನೋ ಗೊತ್ತಿಲ್ಲ. ಕೊಟ್ಟ ಸಾಲ... ಬಡ್ಡಿ ಸರಿಯಾಗಿ ಬರದಿದ್ದರೆ ಅದನ್ನು ವಸೂ... ಮಾಡಲೆಂದೇ ಇವನ ಅಳಿಯ ತುಕಾರಾಮನ ತಂ...

ಹಳೇ ಹುಬ್ಬಳ್ಳಿಯಲ್ಲಿ ಸಿಕ್ಕಿದ್ದು ಎಲ್ಲಿಯ ಮದ್ಯ?

ಮೇ 11 ರಂದು ಹಳೇ ಹುಬ್ಬಳ್ಳಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಸಕ್ರಿಯವರು ಮಹಾರಾಷ್ಟ್ರ ನೋಂದಣಿಯ ಟೆಂಪೋ (MH12/p8461) ಹಿಡಿದು 60 ಬಾಕ್ಸ್‌ಗಳಲ್ಲಿದ್ದ ಓಲ್ಡ್‌ಮಂಕ್ ರಮ್ ಹಾಗೂ ಒರಿಜಿನಲ್ ಛಾಯ್ಸ್ ವಿಸ್ಕಿಯನ್ನು ವಶಪಡಿಸಿಕೊಂಡರು. ಇದನ್ನು ತಂದವನು ಹುಬ್ಬಳ್ಳಿಯ ಗಣೆ ಓಣಿಯ ಸಾವಜಿ ಹನುಮಂತ.

ಸತ್ಯದ ನೆತ್ತಿಗೆ ಸುಳ್ಳಿನ ಮೊಳೆ ಹೊಡೆದಂತೆ ಸಕ್ರಿ ಮಾತ್ರ ಇವು ಗೋವಾದಿಂದ ಬಂದದ್ದು ಎಂದು ಬೊಗಳೆ ಬಿಟ್ಟ. ಗೋವಾದಲ್ಲಿ ಓಲ್ಡ್‌ಮಂಕ್ ರಮ್ ಆಗಲೀ, ಒರಿಜಿನಲ್ ಛಾಯ್ಸ್ ಎಂಬ ವಿಸ್ಕಿಯಾಗಲೀ ತಯಾರಾಗುವುದಿಲ್ಲ, ಅವುಗಳನ್ನು ಕರ್ನಾಟಕದ ಕಂಪನಿಗಳೇ ತಯಾರಿಸುತ್ತವೆ ಎಂಬ ಸಣ್ಣ ಅರಿವೂ ಇಲ್ಲದ ಸಕ್ರಿ ಈ ಬೊಗಳೆ ಬಿಟ್ಟ. ವಾಸ್ತವವೆಂದರೆ ಅಂದು ಸಿಕ್ಕಿದ್ದು ಒರಿಜಿನಲ್ ಮಾಲು ಅಲ್ಲ, ಆ ಕಂಪನಿಗಳ ಬ್ರಾಂಡ್‌ನಲ್ಲಿ ಸ್ಥಳೀಯವಾಗಿಯೇ ತಯಾರಿಸಲಾದ ಡೂಪ್ಲಿಕೇಟ್ ಮಾಲು. ಸಕ್ರಿಗೆ ಎಷ್ಟು ತಿನ್ನಿಸಿದರೋ ಗೊತ್ತಿಲ್ಲ, ಹಾಗಾಗಿ ಈ ವಾಸ್ತವವನ್ನು ಮುಚ್ಚಿಡಲು ಏನೇನೋ ಬಡಬಡಾಯಿಸಿದ. ಈಗಾಗಲೇ ಈತನಿಗೆ ಒಂದು ಸಿಎಂ ಅವಾರ್ಡ್ ಬಂದಿದೆ. ಇಂತಹುದೇ ಘನಂಧಾರಿ ಕೆಲಸ ಮಾಡುತ್ತಾ ಹೋದರೆ ಇನ್ನೊಂದು ಅವಾರ್ಡು ಬಂದರೂ ಆಶ್ಚರ್ಯವಿಲ್ಲ.

ನಿಜ ಹೇಳಬೇಕೆಂದರೆ ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಹರಿಯುತ್ತಿರುವುದು ಒರಿಜಿನಲ್ ಮದ್ಯ ಅಲ್ಲವೇ ಅಲ್ಲ. ಅವಳಿನಗರಗಳ ಡಾಬಾಗಳು, ರೆಸ್ಟೋರೆಂಟ್‌ಗಳು, ವೈನ್‌ಶಾಪ್‌ಗಳು, ಹೋಟೆಲ್ಲು ಎಲ್ಲವೂ ನಕಲಿ ಮದ್ಯ ಜಾಲದೊಂದಿಗೆ ಶಾಮೀಲಾಗಿರುವುದರಿಂದ ಅವರೆಲ್ಲರೂ ಸೇರಿ ನಕಲಿ ಹೆಂಡವನ್ನೇ ಕುಡಿಸುತ್ತಿದ್ದಾರೆ. ಇದಕ್ಕೆ ಮೊನ್ನೆ ಸಿಕ್ಕ 60 ಬಾಕ್ಸ್ ನಕಲಿ ಮಾಲೇ ಸಾಕ್ಷಿ. ಹೀಗಿದ್ದರೂ ಅವಳಿ ನಗರಗಳ ಪೊಲೀಸರು ನಕಲಿ ಮದ್ಯ ನಿಲ್ಲಿಸಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುವುದನ್ನು ಮಾತ್ರ ನಿಲ್ಲಿಸಿಲ್ಲ!



ಪೊಲೀಸರು ವಶಪಡಿಸಿಕೊಂಡಿರುವ ಮದ್ಯ

ಮೋಡಿ ಮಾಡಿದ ಮುಂಗಾರು ಮಳೆ!

"ಇದೊಂದು ಮಾಮೂಲಿ ಪ್ರೀತಿ-ಪ್ರಣಯದ ಚಿತ್ರ. ಅನಂತನಾಗ್ ಉತ್ತಮವಾಗಿ ...ಟಿಸಿರುವುದನ್ನು ಬಿಟ್ಟರೆ, ಇಡೀ ಚಿತ್ರದಲ್ಲಿ ...ಯಾವ ಪಾತ್ರಗಳದ್ದೂ ಅಂತಹ ...ಹೇಳಿಕೊಳ್ಳುವಂಥ ಅಭಿನಯವಿಲ್ಲ, ಇಲ್ಲಿ ...ಕರ್ಷಕ ಮುಖದ ನಾಯಕ-ನಾಯಕಿಯರಿಲ್ಲ. ...ಭೂತಪೂರ್ವ ಜಯಭೇರಿ ಬಾರಿಸಿದ ...ಬಂಗಾರದ ಮನುಷ್ಯ', 'ಶರಪಂಜರ' ಮತ್ತು ...ಜನುಮದ ಜೋಡಿ'ಯಂಥ ಚಿತ್ರಗಳಲ್ಲಿ ಡಾ. ...ರಾಜ್, ಕಲ್ಪನಾ ಮತ್ತು ಶಿಲ್ಪಾಳ ಮನೋಜ್ಞ ...ಭಿನಯವಿದ್ದದ್ದು ಆ ಚಿತ್ರಗಳ ಯಶಸ್ಸಿಗೆ ...ಮೂಲ ಕಾರಣಗಳಾಗಿದ್ದವು. ಆದರೆ ...ಮುಂಗಾರು ಮಳೆಯಲ್ಲಿ ...ನಾಯಕ-ನಾಯಕಿ ಮತ್ತಿತರ ಪೋಷಕ ...ನಟರು ಲವಲವಿಕೆಯಿಂದ ...ಟಿಸಿರುವುದನ್ನು ಬಿಟ್ಟರೆ ಮೇಲೆ ...ಹೇಳಿದಂತೆ ಶ್ರೇಷ್ಠ ಅಭಿನಯವನ್ನೇನು ...ಮಾಡಿಲ್ಲ, ಚಿತ್ರದ ಹಾಡುಗಳು ...ಹೊರಗಡೆ ಕೇಳಲು ...ಇಂಪಾಗಿವೆಯಾದರೂ ...ಥಿಯೇಟರ್‌ನೊಳಗೆ ಡಿಟಿಎಸ್ ...ಅಬ್ಬರದಲ್ಲಿ ಹಿತ ನೀಡುವುದಿಲ್ಲ, ...ಚಿತ್ರದ ಸಂಭಾಷಣೆಯಲ್ಲೂ ...ಅಂತಹ ವಿಶೇಷವೇನೂ ಇಲ್ಲ. ...ನನ್ನು ಇರುವೆ, ಮೊಲ, ಆನೆ ...ಲೇಪ್ ಇತ್ಯಾದಿ ಕೀಳು ...ಅಭಿರುಚಿಯ ಹಾಸ್ಯ ಸಂಭಾಷಣೆ ಅದನ್ನು ...ಬರೆದವರಷ್ಟೇ ನಗಬೇಕು. ಹಾಗಾಗಿ ಯಾವುದೇ ...ರೀತಿಯಿಂದ ನೋಡಿದರೂ ಇದೊಂದು ಶ್ರೇಷ್ಠ ...ಚಿತ್ರ ಅಲ್ಲವೇ ಅಲ್ಲ. ಆದರೂ ಚಿತ್ರದ ಈ ಮಟ್ಟದ ಅಭೂತಪೂರ್ವ ಯಶಸ್ಸಿಗೆ ಕಾರಣವೇನು?

ನಿಸ್ಸಂದೇಹವಾಗಿ ಇಲ್ಲಿ ಮೋಡಿ ಮಾಡಿರುವುದು ಸಕಲೇಶಪುರ ಸುತ್ತಮುತ್ತಲಿನ (ಚಿತ್ರದಲ್ಲಿ ಕೊಡಗು ಎಂದು ಹೇಳಿಕೊಂಡರೂ)



ಹಸಿರುಹೊದ್ದ ಬೆಟ್ಟಗುಡ್ಡಗಳು ಮತ್ತು ಆಗಾಗ ದಿಢೀರನೆ ಜರ್ರೆಂದು ಸುರಿಯುವ ಮಳೆ! (ಮಲೆನಾಡಿನಲ್ಲಿ ಮುಂಗಾರು ಮಳೆ ಭಾರಿ ಆರ್ಭಟ ಮಾಡುತ್ತಾ ಸುರಿದರೆ, ಈ ಚಿತ್ರದಲ್ಲಿ ಗುಡುಗು ಸಿಡಿಲಿನ ಅಬ್ಬರವಿಲ್ಲದೆ ಏಕಾಏಕಿ ಮಳೆ ಬೀಳುತ್ತದೆ). ಹಾಗೆ ನೋಡಿದರೆ ಈ ಚಿತ್ರವಾದ ಹೀರೋನೆ ಮಳೆ! ಗಿರಿಕಂದರಗಳು, ನೀರು ಮತ್ತು ಮಳೆ ಎಂತಹ ಅರಸಿಕನನ್ನೂ ಯಾವುದೋ ಲೋಕಕ್ಕೆ ಕರೆದೊಯ್ಯುತ್ತವೆ ಎಂಬುದಕ್ಕೆ 'ಮುಂಗಾರು ಮಳೆ'ಯ ಈ ರೀತಿಯ ದೊಡ್ಡ ಯಶಸ್ಸೇ ಸಾಕ್ಷಿ. ಏಕತಾನತೆಯ ನಗರ ಜೀವನದಲ್ಲಿ ಬೇಸತ್ತವರಿಗೆ, ಅದರಲ್ಲೂ ಬಯಲುಸೀಮೆಯ ಬೆಂಗಾಡಿನಲ್ಲಿ ಬೆಂದ ಜನಕ್ಕೆ ಹರಿದ್ವರ್ಣದ ಬೆಟ್ಟಗುಡ್ಡಗಳು ಮತ್ತು ಮಳೆಯ ಬಗ್ಗೆ ಇರುವ ಸುಪ್ತ ಆಕರ್ಷಣೆ ಹಾಗೂ ಅದಮ್ಯ ಕುತೂಹಲವನ್ನು ನಿರ್ಮಾಪಕ, ನಿರ್ದೇಶಕರು ಇಲ್ಲಿ ಅಚ್ಚುಕಟ್ಟಾಗಿ ಕ್ಯಾಷ್ ಮಾಡಿಕೊಂಡಿದ್ದಾರೆ. ಇಂಥದೊಂದು ಮಳೆಯ ಟೆಕ್ನಿಕ್ ಬಳಸಿ ಹಿಂದೆಯೇ 'ಮೂಡುಪನಿ' ಚಿತ್ರದಲ್ಲಿ ಬಾಲುಮಹೇಂದ್ರ ಮತ್ತು 'ಮುಂಗಾರಿನ ಮಿಂಚು' ಚಿತ್ರದಲ್ಲಿ ರಾಜೇಂದ್ರಸಿಂಗ್ ಬಾಬು ಯಶಸ್ಸು ಕಂಡಿದ್ದರು.

ಅದೇ ಜಾಡನ್ನು ಅನುಸರಿಸಿ ಕೃತಕ ಮಳೆ ಮತ್ತು ನಿಜವಾದ ಮಳೆಯಲ್ಲಿ ಯೋಗರಾಜ್ ಭಟ್ ಮತ್ತು ಚಿತ್ರದ ಛಾಯಾಗ್ರಾಹಕರು ಪ್ರೇಕ್ಷಕರನ್ನು ಆನಂದದಲ್ಲಿ ಕೊಚ್ಚಿ ಹೋಗುವಂತೆ ತೋಯಿಸಿದ್ದಾರೆ. ಭಟ್ಟರು ಕಾಮಿಡಿ ಟೈಮ್ ಗಣೇಶನಿಂದ ಮಾಮೂಲಿ ಹೀರೋ ಟ್ರ್ಯಾಕ್ ಬಿಟ್ಟು ಪಕ್ಕದ ಮನೆಯ ಹುಡುಗನ ಧಾಟಿಯಲ್ಲಿ ಮಾತಾಡಿಸಿ ಹೊಸದೊಂದು ಟ್ರೆಂಡ್ ಹುಟ್ಟು ಹಾಕಿದ್ದಾರೆ. ರವಿಚಂದ್ರನ್ ಆರಂಭಿಸಿದ, ನಾಯಕಿಯರನ್ನು 'ಹೋಗೆ, ಬಾರೆ, ನೀ ಯಾರಲೇ' ಎಂದು ಕರೆಯುವ ಟ್ರೆಂಡ್‌ಗೆ ಬೈ ಹೇಳಿ, ನಾಯಕಿಯರನ್ನು ಗೌರವದಿಂದ ಮಾತನಾಡಿಸುವ ಡಾ. ರಾಜ್ ಕಾಲಕ್ಕೆ ಪುನಃ ಭಟ್ಟರು ನಮ್ಮನ್ನು ಕರೆದೊಯ್ಯುತ್ತಾರೆ.

ಮಲೆನಾಡಿನಲ್ಲಿದ್ದುಕೊಂಡು ಬೆಳಗಾದೊಡನೆ ಹಸಿರು ಹೊದ್ದ ಬೆಟ್ಟಗುಡ್ಡಗಳು ಮತ್ತು ಎಡೆಬಿಡದೆ ಸುರಿಯುವ ಮಳೆಯಲ್ಲಿ ಬೇಸರ ಮತ್ತು ಆನಂದವನ್ನು ಅನುಭವಿಸುವ ನನ್ನಂಥವನನ್ನೇ ಈ 'ಮುಂಗಾರು ಮಳೆ' ಇಷ್ಟೊಂದು ಆಕರ್ಷಿಸಿರಬೇಕಾದರೆ ಇನ್ನು ನಗರವಾಸಿಗರ ಮತ್ತು ಬಯಲುಸೀಮೆಯ ಪ್ರೇಕ್ಷಕರ ಪಾಡೇನು? ನಿಜಕ್ಕೂ ಥ್ಯಾಂಕ್ಸ್ ಹೇಳಬೇಕಾದುದು ಪ್ರೇಕ್ಷಕರನ್ನು ಕುಳಿತಲೇ ತಂಪಾಗಿಸಿ ಮೋಡಿ ಮಾಡಿದ ಮಳೆ, ಮಳೆ, ಮಳೆಗೆ!

-ಆನಂದಕುಮಾರ್, ಸಕಲೇಶಪುರ

...ಸಿದ್ಧವಾಗಿ ನಿಂತಿರುತ್ತದೆ. ...ರ ಉಪಟಳ ತಾಳಲಾರದೇ ... ಕಾರ್ಯಾಗಾರದ ...ಜನ ಜೀವವನ್ನೇ ...ಕೊಂಡಿದ್ದಾರೆ.

...ಗಜು ಕಬಾಡಿ ಎಂಬ ಮತ್ತೊಬ್ಬ ...ಕುಳದ ರಾದ್ಧಾಂತ ಇನ್ನೊಂದು. ...ಅಕ್ಕಿ ಹೊಂಡದ ಅಂದಾನೆಪ್ಪ ...ಸಿದ್ಧಪ್ಪ ಹೂಗಾರ ...ಯುವವರಿಗೆ 2 ಲಕ್ಷ ಸಾಲ ...ಬೇಕಿದ್ದ. ಕೆ.ಎಸ್.ಎಫ್.ಸಿ. ...ವನ್ನು ಮರುಪಾವತಿ ಮಾಡಲು ...ದಾನೆಪ್ಪ ಈ ಸಾಲ ...ಕೊಂಡಿದ್ದರು. ಆದರೆ ಅವರು ... ಕಬಾಡಿ ಎಂಬ ಬಡ್ಡಿಮಗನಿಗೆ ... ಕಟ್ಟಿಯೇ ಸುಣ್ಣವಾಗಿ ಹೋದರು. ನೂರಕ್ಕೆ ...ಳಿಗೆ 10 ರೂಪಾಯಿಯಂತೆ ಪ್ರತಿ ತಿಂಗಳು 20 ...ರ ರೂಪಾಯಿಗಳನ್ನು ಬಡ್ಡಿ ಕಟ್ಟಿದರು. ಕಳೆದ ...ರಡು ತಿಂಗಳು ಕಾರಣಾಂತರದಿಂದ ಬಡ್ಡಿ ಕಟ್ಟಲು ...ವಾಗಲಿಲ್ಲ. ಇದರಿಂದ ಕೋಪಗೊಂಡ ಗಜು ... ತನ್ನ ಗೂಂಡಾ ಗ್ಯಾಂಗ್‌ನೊಂದಿಗೆ ಬಂದು ...ಬಾಂಡೆ ನಗರದಲ್ಲಿರುವ ಅಂದಾನೆಪ್ಪ ಹೂಗಾರರ ...ಮ್ಯ ಸಂಕೀರ್ಣವನ್ನೇ ತನ್ನ ಹೆಸರಿಗೆ ಬರೆಸಿಕೊಂಡ! ... 2 ಲಕ್ಷ ಸಾಲಕ್ಕೆ ... ಲಕ್ಷ ಬಡ್ಡಿ ತಿಂದದ್ದಲ್ಲದೇ ...ಮ್ಯ ಸಂಕೀರ್ಣವನ್ನು ತನ್ನ ...ಗೆ ಹಾಕಿಕೊಂಡ ಗಜು ...ಯನ್ನು ಈ ಪ್ರಕರಣದಲ್ಲಿ ...ಸರು ಒದ್ದು ಒಳಗೆ ...ದ್ದಾರೆ.

...ನ್ನು ಚಾಂದ್‌ಬಿ ...ಬಾದಿ ಎಂಬ ಶಿಕ್ಷಕಿಯ ...ತ ಕಥೆ ಬೇರೆ ಇದೆ. ...ಡದ ಬೂಸಪ್ಪ ಚೌಕಿಯ ...ಕ್ಷಕಿ ನಾಲ್ಕು ವರ್ಷದ ಹಿಂದೆ ...ಶೇಖರ್ ಎಂಬುವವನಿಂದ ...ವಿರ ಸಾಲ ಪಡೆದಿದ್ದಳು. ...ಕೊಡುವಾಗ ಖಾಲಿ ...ಪೇಪರ್ ಮೇಲೆ, ಚೆಕ್ ... ಸಹಿ ಪಡೆದಿದ್ದ ಈತ ಶಿಕ್ಷಕಿಯನ್ನು ಬೆದರಿಸಿ ...ಗೆ ತಿಂಗಳಿಗೆ ನೂರಕ್ಕೆ 5 ರೂಪಾಯಿಯಂತೆ ... ಮಾಡಿದ್ದಾನೆ. ಆದರೂ ಅಸಲು ಬಡ್ಡಿ ಸೇರಿ ... 1 ಲಕ್ಷ 65 ಸಾವಿರ ಬರಬೇಕು ಎಂದು ...ನ್ನು ಹಿಂಪಡೆಯಲು... ಹಿಂಸಿಸತೊಡಗಿದ್ದಾನೆ.



ಬಾಬು ಅಣವೇಕರ್

ಹುಬ್ಬಳ್ಳಿಯ ಚಂದ್ರಶೇಖರ್ ಗದಗರು ಗಣಪತಿ ಧನಬಂಜನ ಎಂಬ ಫೈನಾನ್ಸರ್‌ನಿಂದ ಪಡೆದದ್ದು 70 ಸಾವಿರ. ಈವರೆಗೆ ಅವರು ಕಟ್ಟಿದ್ದು 1 ಲಕ್ಷ. ಈಗ ಮತ್ತೆ 1 ಲಕ್ಷ ಕೊಡು ಎಂದು ಫೈನಾನ್ಸರ್ ಹಿಂಸೆ ನೀಡಲಾರಂಭಿಸಿದ್ದಾನೆ.

ಮಹಾನಗರ ಪಾಲಿಕೆ, ಕೆಎಸ್‌ಆರ್‌ಟಿಸಿ, ಕೆಇಬಿಯಂತಹ ಸರ್ಕಾರಿ ನೌಕರರಿಗೆ ತಿಂಗಳಿಗೆ, ನೂರಕ್ಕೆ 10 ರೂಪಾಯಿಯಂತೆ ಬಡ್ಡಿ ಹಾಕಿ ಹಿಂಡುತ್ತಿರುವ ರಾಜು ಪವಾರ, ಸದಾನಂದ, ಮೆಹರವಾಡೆ, ವಿಠ್ಠಲ, ಮಿಸ್ಕಿನ, ನಾರಾಯಣ ಮಾಮರಡಿ, ವಿಷ್ಣು ಮಿಸ್ಕಿನ ಹೀಗೆ ಹಲವಾರು ಬಡ್ಡಿ ಕುಳಗಳು ಹುಬ್ಬಳ್ಳಿಯಲ್ಲಿ ಮೆರೆಯುತ್ತಿದ್ದಾರೆ.

ಈ ಮೇಲಿನ ಬಡ್ಡಿ ಮಕ್ಕಳಲ್ಲಿ ಕೆಲವರು ಈಗ ಪೊಲೀಸರ ಅತಿಥಿಯಾಗಿದ್ದಾರೆ. ಆದರೂ ಹುಬ್ಬಳ್ಳಿ ಶಹರದ ಒಳಗೆ-ಹೊರಗೆ ಇನ್ನೂ ಭಾರಿ ಬಡ್ಡಿ ಕುಳಗಳು ಇವೆ. ಅವರ್ಯಾರೂ ಕ್ಯಾರೆ ಎನ್ನದೆ ತಮ್ಮ ವ್ಯವಹಾರ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇವರಿಗೆಲ್ಲ ನಾರಾಯಣ ನಡುಮನಿಯ ಕೋಳ ಯಾವಾಗ ಬೀಳುತ್ತೋ ನೋಡಬೇಕು.




ಇನ್ಸ್‌ಪೆಕ್ಟರ್ ಸಕ್ರಿ

ರೇಲ್ವೆ ಕಾರ್ಮಿಕರನ್ನು ಮುಕ್ಕುತ್ತಿರುವ ಬಡ್ಡಿಮಕ್ಕಳು

ಅತ್ಯಂತ ಹಳೆಯದಾದ ಹುಬ್ಬಳ್ಳಿಯ ರೇಲ್ವೆ ಕಾರ್ಯಾಗಾರದಲ್ಲಿ ನೌಕರರಾಗಿದ್ದುಕೊಂಡೇ ಇತರೇ ನೌಕರರನ್ನು ಬಡ್ಡಿಯ ಪಾಶಕ್ಕೆ ಸಿಲುಕಿಸಿ ರಕ್ತ ಹೀರುವ ದೊಡ್ಡ ಹಿಂಡೇ ಅಡಗಿಕೊಂಡಿದೆ. ಕಮರಿಪೇಟೆಯ ಎಲೆಕ್ಟ್ರಿಕಲ್ ವಿಭಾಗದ ಮೋಹನ್, ಚವ್ಹಾಣ್, ಲದ್ವಾ ಪೇಂಟ್‌ಶಾಪಿನ ಕ್ಯಾರಕಟ್ಟಿ, ಗೋಕಾಕ್, ಆರ್.ಜಿ.ಎಸ್.ನ ಲಕ್ಷ್ಮಣ್ ಕೊರಪಾಟಿ, ಮೆಷಿನ್‌ಶಾಪಿನ ಗದಗ, ಕಮರಿಪೇಟೆ, ಮೆಹರವಾಡೆ, ಶಿಂಧೆ, ಪೌಂಡ್ರಿ ಶಾಪಿನ ಅನಿಲ್‌ಪಾಟೀಲ್, ಸ್ಮಿಥಿಶಾಪಿನ ಚಂದ್ರು ಮತ್ತು ಡಿಕ್ಸನ್-ಹೀಗೆ ನೌಕರರ ರಕ್ತ ಹೀರುವುದಕ್ಕೆ ದೊಡ್ಡ ದಂಡೇ ರೇಲ್ವೆ ಕಾರ್ಯಾಗಾರದಲ್ಲಿ ಠಿಕಾಣಿ ಹೂಡಿದೆ. ಈ ಮಾಫಿಯಾದ ಬಗ್ಗೆ ಯಾವ ಕಾರ್ಮಿಕನೂ, ಯಾವ ಅಧಿಕಾರಿಯೂ ಬಾಯಿ ಬಿಡುವುದಿಲ್ಲ. ಹಾಗಿದೆ ಇವರ ಕಂಟ್ರೋಲ್.


ಕಾರ್ಮಿಕರ ಪಾಸ್‌ಬುಕ್, ಚೆಕ್ ಬುಕ್, ATM ಕಾರ್ಡ್‌ಗಳನ್ನೇ ಅಡವಿಟ್ಟುಕೊಂಡು ಸಾಲ ನೀಡುವ ಈ ಗ್ಯಾಂಗ್ ಹಾಕುವುದು ನೂರಕ್ಕೆ ತಿಂಗಳಿಗೆ 5 ರೂಪಾಯಿ ಬಡ್ಡಿ. ನೂರಕ್ಕೆ ತೊಂಭತ್ತರಷ್ಟು ಕಾರ್ಮಿಕರ ಚೆಕ್‌ಬುಕ್-ಪಾಸ್‌ಬುಕ್‌ಗಳಿರುವುದು ಇವರ ವಶದಲ್ಲಿಯೇ!

ಬಾಯಿಲರ್ ಶಾಪಿನಲ್ಲಿರುವ ರಂಗಯ್ಯ ಎಂಬ ಆಂಧ್ರ ಕೊಡುಕು 2 ರೂಪಾಯಿ ಬಡ್ಡಿಯಂತೆ ಹಣ ತಂದು 6 ರೂಪಾಯಿ ಬಡ್ಡಿ ಲೆಕ್ಕದಲ್ಲಿ ಕಾರ್ಮಿಕರಿಗೆ ನೀಡಿ ಸುಲಿಯುತ್ತಿದ್ದಾನೆ. ಇವನು ಸ್ಮಿಥಿಯ ಶ್ರೀಕಾಂತ್ ಎನ್ನುವ ಕಾರ್ಮಿಕನಿಗೆ ಕೊಟ್ಟದ್ದು 50 ಸಾವಿರವಾದರೂ ಅವನ ಖಾಲಿ ಚೆಕ್‌ನಲ್ಲಿ 1.50 ಲಕ್ಷ ಬರೆದುಕೊಂಡಿದ್ದ! ಆದರೆ ಚೆಕ್ ಬೌನ್ಸ್ ಆಯಿತು ಎಂಬುದು ಬೇರೆ ಮಾತು.



ರಫೀಕ್

ಇವರಲ್ಲದೇ, ಇದೇ ರೇಲ್ವೆ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿದ ಚುಟಕೆ ಎಂಬುವವನು ತನ್ನ ಮಗ ರಾಕೇಶ್ ಚುಟಕೆ ಎಂಬುವವನ ಹೆಸರಿನಲ್ಲಿ ಸ್ಟೇಷನ್ ರೋಡಿನ ಆಜಾದ್ ಬ್ಯಾಂಕಿನ ಎದುರಿನ ಹರ್ಷ ಕಾಂಪ್ಲೆಕ್ಸ್‌ನಲ್ಲಿ ಕಚೇರಿ ತೆರೆದು ಫೈನಾನ್ಸ್ ನಡೆಸುತ್ತಿದ್ದಾನೆ. ಕಾಂಗ್ರೆಸ್‌ನ ಧುರೀಣ ಎಂಬ ಬೋರ್ಡ್ ತಗಲು ಹಾಕಿಕೊಂಡಿರುವ ಇಸೂಪ, ಗಣೇಶಪೇಟೆಯ ಬಾಬುಜಾನ್ ಹನಗುಂದ ಎಂಬುವವರೂ ಏನೂ ಕಡಿಮೆ ಇಲ್ಲ. ಇವರೆಲ್ಲರೂ ನೌಕರರ ಹತ್ತಿರ ಖಾಲಿ ಬಾಂಡ್ ಪೇಪರ್ ಮೇಲೆ ಸಹಿ ಹಾಕಿಸಿಕೊಂಡು, ಅವರ ಪಾಸ್‌ಬುಕ್, ATM, ಚೆಕ್‌ಬುಕ್‌ಗಳನ್ನೆಲ್ಲ ಅಡವಿಟ್ಟುಕೊಂಡು 10ರ ಲೆಕ್ಕದಲ್ಲಿ ಬಡ್ಡಿ ಹಾಕಿ ನೌಕರರ ರಕ್ತ ಹೀರುವ ಜಿಗಣೆಗಳೇ. ಯಾವಾಗ ರೇಡ್ ಮಾಡಿದರೂ ಇವರ ಹತ್ತಿರ ಪಾಸ್‌ಬುಕ್, ಚೆಕ್‌ಬುಕ್ ಹಾಗೂ ಖಾಲಿ ಬಾಂಡ್ ಪೇಪರ್‌ಗಳ ರಾಶಿಯೇ ದೊರೆಯುತ್ತದೆ.



ಇಸ್ರೂಪ

ಸೆಟ್ಲಮೆಂಟ್‌ನ ಜನರಲ್ ಪರಸು, ರವಿ, ಬಿಜವಾಡ, ರಾಜು ದೊಡಮನಿ, ಧರಮು ದೊಡಮನಿ, ಮೋಹನ ದೊಡಮನಿ, ಯಲ್ಲಪ್ಪ ಜಾದವ್ ಹಾಗೂ ಸಹೋದರರು ಬ್ಯಾಂಕ್‌ಗಿಂತ ಹೆಚ್ಚಿನ ವ್ಯವಹಾರ ಮಾಡುತ್ತಾರೆ. ಆಸ್ತಿಯ ದಾಖಲೆಗಳನ್ನು ಕೊಟ್ಟರೆ ಸರವತ್ತಿನಲ್ಲಿ 2 ಲಕ್ಷ ಸಾಲ ಕೊಟ್ಟುಬಿಡುತ್ತಾರೆ. ಇವರ ವ್ಯವಹಾರ ಸರಿಯಾಗಿ ನಡೆಯಲೆಂದು ಪ್ರತಿ ತಿಂಗಳು ಬೆಂಡಿಗೇರಿ ಪೊಲೀಸ್ ಸ್ಟೇಷನ್ನಿಗೆ ಕಾಣಿಕೆ ಕೊಡಲು ಮರೆಯುವುದಿಲ್ಲ.

ಹೀಗೆ ಕೆಲವೆಡೆ ಪೊಲೀಸ್ ಸ್ಟೇಷನ್‌ನಲ್ಲಿ ಪೊಲೀಸರು ಬಡ್ಡಿಮಕ್ಕಳೊಂದಿಗೆ ಶಾಮೀಲಾಗಿ ಜನಸಾಮಾನ್ಯರನ್ನು ಹಿಂಡುತ್ತಿದ್ದರೆ ನಡುಮನಿ ಸಾಹೇಬ್ರು ರೇಡು-ಗೀಡು ಅಂತ ಕೆಲವರನ್ನು ಅರೆಸ್ಟ್ ಮಾಡುತ್ತಿದ್ದಾರೆ. ಈ ಬಡ್ಡಿಕುಳಗಳೆಲ್ಲ ಸಂಘಪರಿವಾರದ ಚೆಡ್ಡಿಗಳಿಗೆ ಪ್ರತಿ ತಿಂಗಳೂ ಕಾಣಿಕೆ ಕೊಡುತ್ತಾರೆ. ಅದಕ್ಕೆ ಪ್ರತಿಯಾಗಿ ಚೆಡ್ಡಿಗಳು ಅವರ ದಂಧೆಗೆ ಬೆಂಗಾವಲಾಗಿ ನಿಲುತ್ತಾರೆ. ಇದು ಬಡ್ಡಿಮಕ್ಕಳಿಗೂ ಚೆಡ್ಡಿ ಮಕ್ಕಳಿಗೂ ನಡುವಿರುವ ಅಂಡರ್‌ಸ್ಟ್ಯಾಂಡಿಂಗ್. ಹೀಗಾಗಿ ಕೊನೆಗೂ ಉಳಿಯುವ ಪ್ರಶ್ನೆ ಎಂದರೆ, ಯಾವ ಚೆಡ್ಡಿ ಬೆದರಿಕೆಗೂ ಜಗ್ಗದೇ, ಯಾವ ರಾಜಕೀಯ ಒತ್ತಡಕ್ಕೂ ಮಣಿಯದೇ ನಡುಮನಿ ಸಾಹೇಬರು ಎಲ್ಲ ಬಡ್ಡಿಮಕ್ಕಳನ್ನೂ, ಅವರಿಗೆ ಬೆಂಬಲವಾಗಿ ನಿಂತಿರುವ ಚೆಡ್ಡಿ ಮಕ್ಕಳನ್ನೂ ಕಂಬಿಯ ಹಿಂದೆ ಕೂರಿಸುವ ಧೈರ್ಯ ಮಾಡುತ್ತಾರಾ? ಎಂಬುದು.

-ವರದಿಗಾರ



ನರಭಕ್ಷಕಗಳು ಒಂದೇ.... ಎರಡೇ?

...ಯಾರಿಗಾದರೂ ಕಾಡು ಪ್ರಾಣಿಗಳ ಕೂಗು, ಧ್ವನಿಗಳ ವಿರೀತಗಳ ವೈವಿಧ್ಯವನ್ನು ಕೇಳಿ ತಣಿಯುವ ಆಸಕ್ತಿ ಇದ್ದರೆ ಅದು ನರಭಕ್ಷಕಗಳ ಬೆನ್ನು ಹತ್ತಿದಾಗ ತುಂಬಾ ನೆರವಿಗೆ ಬರುತ್ತವೆ. ಈ ಕಾಡು ಪ್ರಾಣಿ-ಪಕ್ಷಿಗಳು ಒಂದು ಮೂಂಸಾಹಾರಿ ಅವರಲ್ಲೂ ಹುಲಿಗೆ ಪ್ರತಿಕ್ರಿಯಿಸುವ ಶಬ್ದ ವೈವಿಧ್ಯಗಳು ಹಾಗೂ ಗಾಳಿಯ ದಿಕ್ಕು ಇಂತಹ ಪ್ರದೇಶಗಳಲ್ಲಿ ನರಭಕ್ಷಕಗಳ ಬೆನ್ನು ಹತ್ತುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಒಬ್ಬ ಕ್ರಿಯಾಶೀಲ ಶಿಕಾರಿದಾರ ಇಂಥ ಪ್ರಾಣಿ-ಪಕ್ಷಿಗಳ ಕೂಗಿನ ಮೇಲೆ ತುಂಬಾ ಅವಲಂಬಿತನಾಗಿರುತ್ತಾನೆ. ಇವು ಹುಲಿಯ ಚಲನೆಯ ದಿಕ್ಕನ್ನು ಅವನಿಗೆ ನಿರ್ದೇಶಿಸುತ್ತವೆ. ಅಂತಹ ಪ್ರಾಣಿಪಕ್ಷಿಗಳ ವಿವರಗಳನ್ನು ಕೊಡುವ ಸಮಯ ಇದಲ್ಲ. ಈ ಪರ್ವತ ಪ್ರದೇಶದಲ್ಲಿ ಎತ್ತರಕ್ಕನುಗುಣವಾಗಿ ಇವುಗಳ ಹೆಸರು, ಕುಲ, ಪ್ರಭೇದಗಳೂ ವ್ಯತ್ಯಾಸಗೊಳ್ಳುತ್ತವೆ. ಕಣಿವೆಯ ತಳದಲ್ಲಿರುವ ಪ್ರಾಣಿ-ಪಕ್ಷಿ ಸಂಕುಲ ಐದಾರು ಸಾವಿರ ಅಡಿಗಳ ಎತ್ತರದಲ್ಲಿ ಕಾಣುವುದಿಲ್ಲ. ಇಂಥ ಸಂದರ್ಭದಲ್ಲಿ ನುರಿತ ಶಿಕಾರಿದಾರನಿಗೆ ಎಲ್ಲೆಡೆ ಸಹಾಯಕ್ಕೆ ಬರುವುದೆಂದರೆ ಗಾಳಿ ಮತ್ತು ಅದು ಬೀಸುವ ದಿಕ್ಕು. ಎತ್ತರಕ್ಕನುಗುಣವಾಗಿ ವೇಗದಲ್ಲಿ ವ್ಯತ್ಯಾಸವಾದರೂ ಗಾಳಿ ಮತ್ತು ದಿಕ್ಕುಗಳು ಮಾತ್ರ ಇದ್ದೇ ಇರುತ್ತವೆ. ಹಾಗಾಗಿ ಶಿಕಾರಿದಾರ ಏಕಕಾಲದಲ್ಲಿ ಈ ಎರಡನ್ನೂ ಅವಲಂಬಿಸಬೇಕಾಗುತ್ತದೆ. ಇವುಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ಜಾಣತನವಿದ್ದರೆ ಇಲ್ಲೇ ಎಲ್ಲೋ ನಮ್ಮನ್ನು ನೋಡಿ, ಮುಂದೆಲ್ಲೋ ಕಾದಿದ್ದು, ನಮ್ಮನ್ನೇ ಬಲಿತೆಗೆದುಕೊಳ್ಳಲು ಸಿದ್ಧವಾಗಿ ನಿಂತಿರುವ ನರಭಕ್ಷಕನಿಂದ ತಪ್ಪಿಸಿಕೊಂಡು, ನಾವೇ ಅದರ ಸಂಪರ್ಕ ಸಾಧಿಸಲು ಸಾಧ್ಯ.

ಮನುಷ್ಯನಿಗೆ ವಾಸನೆ ಹಿಡಿಯುವ ಸಾಮರ್ಥ್ಯವಿರುವುದಿಲ್ಲವೆಂದು ಈ ದಡ್ಡ ಹುಲಿಗಳಿಗೆ ತಿಳಿದಿರುವುದಿಲ್ಲ. ಹುಲಿಯೊಂದು ನರಭಕ್ಷಕನಾಗಿ ಪರಿವರ್ತನೆಯಾದ ನಂತರದಲ್ಲಿ ಮನುಷ್ಯನನ್ನೂ ಸಹ ಒಂದು ಕಾಡುಪ್ರಾಣಿಯಂತೆಯೇ ಪರಿಗಣಿಸುತ್ತದೆ. ಅವನೂ ಇತರ ಪ್ರಾಣಿಗಳಂತೆ ವಾಸನೆಯನ್ನು ಆಧರಿಸಿ ನಡೆಯುತ್ತಾನೆ ಎಂದು ಭಾವಿಸಿರುತ್ತದೆ. ಹಾಗಾಗಿಯೇ ಆಕ್ರಮಣ ಮಾಡುವಾಗ ಅವನನ್ನು ಮೇಲ್ಗಾಳಿಗೆ ಬಿಟ್ಟುಕೊಳ್ಳುತ್ತದೆ. ಕಾದು ಹಿಡಿಯಬೇಕಾದರೆ ಕೆಳಗಾಳಿಯಲ್ಲಿ ಅಡಗಿ ಕಾಯುತ್ತದೆ. ಇದು ಸ್ಪಷ್ಟಪಡಿಸುವುದೇನೆಂದರೆ ಶಿಕಾರಿದಾರ ಹೇಗೆ ಹುಲಿಯನ್ನು ಹುಡುಕಿ ಬೆನ್ನಟ್ಟುತ್ತಾನೋ ಹಾಗೆಯೇ ಹುಲಿ ಸಹ ಶಿಕಾರಿದಾರನ ಬೆನ್ನು ಹತ್ತಿರುತ್ತದೆ, ಇಲ್ಲವೇ ನಿಖರವಾಗಿ ಯೋಜಿಸಿ, ಮುಂದೆಲ್ಲೋ ಕಾಯ್ದು ಕುಳಿತಿರುತ್ತದೆ.

ಈವರೆಗೂ ಈ ನರಭಕ್ಷಕಿ ಮನುಷ್ಯರನ್ನಾಗಲೀ ಪ್ರಾಣಿಗಳನ್ನಾಗಲೀ ಹಿಡಿದಿರುವುದನ್ನು ನೋಡಿದರೆ ಪ್ರತಿ ಬಾರಿಯೂ ಅದು ಹಿಂದಿನಿಂದಲೇ ಆಕ್ರಮಣ ಮಾಡಿದೆ. ಈ ನಿಬಿಡಾರಣ್ಯದಲ್ಲಿ ನರಭಕ್ಷಕನ ಬೆನ್ನು ಹತ್ತಿದ ಶಿಕಾರಿದಾರನ ವಿಷಯದಲ್ಲಿ ಈ 'ಗುಣ ವಿಶೇಷ' ಪ್ರಾಣಾಂತಿಕವಾದದ್ದು. ಗಾಳಿಯ ಹರಿವಿನ ಪೂರ್ಣ ತಿಳುವಳಿಕೆ ಇಲ್ಲದಿದ್ದರೆ ಅವನು ಹಿಂತಿರುಗುವುದು ಅಸಾಧ್ಯ. ಉದಾಹರಣೆಗೆ ಶಿಕಾರಿದಾರನೊಬ್ಬ ನೆಲದ ಲಕ್ಷಣಗಳನ್ನು ಆಧರಿಸಿ ದಾರಿ ಸಾಗಿದಂತೆ ಮುಂದುವರಿಯುತ್ತಿದ್ದಾನೆ ಎಂದಿಟ್ಟುಕೊಂಡರೆ, ಗಾಳಿ ಅವನಿಗೆ ಎದುರಾಗಿ ಬೀಸುತ್ತಿದ್ದರೆ ಸಾವು ಹಿಂದಿನಿಂದ ಬೆನ್ನತ್ತಿದೆ ಎಂದೇ ಅರ್ಥ. ಕನಿಷ್ಠ ಮಟ್ಟದಲ್ಲಿ ಗಾಳಿಯೊಂದಿಗೆ ವ್ಯವಹರಿಸುವ ಕಲೆ ಗೊತ್ತಿದ್ದರೆ ಗಾಳಿಗೆ ಪರ್ಯಾಯವಾಗಿ ನಡಿಗೆಯನ್ನು ಒಮ್ಮೆ ಮೇಲ್ಗಾಳಿಗೆ ಒಮ್ಮೆ ಕೆಳಗಾಳಿಗೆ ಬದಲಾಯಿಸಿಕೊಂಡು ನಡೆಯುವ ಮೂಲಕ ಪ್ರಾಣಾಪಾಯವನ್ನು ಒಮ್ಮೆ ಎಡಕ್ಕೆ ಇನ್ನೊಮ್ಮೆ ಬಲಕ್ಕೆ ವರ್ಗಾಯಿಸಿಕೊಳ್ಳುತ್ತಾ ಅದರ ದಿಕ್ಕು ತಪ್ಪಿಸಬಹುದು. ಬರವಣಿಗೆಯಲ್ಲಿ ಆಕರ್ಷಕವಾಗಿಲ್ಲದ ಈ ಕ್ರಮವನ್ನು ನಡಿಗೆಯಲ್ಲಿ ಆಚರಣೆಗೆ ತರುವುದು ಸುಲಭ. ನಡಿಗೆ ಸ್ವಲ್ಪ ನಿಧಾನವಾಗುತ್ತದೆ ಎಂಬುದನ್ನು ಬಿಟ್ಟರೆ ಹಿಂದೋ-ಮುಂದೋ ಅವಿತು ಕುಂತಿರುವ ಸಾವಿನಿಂದ ಬಚಾವಾಗುವ ಮಾರ್ಗಗಳಲ್ಲಿ ಇದಕ್ಕಿಂತ ಉತ್ತಮ ಮಾರ್ಗ ನನಗೆ ಗೊತ್ತಿಲ್ಲ.


ಸಂಜೆಯ ಹೊತ್ತಿಗೆ ಹುಲಿಯ ಇರುವಿನ ಯಾವ ಸೂಚನೆಗಳನ್ನೂ ಕಾಣದೆ ನಾನು ಕಣಿವೆಯ ಇನ್ನೊಂದು ತುದಿಯನ್ನು ತಲುಪಿದೆ. ಈ ನಡುವೆ ನನಗೆ ಪ್ರಾಣಿಪಕ್ಷಿಗಳಿಂದಲೂ ಯಾವ ಸೂಚನೆಗಳೂ ಸಿಗಲಿಲ್ಲ. ಇಲ್ಲಿಂದ ನನಗೆ ಕಾಣುತ್ತಿದ್ದ ಒಂದೇ ಒಂದು ಜೀವ ಸಂಚಾರದ ಕುರುಹೆಂದರೆ ಕಣಿವೆಯ ಉತ್ತರ ಭಾಗಕ್ಕಿದ್ದ ಒಂದು ದನದ ದೊಡ್ಡಿ.

ಈ ರಾತ್ರಿಯೂ ಇಲ್ಲಿಯೇ ಉಳಿಯಬೇಕಾಗಿತ್ತು. ಎಚ್ಚರಿಕೆಯಿಂದ ಸುರಕ್ಷಿತವಾದ ಮರವನ್ನು ಆಯ್ದುಕೊಂಡು ನಿದ್ದೆಹೋದೆ. ನಾನು ಮಲಗಿದ ಸ್ವಲ್ಪ ಹೊತ್ತಿನಲ್ಲಿಯೇ ಹುಲಿ ಘರ್ಜಿಸಿದ್ದು ಕೇಳಿಸಿತು. ಅದರ ಹಿಂದೆಯೇ ಕಾಡತೂಸಿದ ಬಂದೂಕದಿಂದ ಗುಂಡು ಹಾರಿದ್ದು ಕೇಳಿಸಿತು. ಅದನ್ನು ಅನುಸರಿಸಿ ಸುತ್ತಮುತ್ತಲ

ಮನುಷ್ಯನಿಗೆ ವಾಸನೆ ಹಿಡಿಯುವ ಸಾಮರ್ಥ್ಯವಿರುವುದಿಲ್ಲವೆಂದು ಈ ದಡ್ಡ ಹುಲಿಗಳಿಗೆ ತಿಳಿದಿರುವುದಿಲ್ಲ. ಹುಲಿಯೊಂದು ನರಭಕ್ಷಕನಾಗಿ ಪರಿವರ್ತನೆಯಾದ ನಂತರದಲ್ಲಿ ಮನುಷ್ಯನನ್ನೂ ಸಹ ಒಂದು ಕಾಡುಪ್ರಾಣಿಯಂತೆಯೇ ಪರಿಗಣಿಸುತ್ತದೆ. ಅವನೂ ಇತರ ಪ್ರಾಣಿಗಳಂತೆ ವಾಸನೆಯನ್ನು ಆಧರಿಸಿ ನಡೆಯುತ್ತಾನೆ ಎಂದು ಭಾವಿಸಿರುತ್ತದೆ. ಹಾಗಾಗಿಯೇ ಆಕ್ರಮಣ ಮಾಡುವಾಗ ಅವನನ್ನು ಮೇಲ್ಗಾಳಿಗೆ ಬಿಟ್ಟುಕೊಳ್ಳುತ್ತದೆ. ಕಾದು ಹಿಡಿಯಬೇಕಾದರೆ ಕೆಳಗಾಳಿಯಲ್ಲಿ ಅಡಗಿ ಕಾಯುತ್ತದೆ.

ದನದ ಹಟ್ಟಿಗಳಿಂದ ಇನ್ನಷ್ಟು ಕಾಡತೂಸುಗಳು ಸಿಡಿದ ಸದ್ದು ಕೇಳಿಸಿದವು. ಇವೆಲ್ಲಾ ಆದ ನಂತರದಲ್ಲಿ ಇಡೀ ಕಾಡು ಮೌನವಾಗಿ ಮಲಗಿತ್ತು.

ಮರುದಿನ ಮಧ್ಯಾಹ್ನದವರೆಗೂ ಕಣಿವೆಯ ಎಲ್ಲಾ ಭಾಗಗಳನ್ನೂ ತಡಕಾಡಿದೆ. ಹುಲಿಗಳ ಸುಳಿವು ಸಿಗಲಿಲ್ಲ. ಮಧ್ಯಾಹ್ನದ ನಂತರ ದಲ್ಯಾನಿಯಾದ ನನ್ನ ಕ್ಯಾಂಪಿನತ್ತ ಹೊರಟಾಗ ನಿನ್ನೆ ಸಂಜೆ ನೋಡಿದ್ದ ದನದ ರೊಪ್ಪದ ಕಡೆಯಿಂದ ಅನೇಕ ಬಾರಿ ಕೂಗಿದ್ದು ಕೇಳಿಸಿತು. ಸ್ವಲ್ಪ ಸಮಯದ ನಂತರ ನಾನು ಆ ಕೂಗಿಗೆ ಮಾರುತ್ತರ ನೀಡಿದೆ. ಮತ್ತೆ ಅತ್ತಲಿಂದ ಕೂಗು ಬಂದಾಗ ಎತ್ತರದ ಬಂಡೆಯ ತುದಿಯಲ್ಲಿ ಮನುಷ್ಯನೊಬ್ಬ ಕೂಗುತ್ತಾ ನಿಂತಿರುವುದು ಕಾಣಿಸಿತು. ಅವನು ಅಲ್ಲಿ ನಿಂತು ಇಡೀ ಪ್ರಾಂತ್ಯಕ್ಕೆ ಕೇಳುವಂತೆ..... "ನೈನಿತಾಲಿನಿಂದ ನರಭಕ್ಷಕನನ್ನು ಹೊಡೆಯಲು ಬಂದಿರುವವರು ನೀವೇನಾ?" ಎಂದು. ನಾನು ಕೂಗಿ "ಹೌದೆಂದು" ಉತ್ತರಿಸಿದೆ. ಅದಕ್ಕೆ ಪ್ರತ್ಯುತ್ತರವಾಗಿ "ಸ್ವಲ್ಪ ಹೊತ್ತಿಗೆ ಮುಂಚೆ ನೀವು ನಿಂತಿರುವ ಕಣಿವೆಯ ತಗ್ಗಿನಲ್ಲಿರುವ ಹಳ್ಳದ ಬದಿಯಿಂದ ದನಗಳ ಹಿಂಡು ಗಾಬರಿ ಬಿದ್ದು ಓಡಿಬಂದವೆಂದೂ.... ಅವು ಹಟ್ಟಿ ತಲುಪಿದಾಗ ಎಣಿಸಿ ನೋಡಿದರೆ ಒಂದು ಬಿಳಿಯ ಹಸು ಕಾಣೆಯಾಗಿರುವುದು ತಿಳಿದು ಬಂತೆಂದೂ" ಹೇಳಿದ.



ಆ ಹಸುವನ್ನು ನಿನ್ನೆ ಘರ್ಜಿಸುತ್ತಿದ್ದ ಹುಲಿಯೇ ಹಿಡಿದಿದೆ ಎಂದು ಅವನು ಸಂದೇಹ ಪಟ್ಟಿದ್ದ. ಮಾಹಿತಿಗಾಗಿ ಅವನಿಗೆ ಧನ್ಯವಾದ ತಿಳಿಸಿ ನಾನು ಹಳ್ಳದತ್ತ ಇಳಿದೆ. ದನಗಳು ಓಡಿಹೋಗಿದ್ದ ಜಾಡನ್ನು ಗುರುತಿಸಿ, ಅದನ್ನೇ ಅನುಸರಿಸಿ ಹಿಂದಕ್ಕೆ ಹೋದಾಗ ಹುಲಿ ಹಸುವನ್ನು ಕೊಂದಿರುವ ಜಾಗ ಸಿಕ್ಕಿತು. ಕೊಂದಾದ ನಂತರ ಹುಲಿ ಹಸುವನ್ನು ಪಕ್ಕದಲ್ಲಿದ್ದ ಕೊರಕಲಿನತ್ತ ಎಳೆದುಕೊಂಡು ಹೋಗಿತ್ತು. ಈಗಿಂದೀಗಲೇ ಹುಲಿ ಎಳೆದುಕೊಂಡು ಹೋದ ಜಾಡಿನಲ್ಲೇ 'ಎಳೆತ'ವನ್ನು ಹಿಂಬಾಲಿಸುವುದು ಜಾಣತನವೇನಲ್ಲ. ತಕ್ಷಣ ನಾನು ತಗ್ಗಿಗಿಳಿದು; ಅಲ್ಲಿಂದ ಬಳಸಿ ಮೇಲಕ್ಕೆ ಸಾಗಿ, ಅದು ಹಸುವನ್ನು ಹಾಕಿಕೊಂಡಿರುವ ಜಾಗದತ್ತ ಬಂದೆ. ನಿರ್ದಿಷ್ಟವಾಗಿ ಆ ಜಾಗ ನನಗೆ ಕಾಣುತ್ತಿರಲಿಲ್ಲವಾದರೂ, ಆ ಜಾಗದ ಸ್ಪಷ್ಟ ಅಂದಾಜು ನನಗೆ ಸಿಕ್ಕಿತು. ನನ್ನ ಮತ್ತು ಹಸುವಿನ ಕಳೇಬರದ ನಡುವೆ ಸೊಂಟದೆತ್ತರದ ಜರೀಗಿಡಗಳು ಚೆಲ್ಲಿದಂತೆ ಬೆಳೆದಿದ್ದವು. ನಿಶ್ಯಬ್ದವಾಗಿ ನಾನು ಒಂದೊಂದೇ ಹೆಜ್ಜೆ ಮುಂದುವರಿದೆ. ಸ್ವಲ್ಪದೂರ ಬರುವಷ್ಟರಲ್ಲಿ ನನಗೆ ಬಿಳಿ ಬಣ್ಣದ ವಸ್ತುವೊಂದು ಕಾಣಿಸಿತು. ಅದು ಅಲ್ಲಾಡುತ್ತಿತ್ತು. ಅದು ಹುಲಿಯ ಕಾಲಿರಬಹುದೇ? ಅಥವಾ ಹುಲಿಯು ಕಿತ್ತು ತಿನ್ನುತ್ತಿರುವ ಹಸುವಿನ ಕಾಲಿರಬಹುದೇ? ಅದನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗ ಇದ್ದಕ್ಕಿದ್ದಂತೆ ಹುಲಿಯ ಗುರುಗಾಟ ಕೇಳಿಸಿತು. ಹಿಂದೆಯೇ ಭೀಕರವಾದ ಕೂಗಾಟ.... ಕ್ಷಣಾರ್ಧದಲ್ಲಿ ಇಡೀ ಕಣಿವೆ ಎರಡು ಹುಲಿಗಳ ಹಿಂಸಾತ್ಮಕ ಘರ್ಜನೆಗಳಿಂದ ಗಾರುಗಾರಾಗಿಹೋಯಿತು. ಹಸುವನ್ನು ತಿನ್ನುತ್ತಿದ್ದ ಹುಲಿಗಳ ನಡುವೆ ಪಾಲಿಗಾಗಿ ಭಿನ್ನಾಭಿಪ್ರಾಯ ಆರಂಭವಾಗಿರಬೇಕು?!

ಕೆಲವು ನಿಮಿಷಗಳವರೆಗೆ ನೆಟ್ಟಗೆ ಶಿಲಾಸದೃಶನಾಗಿ ನಿಂತೆ. ಸ್ವಲ್ಪ ಹೊತ್ತಿನಲ್ಲಿ ಕೂಗಾಟ ನಿಂತಿತು. ಇಂಥ ಸಂದರ್ಭದಲ್ಲಿ ತೀರಾ ಹತ್ತಿರ ಹೋಗುವುದು ಕ್ಷೇಮವೇನಲ್ಲ. ಇನ್ನೂ ಮೂವತ್ತು ಗಜ ನಿಶ್ಯಬ್ದವಾಗಿ ಹುಲಿಗಳತ್ತ ಹೋಗಬಹುದಾದರೂ, ಅಲ್ಲಿ ಹೊಡೆಯಲು ಸಾಧ್ಯವಾಗುವುದು ಒಂದು ಹುಲಿಯನ್ನು ಮಾತ್ರ. ಆನಂತರ ಇನ್ನೊಂದು ಹುಲಿ?! ಚಮತ್ಕಾರ ಸಂಭವಿಸದ ಹೊರತು ಇನ್ನೊಂದು ಹುಲಿಯನ್ನು ಹೊಡೆಯುವುದು ಸಾಧ್ಯವಿಲ್ಲ. ಎಲ್ಲಕಿಂತ ಮುಖ್ಯವಾಗಿ ಅಲ್ಲಿನ ಭೌಗೋಳಿಕತೆ ನನ್ನನ್ನು ನಾನು ರಕ್ಷಿಸಿಕೊಳ್ಳಲು ಪೂರಕವಾಗಿರಲಿಲ್ಲ. ಅಷ್ಟರಲ್ಲಿ ನನ್ನ ಎಡಕ್ಕೆ ಇಪ್ಪತ್ತು ಗಜಗಳ ದೂರದಲ್ಲಿ ನೆಲಮಟ್ಟದಿಂದ ಮೇಲೆದ್ದ ಬಂಡೆಯೊಂದು ಕಾಣಿಸಿತು. ಅದು ನೆಲದಿಂದ 15 -20ಗಜ ಎತ್ತರವಿತ್ತು ಹಾಗೂ ಹುಲಿಗಳಿಂದ ಇಪ್ಪತ್ತು ಅಡಿ ದೂರದಲ್ಲಿತ್ತು. ನಾನು ಆ ಬಂಡೆಯ ಮೇಲಕ್ಕೇರುವುದಾದರೆ ಆ ಹುಲಿಗಳಿಗೊಂದು ಗತಿ ಕಾಣಿಸಬಹುದಿತ್ತು. ನಾನು ನೆರಳಿನಷ್ಟೇ ನಿಶ್ಯಬ್ದವಾಗಿ ಆ ಬಂಡೆಯತ್ತ ಸರಿಯತೊಡಗಿದೆ. ಬಂದೂಕವನ್ನು ಮುಂದೆ ತಳ್ಳುತ್ತಾ.... ಚತುಷ್ಪಾದಿಯಾಗಿ ಸಾಗುತ್ತಿದ್ದೆ. ಸ್ವಲ್ಪ ಪ್ರಯಾಸವಾದರೂ ಸುರಕ್ಷಿತವಾಗಿ ಜರೀಗಿಡಗಳನ್ನು ಬಿಟ್ಟು ಬಂಡೆಯ ಬುಡಕ್ಕೆ ಬಂದೆ. ಬಂದ ರೀತಿಯಲ್ಲೇ ನಿಧಾನವಾಗಿ ಹಿಂಭಾಗಕ್ಕೆ ಸರಿದು ಬಂಡೆಯನ್ನು ಹತ್ತಿದೆ. ಬಂಡೆಯ ತುದಿಗೆ ಬಂದು ತಲೆಯೆತ್ತಿ ನೋಡಿದರೆ.... ಒಂದು ಹಸುವಿನ ಕಳೇಬರಕ್ಕೆ ಎರಡು ಹುಲಿಗಳು ಮುಕ್ಕುರಿ ಮುಗಿಬಿದ್ದಿದ್ದು ಕಾಣಿಸಿತು.


ಸ್ವಲ್ಪ ಹೊತ್ತಿನಲ್ಲಿ ಒಂದು ಹುಲಿ ಪಕ್ಕಕ್ಕೆ ಸರಿದು, ವಿಶ್ರಾಂತ ಸ್ಥಿತಿಯಲ್ಲಿ ಮಲಗಿ ತನ್ನ ಪಂಜಗಳನ್ನು ನೆಕ್ಕಿಕೊಳ್ಳತೊಡಗಿತು. ಇನ್ನೊಂದು ಹಸುವಿನ ಸೊಂಟದ ಭಾಗವನ್ನು ಹಿಸಿದು ತಿನ್ನುತ್ತಲೇ ಇತ್ತು. ನೋಡಲು ಎರಡೂ ಒಂದೇ ಗಾತ್ರಕ್ಕಿದ್ದವು. ಆದರೆ ಕಾಲು ನೆಕ್ಕಿಕೊಳ್ಳುತ್ತಿದ್ದ ಹುಲಿಯ ಮೈಬಣ್ಣ ಇನ್ನೊಂದಕ್ಕಿಂತ ತೆಳುವಾಗಿತ್ತು. ಇದರ ಅರ್ಥವೇಂದರೆ.... ವಯಸ್ಸಿನ ಕಾರಣದಿಂದ ಹುಲಿಯ ಮೈಬಣ್ಣ ತನ್ನ ಪ್ರಖರತೆಯನ್ನು ಕಳೆದುಕೊಂಡು, ಪೇಲವವಾಗಿರುತ್ತದೆ. ಈ ತೆಳು ಮೈಬಣ್ಣದ ಹುಲಿಯೇ ನರಭಕ್ಷಕಿ. ಸಾವಕಾಶವಾಗಿ ಬಂದೂಕವನ್ನೆತ್ತಿ, ಆ ಹುಲಿಯತ್ತ ಗುರಿ ಮಾಡಿದೆ. ಸ್ವಲ್ಪ ಹೊತ್ತು ಕಾದಿದ್ದು, ನಿಖರವಾಗಿ ಗುರಿಕಟ್ಟಿ ಕುದುರೆಯನ್ನೆಳೆದೆ. ಕ್ಷಣಾರ್ಧದಲ್ಲಿ ಹುಲಿ ಪಲ್ಟಾಯಿಸಿ ಕೊಂಡು ಬದ್ದಿತು. ತಕ್ಷಣ ನನ್ನ ಬಂದೂಕವನ್ನು ಇತ್ತ ತಿರುಗಿಸಿ ಕುದುರೆ ಎಳೆಯಲು ನೋಡಿದರೆ .... ಇನ್ನೊಂದು ಹುಲಿ ಮಿಂಚಿನಂತೆ ಮಾಯವಾಗಿತ್ತು. ಕಮರಿಯ ತಗ್ಗಿನ ಮರೆಯಲ್ಲಿ ಅದು ಓಡುತ್ತಿರುವುದನ್ನು ಬದ್ದೇಹೋಗುವಂತೆ ಅಲ್ಲಾಡುತ್ತಿದ್ದ ಗಿಡಗಂಟೆಗಳು ಸೂಚಿಸುತ್ತಿದ್ದವು. ಮೊದಲ ಹುಲಿ ಪಲ್ಟಾಯಿಸಿಕೊಳ್ಳುವ ಹೊತ್ತಿಗಾಗಲೇ ಅದು ಹಲವು ಗಜ ದೂರಕ್ಕೆ ನೆಗೆದು ಓಡಿತ್ತು. ಈ ಹುಲಿ ಒಂದೇ ಗುಂಡಿಗೆ ದಿವಂಗತವಾಗಿತ್ತು. ಆದರೂ ಇದ್ದಲ್ಲಿಂದಲೇ ಒಂದು ಕಲ್ಲೆಸೆದು ಪರೀಕ್ಷಿಸಿದೆ. ಅದು ಅಲ್ಲಾಡಲಿಲ್ಲ. ಸಮಾಧಾನದಿಂದ ಹತ್ತಿರ ಬಂದು ಪರೀಕ್ಷಿಸಿದೆ. ನನ್ನ ಲೆಕ್ಕಾಚಾರ ಉಲ್ಟಾ ಹೊಡೆದಿತ್ತು. ಇದು ತಾಯಿಯಲ್ಲ, ಮರಿಹುಲಿ. ನಾನು ದೊಡ್ಡ ತಪ್ಪು ಮಾಡಿಬಿಟ್ಟಿದ್ದೆ. ಇದೊಂದು ತಪ್ಪಿನ ಕಾರಣದಿಂದಾಗಿ ಮುಂದಿನ ಹನ್ನೆರಡು ತಿಂಗಳ ಹೆಣಗಾಟದೊಂದಿಗೆ ಸ್ವಂತ ನನ್ನ ಜೀವವನ್ನೇ ಅಪಾಯಕ್ಕೀಡುಮಾಡಿಕೊಂಡೆ. ಈ ನಡುವೆ ಮತ್ತೆ ಹದಿನೈದು ಮನುಷ್ಯ ಜೀವಗಳು ಇದಕ್ಕೆ ಬಲಿಯಾದವು.


ಖೇದ, ನಿರಾಶೆಗಳೊಂದಿಗೆ ಉಪಶಮನವೂ ಹುಟ್ಟಿರುತ್ತದೆ ಎಂದೆನಿಸುತ್ತದೆ. ಈ ಹುಲಿ ಮರಿಯಾದರೂ, ತಾನಾಗಿಯೇ ಮನುಷ್ಯರನ್ನು ಕೊಂದಿಲ್ಲದಿದ್ದರೂ, ಈ ಕೃತ್ಯದಲ್ಲಿ ಅಮ್ಮನಿಗೆ ಸಹಾಯ ಮಾಡಿರುವುದಂತೂ ನಿಜ. ಹಾಗೇ ಅವಳೊಂದಿಗೆ ಮನುಷ್ಯರ ಮಾಂಸವನ್ನೂ ಹಂಚಿಕೊಂಡು ತಿಂದಿದೆ; ಎಂದು ನನಗೆ ನಾನೇ ಸಮಾಧಾನ ಮಾಡಿಕೊಳ್ಳಲು ಪ್ರಯತ್ನಿಸಿದೆ. ಅದು ನಿಜವೂ ಆಗಿತ್ತು. ಇಂಥ ತಾಯಿಯ ಪೋಷಣೆಯಲ್ಲಿ ಬೆಳೆದ ಮರಿ ಮುಂದೆ ಪ್ರಬಲ ನರಭಕ್ಷಕನಾಗುವ ಸಂಭವಗಳೇ ಜಾಸ್ತಿ ಇರುತ್ತವೆ ಎಂದುಕೊಂಡೆ. ಇದು ಸರ್ವಕಾಲಿಕ ನಿಯಮವೇನಲ್ಲ ಎಂದು ತಿಳಿದಿದ್ದರೂ ಸಹ.

ಸೂಕ್ತವಾದ ಹತಾರಗಳೊಂದಿಗೆ, ತೆರೆದ ಬಯಲಿನಲ್ಲಿ ಹುಲಿಯ ಚರ್ಮ ಸುಲಿಯುವುದು ಅಷ್ಟೇನೂ ಕಷ್ಟದ ಕೆಲಸವಲ್ಲ. ಆದರೆ ಸುತ್ತಲೂ ಮುತ್ತಿಕೊಂಡಿದ್ದ ಕಾಡಿನ ನಡುವೆ ಒಬ್ಬಂಟಿಯಾಗಿ, ಪೆನ್ನಿನಗಾತ್ರದ ಚಾಕು ಹಿಡಿದು ಚರ್ಮ ಸುಲಿಯುವುದು ತೀರಾ ಹಿಂಸಾತ್ಮಕ. ಇವೆಲ್ಲದರೊಂದಿಗೆ ನರಭಕ್ಷಕಿಯ ಭಯ ಬೇರೆ. ಇವು ಅಗತ್ಯಕ್ಕಿಂತ ಹೆಚ್ಚು ಕೊಲ್ಲುವುದಿಲ್ಲ ಎಂಬ ನಂಬಿಕೆ ಇದ್ದರೂ..... ಹಿಂದಿನಿಂದ ಏನೋ ಕಾಡುವ ಭೀತಿ.... ನಿಜಕ್ಕೂ ಹಿಂದಿನಿಂದ ಹುಲಿ ಬಂದಿತ್ತು. ಮರೆಯಲ್ಲಿ ನಿಂತು ನನ್ನ ಪ್ರತಿಯೊಂದು ಚಲನವಲನವನ್ನೂ ಗಮನಿಸುತ್ತಿತ್ತು.

(ಮುಂದುವರೆಯುವುದು)

ಸೆಂಬರ್ 13, 2001ರಂದು
ಾರತೀಯ
ಾರ್ಲಿಮೆಂಟಿನ ಮೇಲೆ
ಾಳಿ ಮಾಡಿದವರ್‍ಯಾರು?
ದರಲ್ಲಿ ಅಫಜಲ್
ುರುವಿನ ಪಾತ್ರವೇನು?
ಥವಾ ಆ ದಾಳಿಯ
ಂದೆ ಸರಕಾರ
ೂಪಿಸಿರುವ STF
ಂಡದ ಹಸ್ತವಿತ್ತೇ?
ಫಜಲ್ ವಿರುದ್ಧ
್ಯಾಯಾಲಯದ ಮುಂದೆ
ಯಾಕೆ ಪೊಲೀಸರಿಗೆ ಸಮರ್ಪಕ
ಾಕ್ಷ್ಯಗಳನ್ನು ನೀಡಲಾಗಲಿಲ್ಲ?
ಫಜಲ್ಲನ ಪಾತ್ರ ಸಾಬೀತಾಗದಿದ್ದರೂ
ಮುದಾಯಿಕ ಅಂತಃಸಾಕ್ಷಿಯನ್ನು
ೃಪ್ತಿಪಡಿಸಲು ಅವರಿಗೆ ಮರಣದಂಡನೆ
ಧಿಸಿದ್ದು ಎಷ್ಟು ಸರಿ?
ಈ ಎಲ್ಲ ಪ್ರಶ್ನೆಗಳನ್ನು ಕುರಿತಂತೆ
ದಿನೈದು ಲೇಖನಗಳನ್ನು ಹೊಂದಿರುವ
ಡಿಸೆಂಬರ್ 13- ಭಾರತೀಯ
ಾರ್ಲಿಮೆಂಟಿನ ಮೇಲೆ ದಾಳಿ ಎಂಬ
ಚಿತ್ರ ಪ್ರಕರಣ' ಎಂಬ ಪುಸ್ತಕವನ್ನು
ಗ ತಾನೆ 'ಲಂಕೇಶ್ ಪ್ರಕಾಶನ'
ಕಟಿಸಿದೆ. ಆ ಪುಸ್ತಕದಲ್ಲಿನ ಒಂದು
ೇಖನವನ್ನು ಇಲ್ಲಿ ನಿಮಗಾಗಿ
ೀಡಿದ್ದೇವೆ.






ಅಫಜಲ್ ಗಲ್ಲಿಗೇರಕೂಡದು

ವಿಶೇಷ ಲೇಖನ

■ ಪ್ರಫುಲ್ ಬಿದ್ವಾಯ್



ಪರಿಸರ ಸಂರಕ್ಷಣೆಯಿಂದ ಹಿಡಿದು ಕೊಳಚೆ ನಿವಾಸಿ ಹಕ್ಕುಗಳವರೆಗೆ, ಶಿಕ್ಷಣದಿಂದ ಧರ್ಮ ನಿರಪೇಕ್ಷತೆವರೆಗೆ, ದ್ಯಮಿಗಳ ಸವಲತ್ತುಗಳಿಂದ ಭೋಪಾಲದವರೆಗೆ ಬಂಧಪಟ್ಟ ಲೆಕ್ಕವಿಲ್ಲದಷ್ಟು ಪ್ರಕರಣಗಳಲ್ಲಿ ನ್ಯಾಯಾಲಯ ು ಅತ್ಯಂತ ಮಡಿವಂತ ತೀರ್ಪುಗಳನ್ನು ನೀಡಿವೆ. ರ್ಮದಾ ಅಣೆಕಟ್ಟಿನ ಪುನರ್ವಸತಿಯನ್ನು ಕಡ್ಡಾಯ ಳಿಸಲು ಸೋತಿರುವುದರಲ್ಲಿ, ಕಾರ್ಮಿಕ ಹಕ್ಕುಗಳಿಗಿಂತ ದ್ಯೋಗದಾತರ ಲಾಭ ಮುಖ್ಯವೆಂದು ಸಾರಿರುವುದರಲ್ಲಿ, ೀಸಲಾತಿ, ಬುಡಕಟ್ಟಿನ ಜನಾಂಗದವರ ಹಕ್ಕುಗಳು ್ಯಾದಿಗಳಂತಹ ಸಾಮಾಜಿಕ ಕ್ರಮನೀತಿಗಳ ವಿಷಯದಲ್ಲಿ, ರಿಕರಣದ ವಿಷಯಗಳಿಗೆ ಸಂಬಂಧಿಸಿದಂತೆ ಗಣ್ಯತೆಯ ೆಗೆ ಒಲವು (ಎಲೀಟಿಸಮ್) ತೋರಿರುವುದರಲ್ಲಿ ್ಯಾಲಯದ ಇತ್ತೀಚಿನ ತೀರ್ಪುಗಳ ಮಡಿವಂತ ನಿಲುವು ್ಟವಾಗುತ್ತದೆ. 1995 ರಲ್ಲಿ ನೀಡಿದ "ಹಿಂದುತ್ವದ ಕಲ್ಪನೆ ಧರ್ಮನಿರಪೇಕ್ಷವಾದದ್ದು" ಎಂದು ಸಾರಿರುವ ್ಯಾಲಯದ ತೀರ್ಪಿನ ಬಗ್ಗೆ ಹೆಚ್ಚಿಗೆ ಹೇಳುವುದೇ ಡ.

ಗುಜರಾತ್ ಹತ್ಯಾಕಾಂಡದಲ್ಲಿ ನೊಂದವರಿಗೆ ಕಿಂಚಿತ್ತು ಯ ನೀಡುವುದರಲ್ಲಿಯೂ(ಜಾಹಿರಾ ಶೇಖ್ ಅವರ ರ್ವಿಚಾರಣೆಯ ಪ್ರಕರಣವನ್ನು ಹೊರತುಪಡಿಸಿ) ಕಳೆದ ಲ್ಲೂವರೆ ವರ್ಷಗಳಲ್ಲಿ ಈ ನ್ಯಾಯಾಲಯಗಳು ಾಯವಾಗಿ ಸೋತಿವೆ. ಭಾರತದ ಚರಿತ್ರೆಯಲ್ಲಿ ಅತ್ಯಂತ ಡ್ಡ ಕಾರ್ಪೊರೇಟ್ ಅನಾಚಾರಗಳಲ್ಲಿ ಒಂದಾದ ರಾನ್‌ನಂತಹ ಪ್ರಕರಣದಲ್ಲಿ ಮಧ್ಯೆ ಪ್ರವೇಶಿಸಿ ಅನಾ ವನ್ನು ನಿಲ್ಲಿಸಲಾಗದಷ್ಟು ದುರ್ಬಲ ನಮ್ಮ ನ್ಯಾಯಸಂಸ್ಥೆ ೀ ನಗರೀಕರಣಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಾಹದಿಂದ ಮಧ್ಯೆ ಪ್ರವೇಶಿಸಿ ಕೂಲಂಕಷವಾಗಿ ಿಸುವ ಅದರ ದಕ್ಷತೆಯನ್ನು ಗಮನಿಸಿ. ದೆಹಲಿಯಲ್ಲಿ ಶ್ ಪ್ರಮಾಣದಲ್ಲಿ ಧ್ವಂಸಕಾರ್ಯ ಕೈಗೊಂಡು ಸಾವಿ ು ಜೀವನೋಪಾಯಗಳನ್ನು ಹಾಳುಗೆಡವಿದ್ದು ಬರೀ ಮು ನಿದರ್ಶನ ಮಾತ್ರ. ಈ ವಿದ್ಯಮಾನಗಳೆಲ್ಲವೂ ಾಯಾಂಗದಲ್ಲಿ ಜನರಿಗಿರಬೇಕಾದ ನಂಬಿಕೆಯನ್ನು ಯನ್ನು ದುರ್ಬಲಗೊಳಿಸಿರುವುದು ನಿಜ.

ಒಂದು ನಿಟ್ಟಿನಲ್ಲಿ ನೋಡಿದರೆ ಇಂದಿನ ನ್ಯಾಯವ್ಯವಸ್ಥೆ ಅದರ ಹಿಂದಿನ ಮಡಿವಂತ ಅವತಾರಕ್ಕಿಂತ ಹೀನಾಯವಾಗಿದೆ ಎಂದು ಹೇಳಬಹುದು. ಮುಂಚೆ, ವೈಯಕ್ತಿಕ ಸ್ವಾತಂತ್ರ್ಯದ ಬಗ್ಗೆ ನ್ಯಾಯಮೂರ್ತಿಗಳು ಉದಾರ ನಿಲುವನ್ನು ತಳೆಯುತ್ತಿದ್ದರು. ಅಪರಾಧ ಮತ್ತು ಶಿಕ್ಷೆಯ ಬಗ್ಗೆ ಅತಿ ಕಠಿಣವಾದ ನಿಲುವನ್ನು ತಳೆದು ಘೋರವಾದ ಶಿಕ್ಷೆಯನ್ನು ನೀಡುತ್ತಿರಲಿಲ್ಲ. ಉದಾಹರಣೆಗೆ, ದುಷ್ಕೃತ್ಯವನ್ನು ನಡೆಸಿದವನೇ ಅದರ ಸಂಚನ್ನೂ ರೂಪಿಸಿದ್ದಿರಬೇಕು ಅಥವಾ ಅದರ ಒಂದು ಭಾಗವಾಗಿದ್ದಿರಬೇಕು ಎಂಬ ತೀರ್ಮಾನಕ್ಕೆ ಬರುತ್ತಿರಲಿಲ್ಲ.

ಆದ್ದರಿಂದಲೇ ಗಾಂಧಿ ಹತ್ಯೆಯ ಸಂಚಿನಲ್ಲಿ ಗೋಪಾಲ್ ಗೋಡ್ಸೆಯ ಪೂರ್ಣ ಕೈವಾಡವಿದ್ದರೂ ಸಹ ಆತನನ್ನು ಗಲ್ಲಿಗೇರಿಸಲಿಲ್ಲ. 1983 ರಲ್ಲಿ ಸುಪ್ರೀಂ ಕೋರ್ಟು ಮಾಚ್ಚಿ ಸಿಂಗ್ ಪ್ರಕರಣದಲ್ಲಿ ಮರಣ ಶಿಕ್ಷೆಗೆ ಸಂಬಂಧಪಟ್ಟಂತೆ ಕೆಲವು ಮಾರ್ಗದರ್ಶನ ಸೂತ್ರಗಳನ್ನು ರೂಪಿಸಿತು. ಅದರ ಪ್ರಕಾರ ಕೊಲೆಗಾರನಿಗೆ ಜೀವಾವಧಿ ಶಿಕ್ಷೆ ನೀಡಬೇಕು. ಗಲ್ಲುಶಿಕ್ಷೆಯನ್ನು ಅತ್ಯಂತ ಘೋರವಾದ, ವಿಕಾರವಾದ, ಪೈಶಾಚಿಕವಾದ ಮತ್ತು ಜಿಗುಪ್ಸೆ ಬರಿಸುವ ರೀತಿಯಲ್ಲಿ ಕೊಲೆ ಮಾಡಿರುವಂತಹ 'ಅಪರೂಪದಲ್ಲಿ ಅಪರೂಪದ' ಪ್ರಕರಣಗಳಿಗೆ ಅಥವಾ ನಿರ್ದಿಷ್ಟ ಜಾತಿ ಅಥವಾ ಸಮುದಾಯವನ್ನು ಶಿಕ್ಷೆಗೊಳಪಡಿಸಬೇಕಾದಂತಹ ಸನ್ನಿವೇಶಗಳಿಗೆ ಮಾತ್ರ ಸೀಮಿತಗೊಳಿಸಬೇಕು.

ಆದರೆ ಇತ್ತೀಚಿನ ವರ್ಷಗಳಲ್ಲಿ, ಭಯೋತ್ಪಾದನೆಗೆ ಸಂಬಂಧಪಟ್ಟಂತೆ ನ್ಯಾಯವ್ಯವಸ್ಥೆಯ ನಿಲುವು ಗಮನಾರ್ಹವಾಗಿ ಕಠಿಣ ರೂಪವನ್ನು ಪಡೆದುಕೊಂಡಿದೆ. ಇದನ್ನು ಸಾಬೀತುಪಡಿಸುವ ಸ್ಪಷ್ಟ ನಿದರ್ಶನವೆಂದರೆ 1989 ರ ಕೇಹಾರ್ ಸಿಂಗ್ ಪ್ರಕರಣ. ಆತ ಇಂದಿರಾ ಗಾಂಧಿಯವರನ್ನು ಹತ್ಯೆಗೈಯ್ಯದಿದ್ದರೂ ಸಂಚಿನಲ್ಲಿ ಭಾಗಿಯಾಗಿದ್ದ ಎಂಬ ಆರೋಪದ ಮೇಲೆ ಅವನನ್ನು ಗಲ್ಲಿಗೇರಿಸಲಾಯಿತು. ರಾಷ್ಟ್ರವೊಂದು ಸಂಸ್ಕೃತಿಯ ಉನ್ನತ ಮಟ್ಟಕ್ಕೇರಿದೆ ಎನ್ನುವುದು ಸಾಬೀತಾಗುವುದೇ ಮರಣ ಶಿಕ್ಷೆಯನ್ನು ಅದು ಬಹಿಷ್ಕರಿಸಿದೆಯೇ ಇಲ್ಲವೇ ಎನ್ನುವುದರ ಮೂಲಕ ಎಂಬ ನಿಲುವು ಜಗತ್ತಿನೆಲ್ಲೆಡೆಯಲ್ಲಿ ಪ್ರಚಲಿತವಿರುವ ಕಾಲದಲ್ಲಿಯೇ ಈ ತೀರ್ಪು ಹೊರಬಂದದ್ದು ಉದಾರಿ ಮೌಲ್ಯಗಳ ಅವನತಿಯನ್ನು ಬಿಂಬಿಸುತ್ತದೆ.

ಇಂದು ಅಫಜಲ್ಲನ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಮ್ಮನ್ನು ದಿಗ್ಭ್ರಮೆಗೊಳಿಸುವ ಇನ್ನೂ ಹೀನಾಯವಾದ ಅವನತಿಗೆ ಸಾಕ್ಷಿಯಾಗಿ ನಿಂತಿದ್ದೇವೆ. ಮರಣಶಿಕ್ಷೆಯಿಂದ ವಿನಾಯಿತಿ ನೀಡಬೇಕೆಂಬ ಅವನ ಮನವಿಯನ್ನು ದೆಹಲಿ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟುಗಳು ತಿರಸ್ಕರಿಸಿದವು. ಕುಖ್ಯಾತ 'ಕಪ್ಪು ಅಧಿಪತ'ವನ್ನು ಅವನಿಗೆ ನೀಡಿ ಅಕ್ಟೋಬರ್ 20, 2006 ರಂದು ಆತ ಗಲ್ಲಿಗೇರಬೇಕೆಂದು ಆದೇಶ ಹೊರಡಿಸಲಾಯಿತು.

ಅಫಜಲ್ಲನ ಗಲ್ಲುಶಿಕ್ಷೆ ನ್ಯಾಯಕ್ಕೆ ಮಾಡುವ ಅತ್ಯಂತ ಹೇಯ ಅಪಚಾರ ಮತ್ತು ನಾಗರಿಕ ಅಂತಸ್ಸಾಕ್ಷಿಗೆ ಮಾಡುವ ಅತ್ಯಂತ ಹೀನಾಯವಾದ ದ್ರೋಹ. ಕಾಶ್ಮೀರದ ಶಾಂತಿ ಪ್ರಕ್ರಿಯೆಗೆ ಈ ಸೂಕ್ಷ್ಮ ಹಂತದಲ್ಲಿ ಗಂಭೀರವಾದ ಹಿನ್ನಡೆಯುಂಟಾಗುವ ಸಂಭವವಿದೆ. ಕಾಶ್ಮೀರದ ಕಣಿವೆಯುದ್ದಕ್ಕೂ ನಡೆದಿರುವ ವ್ಯಾಪಕ ಪ್ರತಿಭಟನೆಗಳು ಇದರ ಮೊದಲ ಚಿಹ್ನೆ ಅಷ್ಟೇ.

ಭಾರತೀಯ ಜನತಾ ಪಕ್ಷವೊಂದನ್ನು ಹೊರತುಪಡಿಸಿ ಕಾಶ್ಮೀರದಲ್ಲಿ ಉಳಿದೆಲ್ಲ ರಾಜಕೀಯ ಪಕ್ಷಗಳು ಅಫಜಲ್ಲನ ಕ್ಷಮೆಗೆ ಮಾಡಿರುವ ಬೇಡಿಕೆ ಆತ ದಾಳಿಗೆ ನೇರವಾಗಿ ಜವಾಬ್ದಾರನಲ್ಲ ಹಾಗೂ ಸುಧಾರಣೆಯ ಸಾಧ್ಯತೆಯಿಂದ ಆಚೆ ಇರುವವನೂ ಅಲ್ಲ ಎನ್ನುವುದನ್ನು ಸಮರ್ಥಿಸುತ್ತವೆ. ಅಫಜಲ್ಲನ ಗಲ್ಲು ಶಿಕ್ಷೆ ತಪ್ಪಿಸದಿದ್ದರೆ ಭಾರತೀಯ ಪ್ರಭುತ್ವ ಅತಿದೊಡ್ಡ ಪ್ರಮಾದವೊಂದಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ.

ಈ ವಾದ ನ್ಯಾಯಶಾಸ್ತ್ರದ ಸಂಗತಿಗಳ ಆಧಾರದ ಮೇಲೆ ಮಾಡುತ್ತಿರುವ 'ರಾಜಕೀಯ' ವಾದವಲ್ಲ. ಆತ ದಾಳಿಕೋರರಲ್ಲಿ ಒಬ್ಬನಾಗಿರಲಿಲ್ಲ ಮತ್ತು ಯಾವ ಹತ್ಯೆಯನ್ನೂ ಮಾಡಿಲ್ಲ ಎನ್ನುವುದು ಎಲ್ಲರಿಗೂ ತಿಳಿದಿರುವಂತಹ ವಿಷಯವೇ. ಆದರೂ ಆತನ ಮೇಲೆ ಪ್ರಭುತ್ವದ ವಿರುದ್ಧ ಯುದ್ಧ ಸಾರಿದ್ದಕ್ಕೆ (ಇಂಡಿಯನ್ ಪೀನಲ್ ಕೋಡಿನ ಸೆಕ್ಷನ್ 121 ಮತ್ತು 121A), ಕ್ರಿಮಿನಲ್ ಸಂಚಿನಲ್ಲಿ ಭಾಗಿಯಾಗಿದ್ದಕ್ಕೆ (ಸೆಕ್ಷನ್ 120A ಮತ್ತು B) ಹತ್ಯೆಯ ಆರೋಪವನ್ನು ಹೊರೆಸಿ ಮರಣದಂಡನೆಗೆ ಗುರಿ ಪಡಿಸಲಾಗಿದೆ (ಸೆಕ್ಷನ್ 302). ಮೇಲ್ನೋಟಕ್ಕೇ ಸಾಬೀತಾಗುವಂತೆ ಇದೊಂದು ವಿಪರೀತದ ಮತ್ತು ಅಳತೆ ಮೀರಿದ ಶಿಕ್ಷೆ.

ಅಫಜಲ್ಲನ ವಿಚಾರಣೆ ನಡೆದಿರುವುದು ಪೋಟಾ ಕಾಯಿದೆಯಡಿ. ಆದರೆ ಶಿಕ್ಷೆ ನೀಡಲಾಗಿರುವುದು ಇಂಡಿಯನ್ ಪೀನಲ್ ಕೋಡಿನ ಪ್ರಕಾರ. ಹತ್ಯೆಯನ್ನು ಒಳಗೊಂಡ ಭಯೋತ್ಪಾದನಾ ಕ್ರಿಯೆಗೂ (ಅಂತಹ ಅಪರಾಧಕ್ಕೆ ಮರಣವೇ ಶಿಕ್ಷೆ), ಸಂಚಿನಲ್ಲಿ ಭಾಗಿಯಾಗಿರುವುದಕ್ಕೂ(ಇದಕ್ಕೆ ಶಿಕ್ಷೆ ದಂಡನೆ, ಜೀವಾವಧಿ) ನಡುವಿನ ವ್ಯತ್ಯಾಸವನ್ನು ಪೋಟಾ ಸ್ಪಷ್ಟಪಡಿಸುತ್ತದೆ. ಭಯೋತ್ಪಾದನೆಯ ವಿರುದ್ಧ ನಿರ್ದಿಷ್ಟ ಕಾನೂನೊಂದು ಇರುವಾಗ ಉದ್ದೇಶಪೂರ್ವಕವಾಗಿ ಹೆಕ್ಕಿ ತೆಗೆದ ಇನ್ನೊಂದು ಕಾನೂನಿನಡಿ ಶಿಕ್ಷೆ ನೀಡುವುದು ಅಸಂಬದ್ಧ.

ನ್ಯಾಯಾಲಯ ಎರಡು ರೀತಿಯ ಪುರಾವೆಗಳ ಆಧಾರವನ್ನು ಸ್ವೀಕರಿಸಿತು. ಒಂದು ಅಫಜಲ್ಲನ ಹೇಳಿಕೆ. ಇದರ ಪ್ರಕಾರ ಆತ ಶರಣಾಗತ ಉಗ್ರಗಾಮಿ, ಐವರು ದಾಳಿಕೋರರಲ್ಲಿ ಒಬ್ಬನಾದ ಮೊಹಮ್ಮದ್ ಅಲಿಯಾಸ್ ಬರ್ಗರುನನ್ನು ಕಾಶ್ಮೀರದಿಂದ ದೆಹಲಿಗೆ ಕರೆತಂದಿದ್ದ ಮತ್ತು ಆತನಿಗೆ ಸೆಕೆಂಡ್ ಹ್ಯಾಂಡ್ ಕಾರೊಂದನ್ನು ಖರೀದಿಸಲು ಸಹಾಯ ಮಾಡಿದ್ದ. ಇನ್ನೊಂದು ಅವನ ಮನೆಯಿಂದ ಸ್ಫೋಟಕಗಳನ್ನು ವಶಪಡಿಸಿಕೊಂಡ ಪೊಲೀಸ್ ವರದಿಯನ್ನು ಮತ್ತು ಐವರು ದಾಳಿಕೋರರ ಸೆಲ್‌ಫೋನ್ ಕರೆಗಳ ದಾಖಲೆಗಳನ್ನು ಆಧರಿಸಿದ ಸಾಂದರ್ಭಿಕ ಸಾಕ್ಷ್ಯ.

ಈ ಎರಡೂ ಸಾಕ್ಷ್ಯಗಳು ಸಂದೇಹಕ್ಕೆಡೆ ಮಾಡಿಕೊಡುತ್ತವೆ. ಅಫಜಲ್ ಕಸ್ಟಡಿಯಲ್ಲಿದ್ದಾಗ ಅವನ ಮನೆಯಿಂದ ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಯಿತೆಂದು ಪೊಲೀಸರು ಹೇಳುತ್ತಾರೆ. ಆದರೆ ಮನೆಮಾಲೀಕನ ಬಳಿ ಕೀಲಿಕೈ ಇದ್ದಿರುವಾಗ ಪೊಲೀಸರು ಒಡೆದು ನುಗ್ಗುವ ಅಗತ್ಯವೇನಿತ್ತು ಎನ್ನುವುದಕ್ಕೆ ಸಮರ್ಪಕ ಉತ್ತರವನ್ನು ನೀಡುವುದಿಲ್ಲ. ಪುರಾವೆಯ ವಿಶ್ವಸನೀಯತೆಗೆ ಇದು ಧಕ್ಕೆ ತರುತ್ತದೆ. ಸೆಲ್‌ಫೋನ್ ಕರೆ ದಾಖಲೆಗಳು ದೆಹಲಿಯಲ್ಲಿ ಉಪಯೋಗಿಸಿದ ಉಪಕರಣವೊಂದಕ್ಕೆ ಬೆರಳು ಮಾಡಿ ತೋರಿಸುತ್ತಿವೆ. ಈ ಫೋನ್ ಶ್ರೀನಗರದಲ್ಲಿ ಬಂಧನಕ್ಕೊಳಗಾದ ಅಫಜಲ್ಲನಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳುತ್ತಾರೆ. ಈ ಸೆಲ್‌ಫೋನಿಗೆ ಸಿಮ್ ಕಾರ್ಡ್ ಇರಲಿಲ್ಲ. ಇದನ್ನು IMEI (International Mobile Equipment Identity) ಮೂಲಕ ಪತ್ತೆ ಹಚ್ಚಲಾಯಿತು ಎಂದು ಪೊಲೀಸರು ಹೇಳಿದ್ದಾರೆ.

ಆದರೆ ಪೊಲೀಸರು IMEI ಸಂಖ್ಯೆಯನ್ನು ಪತ್ತೆ ಹಚ್ಚಿದ್ದು ಹೇಗೆ? ಇದನ್ನು ಎರಡು ರೀತಿಯಲ್ಲಿ ಮಾಡಬಹುದು. ಒಂದೋ ಉಪಕರಣವನ್ನು ಬಿಚ್ಚಿ ಅದರೊಳಗಿರುವ ಸಂಖ್ಯೆಯನ್ನು ಓದಬೇಕು ಅಥವಾ ನಿರ್ದಿಷ್ಟ ಕೋಡ್ ಸಂಖ್ಯೆಗೆ ಡಯಲ್ ಮಾಡಿದರೆ ಈ ಸಂಖ್ಯೆ ಗೋಚರಿಸುತ್ತದೆ. ಆದರೆ ಈ ಫೋನನ್ನು ವಶಪಡಿಸಿಕೊಂಡ ಪೊಲೀಸ್ ನ್ಯಾಯಾಲಯದಲ್ಲಿ ಸತ್ಯವನ್ನೇ ಹೇಳುವ ಪ್ರಮಾಣ ಮಾಡಿ ತಾನು ಉಪಕರಣವನ್ನು ಬಿಚ್ಚಿಯೇ ಇಲ್ಲವೆಂದೂ ಹಾಗೂ ಅದನ್ನು ಆಪರೇಟ್ ಮಾಡೇ ಇಲ್ಲವೆಂದೂ ಹೇಳಿದರು. (ಜಮ್ಮು ಮತ್ತು ಕಾಶ್ಮೀರದಲ್ಲಿ 2001 ರಲ್ಲಿ ಸೆಲ್ಯುಲಾರ್ ನೆಟ್‌ವರ್ಕ್ ಇರಲೇ ಇಲ್ಲ ಎಂಬುದು ಗಮನಾರ್ಹ ಅಂಶ.)

ಐವರು ದಾಳಿಕೋರರೊಂದಿಗೆ ಅಫಜಲ್ಲನ ಸಂಪರ್ಕವನ್ನು ಸಾಬೀತುಪಡಿಸುವಲ್ಲಿ ಅತ್ಯಂತ ಮಹತ್ವ ಪಾತ್ರ ವಹಿಸಿದ ಈ ಸೆಲ್‌ಫೋನ್ ಅಫಜಲ್ಲನ ಬಳಿ ನಿಜವಾಗಿ ಇತ್ತೆ ಇಲ್ಲವೆ ಎಂಬುದು ತೀರಾ ವಿವಾದಾಸ್ಪದ. ಈ ಫೋನ್ ಅವನದೇ ಮತ್ತು ಅವನಿಂದಲೇ ಉಪಯೋಗಿಸಲ್ಪಟ್ಟಿತ್ತು ಎಂದು ಸಾಬೀತುಪಡಿಸಲು ಸಾಕಷ್ಟು ಪುರಾವೆಗಳೇ ಇಲ್ಲದಿರುವಾಗ ಮಹಾ ಪಿತೂರಿಯೊಂದು ನಡೆದಿತ್ತು ಎಂದು ಸಮರ್ಥಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಇನ್ನೊಂದು ಸಂಶಯಕ್ಕೆಡೆ ಮಾಡುವ ಅಂಶವಿದೆ. ಅಫಜಲ್ ತನ್ನಿಂದ ಡಿಸೆಂಬರ್ 14 ರಂದು ಹೊಸ ಸಿಮ್‌ಕಾರ್ಡಿನೊಂದಿಗೆ ಆ ಸೆಲ್‌ಫೋನ್ ಖರೀದಿಸಿದ್ದ ಎಂದು ಪೊಲೀಸರು ಹಾಜರುಪಡಿಸಿದ ಫೋನ್ ವ್ಯಾಪಾರಿಯೊಬ್ಬ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ. ಆದರೆ ಪೊಲೀಸರ ಕರೆ ದಾಖಲೆಗಳ ಪ್ರಕಾರವೇ ಆ ಸಂಖ್ಯೆ ನವೆಂಬರ್ ಆರರಿಂದಲೇ ಸಕ್ರಿಯವಾಗಿತ್ತು.

ಇವೆಲ್ಲ ಅಂಶಗಳು ಸಾಂದರ್ಭಿಕ ಸಾಕ್ಷ್ಯಗಳ ಸತ್ಯಾಸತ್ಯತೆಯನ್ನು ಪ್ರಶ್ನಿಸುತ್ತವೆ. ಅಫಜಲ್ ಒಂದು ಆಳವಾದ ಸಂಚಿನಲ್ಲಿ ಭಾಗಿಯಾಗಿದ್ದ ಎಂದು ತೀರ್ಮಾನ ನೀಡುವ ಮೊದಲು ಅತ್ಯಂತ ಜಾಗರೂಕತೆಯಿಂದ ಎಲ್ಲವನ್ನೂ ಪರಿಶೀಲಿಸುವ ಅಗತ್ಯವಿದೆ.

ಅಫಜಲ್ಲನ ವೈಯಕ್ತಿಕ ಸಾಕ್ಷ್ಯ ಹೇಳಿಕೆ ಸಹ ಅಷ್ಟೇ ಮಹತ್ವವುಳ್ಳದ್ದು. ತಾನು ಹೇಗೆ ಪ್ರತ್ಯೇಕವಾದಿ ಉಗ್ರವಾದದ ವಲಯದೊಳಗೆ ಎಳೆಯಲ್ಪಟ್ಟೆ, ಹೇಗೆ ಆಜಾದ್ ಕಾಶ್ಮೀರದೆಡೆಗೆ ಹೋಗಲು ಗಡಿಯನ್ನು ದಾಟಿದೆ, ಮತ್ತು ಹೇಗೆ ತನಗೆ ಅದರಲ್ಲಿ ಭ್ರಮನಿರಸನವಾಯಿತು ಎಂದು ಆತ ವಿವರಿಸುತ್ತಾನೆ. ಶರಣಾಗತ ಉಗ್ರಗಾಮಿಯಾದ ತನ್ನನ್ನು STF ಯಾವ ರೀತಿಯ ಕಿರುಕುಳ ಮತ್ತು ಸುಲಿಗೆಗೆ ಗುರಿ ಮಾಡಿತು ಎಂದೂ ಆತ ಸ್ಪಷ್ಟಪಡಿಸುತ್ತಾನೆ. STFಗೆ ಸೇರಿದ ತಾರಿಖ್ ಎಂಬ ವ್ಯಕ್ತಿ ಮೊಹಮ್ಮದ್ ಎಂಬಾತನನ್ನು ದೆಹಲಿಗೆ ಕರೆದೊಯ್ಯಲು ತನಗೆ ಒಪ್ಪಿಸಿದ್ದನ್ನೂ ಆತ ಹೇಳಿಕೊಂಡಿದ್ದಾನೆ. ಈ ಅಂಶವನ್ನು ಆತ ಅಲ್ಲಗಳೆಯಲಿಲ್ಲ.

ಅಫಜಲ್ಲನ ವೈಯಕ್ತಿಕ ಸಾಕ್ಷ್ಯದಿಂದ ನಮಗೆ ಸಿಗುವ ಚಿತ್ರಣವಿದು: ಈತನಿಗೆ ಥಟ್ಟನೆ ಸುಳ್ಳು ಹೇಳುವ ಶಕ್ತಿಯಿಲ್ಲ ಹಾಗೂ ತನ್ನ ಮೇಲೆ ದೋಷವನ್ನು ಹೊರೆಸಿಕೊಳ್ಳುವ ಸಾಧ್ಯತೆಯಿದ್ದರೂ ಸಹ ಪ್ರಾಮಾಣಿಕನಾಗಿರಬಲ್ಲ, ಕನಿಷ್ಠ ಪಕ್ಷ ಇದರಿಂದ ಒಂದಂತೂ ಸಾಬೀತಾಗುತ್ತದೆ; ಈತನಿಗೆ ಬದ್ಧತೆಯ ಬಲವಿದೆ ಹಾಗೂ ಸುಧಾರಿಸಬಲ್ಲ ಶಕ್ತಿಯಿದೆ.

ಅಫಜಲ್ ಯಾವ ಹತ್ಯೆಗೈಯ್ಯದಿರುವುದರಿಂದ, ಆತನ ಮರಣದಂಡನೆ 'ಪ್ರಭುತ್ವದ ವಿರುದ್ಧ ಸಂಚು ಹೂಡಿದ್ದ' ಎಂಬ ಆಪಾದನೆಯ ಮೇಲೆ ನಿಂತಿದೆ. ಆದರೆ ಈ ತರಹದ ದ್ರೋಹದ ಆಪಾದನೆಯೇ ಈ ಕಾಲಕ್ಕೆ ಪ್ರಸ್ತುತವಲ್ಲದ್ದು. ಮಧ್ಯಕಾಲೀನ ಮೌಲ್ಯವಾದ lese mejeste ಈ ರೀತಿಯ ಆಪಾದನೆಗೆ ಆಧಾರ. ಇದರ ಪ್ರಕಾರ ಪ್ರಭುತ್ವವನ್ನು (ಅಂದರೆ ದೈವಾಂಶಸಂಭೂತ ರಾಜನನ್ನು) ಧಿಕ್ಕರಿಸಿದವನಿಗೆ ಮರಣದಂತಹ ಘೋರ ಶಿಕ್ಷೆಯೇ ತಕ್ಕದ್ದು ಎಂಬುದು ಇದರ ನಿಲುವು.

ಅಂದರೆ ಈ ನಿಲುವಿನ ಪ್ರಕಾರ ಇಲ್ಲಿ ಪಾರ್ಲಿಮೆಂಟ್ ಭವನವೆನ್ನುವುದು ಪ್ರಭುತ್ವದ ಸಾಕಾರ. ಇದು ಬರೀ ರೂಪಾತ್ಮಕವಾಗಿ ಅಥವಾ ಸಾಂಕೇತಿಕವಾಗಿ ಅಲ್ಲ. ಅದರ ಮೇಲೆ ದಾಳಿ ಮಾಡುವುದು ಇಡೀ ಭಾರತದ ವಿರುದ್ಧ ಯುದ್ಧ ಸಾರಿದಂತೆ ಎಂದು ಇದರ ಸೂಚನೆ. ಇದು ಪ್ರಭುತ್ವದ ಪರಿಕಲ್ಪನೆಯನ್ನು ಪದಶಃ ಅರ್ಥೈಸುವ ವಿಪರೀತದ ನಿಲುವು. ಹಾಗಾದರೆ, ಈ ನಿಲುವಿನ ಪ್ರಕಾರ ಎಪ್ಪತ್ತರ ದಶಕದಲ್ಲಿ ಭಾರತದ ಸಂವಿಧಾನದ ಪ್ರತಿಯನ್ನು ದಹಿಸಿದ ರ್‍ಯಾಡಿಕಲ್ ದಲಿತ್ ಪ್ಯಾಂಥರ್ಸ್ ಗುಂಪಿನವರನ್ನು ನೇಣಿಗಟ್ಟಬೇಕಿತ್ತು. ಉಚ್ಚ ನ್ಯಾಯಸಂಸ್ಥೆ ತಾನೇ ಅಂತಹ ವೈಪರೀತ್ಯಗಳ ಬಗ್ಗೆ 1951 ರಲ್ಲಿ ಬಿಹಾರ್ ಪೊಲೀಸ್ ದಂಗೆಯಲ್ಲಿ ದಂಗೆಕೋರರು ಸೈನ್ಯಕ್ಕೆ ಗುಂಡು ಹಾರಿಸಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಚ್ಚರಿಕೆ ನೀಡಿತ್ತು.

ಅಫಜಲ್ ಪ್ರಭುತ್ವದ ವಿರುದ್ಧ ಯುದ್ಧ ಹೂಡಿದ್ದ, ಕೊಲೆಗೈದಿದ್ದ ಅಥವಾ ಸಂಚಿನಲ್ಲಿ ಭಾಗಿಯಾಗಿದ್ದ ಎಂಬ ಆಪಾದನೆಗಳು ಸಂದೇಹಾಸ್ಪದ ಪುರಾವೆಗಳ ಮೇಲೆ ನಿಂತಿವೆ. ಈ ಸಂದೇಹದ ಪ್ರಮಾಣ ಎಷ್ಟಿದೆಯೆಂದರೆ ಅಂತಹ ಆಧಾರಗಳ ಮೇಲೆ ಮನುಷ್ಯನೊಬ್ಬನ ಬದುಕನ್ನು ಅಳಿಸುವುದು ಘೋರ ಅನ್ಯಾಯವೆನಿಸಿಕೊಳ್ಳುತ್ತದೆ. ಅಧ್ಯಕ್ಷ ಕಲಾಂ ಅವರು ನ್ಯಾಯಕ್ಕೆ ನಡೆಯಬಹುದಾದ ಈ ಅಪಚಾರವನ್ನು ತಡೆಗಟ್ಟಲು ಕಾರ್ಯಪ್ರವೃತ್ತರಾಗಬೇಕು. ಯಾವುದೇ ಹಿಂಜರಿಕೆಯಿಲ್ಲದೆ ಅಫಜಲ್ಲನ ಶಿಕ್ಷೆಯ ಪ್ರಮಾಣವನ್ನು ತಗ್ಗಿಸಬೇಕು. ಭಾರತದ ಅಧ್ಯಕ್ಷರಿಗೆ ಪ್ರಕರಣವನ್ನು ಮರುವಿಮರ್ಶಿಸಿ ನಿಲುವು ತೆಗೆದುಕೊಳ್ಳುವ ಎಲ್ಲ ಅಧಿಕಾರವೂ ಇದೆ. ಮಾನವೀಯ ನೆಲೆಯಿಂದ ಈ ಪ್ರಕರಣವನ್ನು ಮರು ಪರೀಕ್ಷಿಸಿ ಕಾನೂನಿನ ತಪ್ಪುಗಳಿಕೆ ಮತ್ತು ಭಯೋತ್ಪಾದನೆಯನ್ನು ಬಗ್ಗುಬಡಿಯುವ ಅತ್ಯುತ್ಸಾಹದ ಫಲವಾಗಿ ಒಂದು ಜೀವ ಗಲ್ಲಿಗೇರುವುದನ್ನು ತಡೆಯುವುದು ಅಧ್ಯಕ್ಷರ ನೈತಿಕ ಮತ್ತು ಸಾಂವಿಧಾನಿಕ [illegible]. ■

ಕಾವೇರಿ ಕಣ್ಣೀರಿಂದ ಮುಂಗಾರು ಮಳೆ ಓಡ್ತದೆ ಕಣ್ಲೋ

"ಇದ್ದಕ್ಕಿದ್ದಂತೆ ಏನೋ ನೆನೆಸಿಕೊಂಡಂತೆ ಜುಮ್ಮಿ "ಅಂಬುರೀಸು ರಾಜೇನಾಮೆ ಕೊಟ್ಟವುನಲ್ಲ, ಯಲಕ್ಷನ್ ಯಾವಾಗ ಮಾಡ್ತರ್ಲ ಉಗ್ರಿ?" ಎಂದಳು.

"ಯಲಕ್ಷನ್ ಮಾಡದಿಲ್ಲ ಕಣೆ."

"ಅದ್ಯಾಕ್ ಮಾಡದಿಲ್ಲ?"

"ಅಂಬುರೀಸು ರಾಜೇನಾಮೆಯ ಎಲ್ಲಿ ಕೊಡಬೇಕು ಅಲ್ಲಿ ಕೊಟ್ಟಿಲ್ಲವಂತೆ. ಪ್ರಧಾನಿ ಇವುನ ರಾಜೇನಾಮೆಯ ಒಪ್ಪಿಗಂಡಿಲ್ಲವಂತೆ. ಅದು ಅಲ್ದೆ ಇವುನು ರಾಜೇನಾಮೆ ಪತ್ರವ ಬರಿಬೇಕಾದಂಗೆ ಬರದಿಲವಂತೆ."

ಬಯಲು ಸೀಮೆಯ ಕಟ್ಟೆ ಪುರಾಣ

ಬಿ. ಚಂದ್ರೇಗೌಡ

"ಏನೊ ಅರ್ಜೆಂಟಿಗೆ ಕ್ಯರದು ಯಸ್ತವುನತ್ತಗೆ" ಎಂದ ಸೀರ.

"ಅಂತವುನ್ನಲ್ಲ ನೋಡಿ ಬರಿಬೇಕು ಕಂಡ್ಯ. ಕ್ಷೇಮ ಸಮಾಚಾರ, ಸಾಂಪ್ರತ, ಆಸಿರವಾದ ಇಂತವುನ್ನಲ್ಲ ಕಾಣಿಸಿ ಬರಿಬೇಕಾಯ್ತದೆ. ಇವುನು ಗೀಜಿ ಕಳಿಸಿದ್ದನೇನೊ?" ಎಂದ ಕಾಳಮಾವ.

"ಏ, ನೀನೇಳಿದಂಗೆ ರಾಜೇನಾಮೆ ಬರಿಯದಿಲ್ಲ ಕಣಮಾವ. ಕ್ಷೇಮ ಸಮಾಚಾರ ಬರಿಯಕ್ಕೆ ಅಂಬುರೀಸೇನು ಮನಮೋಹನಸಿಂಗನ ಅಳಿಯನೆ, ಅದಂಗಲ್ಲ ಕಣಮಾವ."

"ಇನ್ನೆಂಗ್ಲ?"

"ರಾಜೇನಾಮೆ ಕೊಡದು ಯರಡು ಸಾಲು. ಯಾಕೆ ಕೊಡ್ತಿನಿ ಅಂತ ಮೂರು ಸಾಲು ಬರದು ಯಾರ ಕೈಗೆ ಕೊಡಬೇಕೊ ಅವುರಿಗೇ ಕೊಡಬೇಕಂತೆ. ಅಂಗಾದ್ರೆ ಅದು ಜಾರಿಯಾಗಿ ತಿರಗ ಯಲಕ್ಷನ್ ಬತ್ತದೆ."

"ತಿರಗ ಯಲಕ್ಷನ್ನ ಬರದು ಬ್ಯಾಡ, ಅಂಬುರೀಸ ಪಜೀತಿ ಪಡದು ಬ್ಯಾಡ ಕಂಡ್ಯ. ಅವುನಂಗೆ ಇರ್ಲಿ" ಎಂದಳು ಜುಮ್ಮಿ.

"ಈಗವುನು ಸದಸ್ಯನೂ ಆಗಿಲ್ಲ, ಸಿನುಮದಲ್ಲೂ ಇಲ್ಲವಲ್ಲ, ಜೀವನ ಯಂಗೆ ಮಾಡ್ತನೆ?" ಎಂದ ಸೀರ.

"ಅಲ್ಲಾ ಕಣೊ ಸೀರಣ್ಣ, ಏನೂ ಇಲ್ದೆಯಿರೊ ನೀನೆ ಅರಾಮಾಗಿ ಜೀವನ ಮಾಡ್ತಯಿದ್ದಿ ಅಂತದ್ರಲ್ಲಿ ಆ ಅಂಬುರೀಸನ ಜೀವನ ಯಂಗೆ ಅಂತಿಯಲ್ಲಾ ಏನೇಳನ ನಿನ್ನ ತಿಕ್ಲಿಗೆ?"

"ಅಂಗಲ ಕಂಡ್ಯ, ಅವುನ ಲ್ಯವೆಲ್ಲಿನ ಜೀವನಕೆ ಭಾರಿ ದುಡ್ಡು ಬೇಕಲವೆ ಅದ್ಕೆಂಗಂದೆ?"

"ಸಿನುಮದಲ್ಲಿ ದುಡದವುನೆ ತಗೊ" ಎಂದಳು ಜುಮ್ಮಿ.

"ಅದಕಿಂತ್ಲೂ ಇಸವಿಟ್ಟಾದದ್ರಲ್ಲಿ ಎತ್ತಿದ ಕ್ಯಯಿ. ಒಂದು ಸತಿ ಕುಂತಗಂಡ ಅಂದ್ರೆ ಲಕ್ಷಾಂತ್ರಪಾಯಿ ದುಡದನಂತೆ ಕಣೆ."

"ಇಸಪಿಟ್ಟಲ್ಲಿ ಆಟೊಂತರ ಆದಾಯಿದ್ದತೆ?"

"ಊ ಮತ್ತೆ, ಕೋಟ್ಯಾಧಿಪತಿಗಳ ಜ್ವತೆ ಕುತಗಂಡಾಡ್ತನಂತೆ. ಗೆಲ್ತನೆ. ಅಂಥೋನಿಗೆ ಸಿನುಮ ಏನು ಮಾಡಕ್ಕೆ? ಅದರಲ್ಲು ಈಗವುನು ಈರೊ ಆಗಿ ಬಂದ್ರು ಜನ ತಿರಗ ನೋಡದಿಲ್ಲ."

"ಆದವುನಿಗೂ ಗೊತ್ತು ಅದ್ಕೆ ಬುಟ್ಟನೇನೊ?"

"ಪೌರಾಣಿಕದಲ್ಲಿ ಮಾಡಬವುದಿತ್ತು" ಎಂದ ಕಾಳಮಾವ.

"ಪೌರಾಣಿಕ ಸಿನುಮದ ಕಾಲನು ಹೋಯ್ತು ಕಣಮಾವ. ಆ ತರ ಸಿನುಮ ತಗಿಯೋರು, ಆಕ್ಟಿಂಗ್ ಮಾಡೋರ್ಯಲ್ಲ ಈಗೆಲ್ಲಿದ್ದಾರು?"

"ನಿಜ ಕಂಡ್ಯ ಉಗ್ರಿ, ಸಿನುಮಾದೋರ್ಯಲ್ಲ ಸತ್ತೇಹೋದ್ರು. ಅವುರ ಬದ್ಲಿಗೆ ಯಾರೂ ಬಂದಂಗೆ ಕಾಣದಿಲ್ಲ."

"ವಸ ಹುಡುಗ್ರು ಬಂದವೆ ಕಣೆ. ಮುಂಗಾರು ಮಳೆ ಯಂಗೋಡ್ತ ಅದೆ ಗೊತ್ತೆ?"

"ಆ ಸಿನುಮ ಓಡ್ತಯಿರದ್ಕೆ ಒಂದು ಕಾರಣದೆ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.



"ಏನು ಕಾರಣವ್ರೊ?"

"ಕಾವೇರಿ ಕಣ್ಣೀರಿಂದ ಮುಂಗಾರು ಮಳೆ ಹನಿತಾ ಅದೆ ಗೊತ್ತೆ?"

"ಅದ್ಯಂಗೊ?"

"ನೋಡೋ ಉಗ್ರಿ, ಕಾವೇರಿ ಗಲಾಟಿಯಾದ ಮ್ಯಾಲೆ ಬೆಂಗಳೂರಲ್ಲಿ ತಮುಳು ಸಿನುಮ ರಿಲೀಜ್ ಆಯ್ತಾಯಿಲ್ಲ, ಅಂಗಾಗಿ ತಮುಳು ಸಿನುಮ ಓಡ್ತಿದ್ದ ಟಾಕೀಸಲ್ಲ ಮುಂಗಾರು ಮಳೆ ರಿಲೀಜ್ ಆಗಿದೆ. ಅದ್ಕೆ ಓಡ್ತ ಅದ... ಕಣೊ."

"ಸರಿಯಪ್ಪ ಮುಂಡ್ಯ ಇಲ್ಲಲ್ಲಿ ಓಡ್ತ ಅದೆ... ಎಡೂರಪ್ಪನೂ ಓಗಿ ನೋಡಿದನಂತೆ. ದ್ಯಾವೇಗೌಡನ... ಹೋಗಿ ನೋಡಿ ಬಿಕ್ಕಳಿಸಿಗಂಡು ಅತ್ತನಂತೆ. ಇದಕ್ಕ... ಯಾವ ಕಾರಣ ಹೇಳ್ತೀ?"

"ದ್ಯಾವೇಗೌಡ ಯಾವುದಕಳಲ್ಲ ಹೇಳ... ಅವುನು ಅಳದೇಯಿರೊದ್ಯಾವಾಗ, ಕುಮಾ... ಸ್ವಾಮಿ ಅವಧಿ ಹತ್ರಕೆ ಬಂದಂಗೂ ಅಳ... ಶುರು ಮಾಡ್ತನೆ. ಅಂಗೆ ಅವುನು ನೋಡಿರೊ... ಸಿನಿಮುಕೂ ದ್ಯಾವೇಗೌಡ ಅತ್ತಿರಕ್ಕೂ ಏನ... ಸಮಂದ ಅಂತ ಪತ್ತೆಹಚ್ಬಬೇಕೀಗ."

"ಪತ್ತೆ ಹಚ್ಚಬೇಕು ಅಂದ್ರೆ ಸಿನುಮ... ನೋಡಬೇಕು. ಮಂಡೇವುಕೋಗಬೇಕು. ವ... ದುಡ್ಡು ಖರ್ಚೆ?" ಎಂದ ಉಗ್ರಿ.

"ಖರ್ಚನ್ಯಲ್ಲ ನಮ್ಮ ದೊಡಪ್ಪನ ಮ್ಯಾಲಾಕನ... ದ್ವಡಪ್ಪ ದ್ವಡಪ್ಪನ್."

"ಏನೇಳ್ದೆ"

"ದ್ಯಾವೇಗೌಡ ಮುಂಗಾರು ಮಳೆ ಸಿನುಮ... ನೋಡಿರದ್ರಿಂದ ನೀನೂ ನೋಡ್ಬೇಬೇಕು."

"ಅದ್ಯಾಕ್ ನೋಡಬೇಕು?"

"ಅದ್ಯಾಕ್ ನೋಡಬೇಕು ಅಂದ್ರೆ ನಾನೇನ... ಹೇಳಕ್ಕಾಗದಿಲ್ಲ, ಅಂತ ದ್ಯಾವೇಗೌಡ ಈ ವಯಿಸ... ಮುಂಗಾರು ಮಳೆ ನೋಡ್ತ ಕಣ್ಣೀರು ಸುರಿಸ್ಯವುನೆ ಅಂದ... ಅದು ನಿನಿಗೂ ಇಂಪಾರ್‌ಟೆಂಟ್ ಮ್ಯಾಟ್ರಾಗಬೇಕು ಅ... ನೋಡನ ನಡಿ."

"ರಾಜಕುಮಾರಾಗಿದ್ರೆ ನೋಡಬವುದಿತ್ತು, ಇವುನ್ನರ... ಯಾರು ನೋಡ್ತರ್ಲ, ಸತ್ಯಹರಿಚಂದ್ರ ಸತಿಸಗತಿ ದುಮಾ...

ಮಾಯಾವತಿ ಆಳ್ವಿಕೆಯೂ ಸ್ಪ್ರೈಟ್ ಜಾಹೀರಾತುವೂ

ಪಕ್ಷದ ಪ್ರಣಾಳಿಕೆ ಇಲ್ಲ!

ಇದೆಂತಹ ಪಕ್ಷ? ಚುನಾವಣೆಯಲ್ಲಿ ಒಂದು ಪ್ರಣಾಳಿಕೆ ಹೊರಡಿಸಲೂ ಸಾಧ್ಯ ಆಗಿಲ್ಲ ಅಂದರೆ ಅದೂ ಒಂದು ಪಕ್ಷವೇ?

ಪ್ರಣಾಳಿಕೆ ಬರೆಯಲು ಪ್ರತಿಭಾನ್ವಿತರ ಕೊರತೆ ಇರಲಿಲ್ಲ, ಆದರೂ ಅದನ್ನು ಹೊರತರಲಿಲ್ಲ.

ಯಾಕೆ ಹೊರತರಲಿಲ್ಲ? ಆರ್ಥಿಕ ಮುಗ್ಗಟ್ಟೆ?

ಇಲ್ಲ, ಆರ್ಥಿಕ ಮುಗ್ಗಟ್ಟು ಇರುವ ಪಕ್ಷ ಚುನಾವಣೆ ಎದುರಿಸಲು ಸಾಧ್ಯವೆ?

ಮತ್ತೆ ಏನು ಅರ್ಥ ಬಂದಿತು?

ವಾಸ್ತವಿಕತೆ! ಚುನಾವಣೆಯಲ್ಲಿ ಪಕ್ಷದ ಪ್ರಣಾಳಿಕೆ ಎಂಬುದು ಸುಳ್ಳಿನ ಕಂತೆ!

ಚುನಾವಣಾ ಸಂದರ್ಭದಲ್ಲಿ ಪಕ್ಷಗಳ ಅಭ್ಯರ್ಥಿಗೆ ಅದು ತಿಳಿದಿರುವುದಿಲ್ಲ; ಚುನಾವಣೆಯ ನಂತರ ಯಾರೂ ಅದನ್ನು ಮೂಸಿಯೂ ನೋಡುವುದಿಲ್ಲ ಎಂಬ ಅರಿವು!

ಇಷ್ಟೇ ಅಲ್ಲ, ಆ ಪಕ್ಷ ಸುದ್ದಿ ಮಾಧ್ಯಮಗಳಿಂದಲೂ ಮೈಲಿ ದೂರ!

ಉಂಟೇ... ಉಂಟೇ... ಸುದ್ದಿ ಮಾಧ್ಯಮದವರನ್ನು ಓಲೈಸಬಾರದೇ.... ಅದೂ ಚುನಾವಣೆಯ ಸಂದರ್ಭಗಳಲ್ಲಿ... ಮಾಧ್ಯಮಗಳ ಕೋಳಿ ಇಂದ ಅಲ್ಲವೇ ಚುನಾವಣೆ ಬೆಳಕು ಕಾಣುವುದು... ಅವನ್ನೇ ದೂರ ಇರಿಸಿದರೆಂದರೆ ಅಧಿಕಾರದ ಕುರ್ಚಿಯಿಂದಲೂ ದೂರ ಇದ್ದಂತೆಯೇ ಅಲ್ಲವೆ....

ಇಲ್ಲ, ಅಧಿಕಾರದ ಹತ್ತಿರ ಇದ್ದಂತೆ!

ಇದೆಂತಹ ವಿಚಿತ್ರ ವಾದ!

ವಿಚಿತ್ರ ಅಲ್ಲ, ಪಚಿತ್ರ ವಾದ ಇದು.

ಅದು ಹೇಗೆ?

ಮಾಧ್ಯಮಗಳು ಬಿಂಬಿಸುವುದು ಸತ್ಯವನ್ನಲ್ಲ, ತಮ್ಮ ತಲೆಯಲ್ಲಿ ತುಂಬಿಕೊಂಡಿರುವ ಭ್ರಮೆಯನ್ನ! ತಾವು ಕಾಣಬಯಸುವ ಸಂಗತಿಗಳನ್ನ!

ಅದನ್ನು ಹೇಗೆ ಸಮರ್ಥಿಸುತ್ತೀ?

ಉತ್ತರ ಪ್ರದೇಶದ ಚುನಾವಣೆಯಲ್ಲಿ ಸುದ್ದಿ ಮಾಧ್ಯಮದವರು ಬಯಸಿದ್ದು ತಾವು ಬಯಸಿದ ಪಕ್ಷ ಅಧಿಕಾರಕ್ಕೆ ಬರಬೇಕು ಎಂದು. ಅದು ಸಾಧ್ಯವಾಗುವ ಯಾವುದೇ ಲಕ್ಷಣಗಳು ತಲೆದೋರಲಿಲ್ಲ, ಮಾಧ್ಯಮದವರು ತಲೆತಲಾಂತರದಿಂದಲೂ ಚಾಣಾಕ್ಷ ಬುದ್ದಿಯವರಲ್ಲವೆ... ತಲೆ ಉಪಯೋಗಿಸಿದರು. ಎಸ್‌ಎಂಎಸ್ ತಂತ್ರ ಬಳಸಿದರು.

ಅದನ್ನು ಬಳಸುವುದರಲ್ಲಿ ಅಪರಾಧ ಏನು?

ಅಪರಾಧ ಇಲ್ಲ, ಆದರೆ ಎಸ್‌ಎಂಎಸ್ ಬಳಸುವವರು ಯಾರು?



ಯಾರು ಎಂದರೆ- ಜನತೆ.

ಅದೇ... ಈ ಜನ ಎಂದರೆ ಯಾರು? ಮೊಬೈಲ್ ಫೋನ್ ಇಟ್ಟುಕೊಂಡಿರುವ ಕೆಲವೇ ಕೆಲವರು. ಅದನ್ನು ಬಳಸುವ ಹಲವರಿಗೆ ಎಸ್‌ಎಂಎಸ್ ಕಳುಹಿಸುವುದೇ ಗೊತ್ತಿಲ್ಲ, ತಿಳಿದಿರುವವರೂ ಬಹುಪಾಲು ಜನ ಪ್ರಶ್ನೆಗಳಿಗೆ ಉತ್ತರಿಸುವ ಗೋಜಿಗೇ ಹೋಗುವುದಿಲ್ಲ, ಯಾಕೆ ಉತ್ತರಿಸಬಾರದು? ಅದು ಅವರ ತಪ್ಪು ಅಲ್ಲವೆ?

ನಿಧಾನಿಸಿ ಎಸ್‌ಎಂಎಸ್‌ನಲ್ಲಿ ಕೇಳುವ ಪ್ರಶ್ನೆಗಳು ಹೇಗಿರುತ್ತವೆ ಗಮನಿಸಿ. ಬಹುಪಾಲು ಪ್ರಶ್ನೆಗಳಲ್ಲಿ ಉತ್ತರವೂ ಅಡಕವಾಗಿರುತ್ತದೆ!

ನಿಮ್ಮದು ವಿತಂಡವಾದ ಆಯಿತು.

ಸ್ವಲ್ಪ ಸಮಾಧಾನ. ಒಂದು ಪ್ರಶ್ನೆ ಹೀಗಿರುತ್ತೆ ಎಂದು ಭಾವಿಸೋಣ: ' ಮೇಲ್ಜಾತಿಯವರನ್ನು ಕೀಳಾಗಿ ಕಾಣುವ ಪಕ್ಷ ಅಧಿಕಾರಕ್ಕೆ ಬರುವುದು ಯೋಗ್ಯವೇ?' ಇದಕ್ಕೆ ಉತ್ತರ ಏನು ಬರಬಹುದು? 'ಇಲ್ಲ' ಎಂದು ತಾನೆ! ಇಂತಹ ಪ್ರಶ್ನೆಗಳು. ಅದೂ ಅಲ್ಲದೆ ಪರ, ವಿರೋಧವಾಗಿ ಎಷ್ಟು ಉತ್ತರಗಳು ಬಂದಿವೆ ಎಂದು ತಿಳಿಯಲು ನಿಮ್ಮ ಹತ್ತಿರ ಯಾವ ಮಾಪಕ ಇದೆ? ಪ್ರಶ್ನೆ ಕೇಳಿದವರು ಹೇಳಿದ ಸಂಖ್ಯೆಯೇ ವೇದವಾಕ್ಯ! ಇದರ ಜೊತೆಗೆ ಚುನಾವಣಾ ಸಮೀಕ್ಷೆ, ಮತಗಟ್ಟೆ ಸಮೀಕ್ಷೆ ಎಂಬ ಹತಾರಗಳು.

ಹಾಗಾದರೆ ಇವನ್ನು ಮಾಡಲೇಬಾರದೆ? ಜನರ ಕುತೂಹಲವನ್ನು ತಣಿಸಲೇಬಾರದು ಎಂಬುದು ನಿಮ್ಮ ವಾದದ ಹಿನ್ನೆಲೆ ಇರುವಂತಿದೆ.

ನಂತರ ಇದನ್ನು ಪರಿಶೀಲಿಸೋಣಂತೆ. ಯಾವುದೇ ಪಕ್ಷದ ನಿಷ್ಠಾವಂತ ಕಾರ್ಯಕರ್ತನನ್ನು ಹೊರತುಪಡಿಸಿ ಇತರೆ ಮತದಾರರು ತಾವು ಯಾರಿಗೆ ಮತ ನೀಡಲಿದ್ದೇವೆ, ನೀಡಿದೆವು ಎಂಬುದನ್ನು ಗೌಪ್ಯವಾಗಿಯೇ ಇರಿಸಬಯಸುವವರು. ಆದರೂ ಈ ಸಮೀಕ್ಷೆಗಳು ನಡೆಯುತ್ತಲೇ ಇರುತ್ತವೆ ಯಾಕೆ? ತಮ್ಮ ಮನದಾಳದ ಬಯಕೆಗಳನ್ನು ಸಮೀಕ್ಷೆ ಎಂಬ ಹೆಸರಿನಲ್ಲಿ ವಾಂತಿ ಮಾಡಲು! ತಾವು ಬಯಸಿದ ಪಕ್ಷ, ಅಧಿಕಾರದ ಗದ್ದುಗೆ ಸಮೀಪವೂ ಬರಲಾರದು ಎನಿಸಿದಾಗ... ಇದ್ದೇ ಇದೆ... ಅತಂತ್ರ ವಿಧಾನಸಭೆ.. ಎಂದು ಘೋಷಿಸುವುದು! ಈಗ ನಿಮ್ಮ ಪ್ರಶ್ನೆಗೆ ಬರೋಣ. ವೈಜ್ಞಾನಿಕ ಸಮೀಕ್ಷೆ ಎಂಬ ಹೆಸರಿನಲ್ಲಿ ಮಾಡುವ ಎಲ್ಲ ಈ ರೀತಿಯ ಸಮೀಕ್ಷೆಗಳ... ಜನರನ್ನು ತಪ್ಪು ದಾರಿಗೆ ಎಳೆಯುವ ಸಾಧನಗಳು. ಈ... ಹುನ್ನಾರಗಳನ್ನು ಅರಿತಿರುವ ಮತದಾರ ಇವಕ್ಕೆ ಮನ್ನಣೆ ನೀಡುವುದಿಲ್ಲ. ಆದುದರಿಂದ ಇವೆಲ್ಲ ವ್ಯರ್ಥ ಅಲ್ಲವೆ?..

ಈ ಎಲ್ಲ ಮಾನಸಿಕ ತೊಳಲಾಟ ಯಾಕೆ ಆಯಿತು... ಅಂದರೆ ಮಾಯಾದೇವಿಯವರ ಬಿಎಸ್‌ಪಿ... ಉತ್ತರಪ್ರದೇಶದಲ್ಲಿ ವಿಧಾನಸಭೆಗೆ ಚುನಾವಣಾ ಪ್ರಣಾಳಿಕೆ... ಇಲ್ಲದೆ, ಮಾಧ್ಯಮದವರ ಹಂಗು ಇಲ್ಲದೆ ಬಹುಮತ... ಪಡೆದಿದ್ದಕ್ಕೆ ಆಕೆ ಜನತೆಗೆ ನೀಡಿದ ಆಶ್ವಾಸನೆ - 'ಗೂಂಡಾ... ರಾಜ್ಯದಿಂದ ಮುಕ್ತಿ.'

ಅಣಕ

ಎಚ್.ಎಲ್. ಕೇಶವಮೂರ್ತಿ

ಅಲ್ಲ, ಇದು ಕಾರ್ಯಸಾಧುವೆ ಅನ್ನೋ ಅನುಮಾನ... ಬರುತ್ತಿದೆ. ಯಾಕೆ ಅಂದರೆ... ಆಕೆಯ ಮಂತ್ರಿಮಂಡಲದ... 49 ಸದಸ್ಯರಲ್ಲಿ 22 ಮಂದಿ ಪಾತಕ ಹಿನ್ನೆಲೆ ಇರುವವರಂತೆ... ಓರ್ವ ಗೌರವಾನ್ವಿತ ವಿಧಾನಸಭಾ ಸದಸ್ಯರು, ಮಂತ್ರಿಗ... ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಹಾಜರಾ... ಮಂತ್ರಿಯಾಗಿ ಮೆರೆಯಲು ಸಾಧ್ಯವೇ ಆಗಲಿಲ್ಲವಂತೆ... ಮಾನ್ಯರು ಯಾವುದೋ ಕೊಲೆ ಕೇಸಿನಲ್ಲಿ ಸಿಕ್ಕ ಬಿದ್ದು... ಸೆರೆಮನೆಯಲ್ಲಿ ಕಂಬಿ ಎಣಿಸುತ್ತಿದ್ದಂತೆ! ಈಗ ಆಗದಿದ್ದರೇನು... ಇನ್ನು ಕೆಲವೇ ದಿವಸಗಳಲ್ಲಿಯೇ ಆಗುತ್ತಾರೆ ಬಿಡಿ. ಅದಲ್ಲ... ಸಮಸ್ಯೆ. ಗೂಂಡಾ ಮುಕ್ತ ರಾಜ್ಯ ಮಾಡುತ್ತೇನೆ ಎಂದು... ಬಡಾಯಿ ಕೊಚ್ಚಿದ ಮಾಯಾವತಿ ಮಂತ್ರಿ... ಮಂಡಲದಲ್ಲಿಯೇ ಈ ಪಾಟಿ ಕ್ರಿಮಿನಲ್‌ಗಳಿದ್ದಾರೆಂದರೆ... ಯಾಕೆ ಇಷ್ಟೊಂದು ಜನ ಕ್ರಿಮಿನಲ್‌ಗಳಿಗೆ ಮಾಯಾವತಿ... ಮಣೆ ಹಾಕಿದರು....

ಅವರ ಪಕ್ಷದ ವತಿಯಿಂದ ಆಯ್ಕೆಯಾದ ಬಹುಪಾಲು... ಸದಸ್ಯರು ಇದೇ ಹಿನ್ನೆಲೆಯುಳ್ಳವರಿದ್ದು ಮಂತ್ರಿ ಪದವಿ ನೀಡಲು... ಪಾತಕಿ ಹಿನ್ನೆಲೆಯಿಲ್ಲದವರ ಕೊರತೆ ಇತ್ತಾ... ... ಜಾತೀವಾರು ಮಂತ್ರಿ ಪದವಿ ಹಂಚುವ ರೀತಿಯಲ್ಲಿ... 'ಪಾತಕಿ'ಗಳದ್ದೂ ಒಂದು ಜಾತಿ ಎಂದು ನಿರ್ಧರಿಸಿ... ಮಂತ್ರಿಗಿರಿ ನೀಡಿದರಾ...ಇಲ್ಲ ... ಗುಟ್ಟು ... ಗೊತ್ತು ಎಂದು ನಿರ್ಧರಿಸಿ ಗೂಂಡಾಗಳ ನಿಗ್ರಹಕ್ಕೆ ಇವರೇ... ಸರಿ ಎಂದು ತಿಳಿದು ಹೀಗೆ ಮಾಡಿದರಾ...

ಕರೀರವ ಇಂತ ಸಿನುಮ ಬಂದ್ರೆ ಹೇಳು ಹೋಗಿ ನೋಡೆಬುಡನ" ಎಂದ ಕಾಳಮಾವ.

"ಓಹೋ ನಮ್ಮ ದ್ವಡಪ್ಪ ಕಳದ ಶತಮಾನದಿಂದ ಈಚೆಗೆ ಬಂದೇಯಿಲ್ಲ ಕಣೊ ಉಗ್ರಿ. ನೀನು ಯರಡು ಸಾವುರಕೆ ದೆಶ್ಯಾಗಬೇಕಾಗಿತ್ತು ದ್ವಡಪ್ಪ."

"ಅದ್ಯಾಕ್ಲ ಅಂಗಂತಿ? ಬುಡುತು ಅನ್ನು" ಎಂದಳು ಜುಮ್ಮಿ.

"ಅಲ್ಲಾ ಕಣಕ್ಕ ಅಣ್ಣಾವರ ಸಿನುಮ ಅವುರ ಕಾಲದ ಮಾತಲ್ಲೇ ಇರದಾದ್ರೆ ನಮಿಗೆ ನಮ್ಮ ದ್ವಡಪ್ಪಾಗೆ ಕಾಂಬನೇಷನ್ ಸರಿ ಹೋಗದಿಲ್ಲ."

"ಅಂಥಾ ರಾಜಕಾರಣ ಮಾಡಿದ ದ್ಯಾವೇಗೌಡ ಕುಮಾರಸ್ವಾಮಿನೂ ಮೆಚ್ಚಿಗತ್ತ ತಲೆದೂಗ್ತಯಿಲವೇನೊ ಅಂಗೆ ಕಾಳಮಾವನೂ ನಮ್ಮ ಜ್ವತೆ ಯೇಗ್ತ ಅವುನೆ. ಅವುನ್ಯಾವತ್ತು ಆ ಕಾಲಕೇ ಅಂಟಗಂಡಿದ್ದನೂ?" ಎಂದ ಉಗ್ರಿ.

"ಕಾಳಮಾವನ ಕಾಲ ಆಗಿರಬವುದು ಕಂಢ್ಯ, ಅವುನಿರದ್ಕೆ ಅಲವೆ ನಾನಿಲ್ಲಿ ಬರದು. ಅವುನಿಲ್ದೆಯಿದ್ರೆ ನಾನೆಲ್ಲಿ ಬಂದೆನೂ ಅದೂ ಈ ಹೊಟ್ಟುತಕ್ಕೇ" ಎಂದಳು ಜುಮ್ಮಿ.

"ಅಂಗೆ ನೋಡಿದ್ರೆ ನಮ್ಮ ದ್ವಡಪ್ಪ ಇರೋವತ್ತಿಗೆ ಕಣಕ್ಕ ನಾನಿನ್ನೂ ಇರದು. ಇಲ್ದೆಯಿದ್ರೆ ಯಾವತ್ತೊ ಗ್ಯಾತಯಸಿತಿದ್ದೆ" ಎಂದ ವಾಟಿಸ್ಸೆ.

"ನಮ್ಮದೊಂತರ ದ್ಯಾವೇಗೌಡಿರೋವರಿಗೂ ಜಂತಾದಳ ಅನ್ನಂಗಾಯ್ತಪ್ಪ" ಎಂದು ಉಗ್ರಿ ನಕ್ಕ.

"ದ್ಯಾಪನೆಟ್ಟಿ ದ್ಯಾವೇಗೌಡ ಉಳ್ಳಿ ಕಂಡ ಅಂದ್ರೆ ದಳದ ಕತೆನೂ ಮುಗದಂಗೆಯ. ಅಮ್ಯಾಲೆ ಅಲ್ಲೇನದೆ ಅಂತ ಇರತರೆ, ಯಾಕಿರತರೆ?"

"ಕುಮಾರಸ್ವಾಮಿತ ಇರೊ ದುಡ್ನು ನೋಡಿದ್ರೆ ಒಂದಿಷ್ಟು ಜನ ಎಂಜಲಿನವು ಇರತವೆ ಕಣೊ. ಇದು ಕ್ಯಟ್ಟ ಮನುಸುರ ಕಾಲ, ಅಂಗೇಳಬ್ಯಾಡ ನೀನು."

"ಕ್ಯಟ್ಟ ಮನುಸ್ರು ಯಾವ ಕಾಲ್ದಲ್ಲಿರಲಿಲ್ಲ ಹೇಳು. ಅಂಗೆ ನೋಡಿದ್ರೆ ವಳ್ಳೆ ಜನಗಳ ಕಾಲ ಭಾಳದಿನ ಇರಲೇಯಿಲ್ಲ, ಆ ಮಾಭಾರತದ ಕೌರವನ ಕಾಲದಿಂದ ಏರೀ ಕ್ಯಟ್ಟ ಮನುಸ್ರ ನೋಡಿದ್ದೆ ಆಯ್ತು" ಎಂದ ಸೀರ.

"ಓಹೋ ಸೀರ ಚಿಗಪ್ಪ ಮಾಭಾರತದ ಕಾಲದಿಂದ ಅವುನೆ, ಅಂದಂಗಾಯ್ತು."

"ಏ ಇತ್ತೀಚೆಗಂಟ ಅಂಗೇ ಅನ್ನುಸ್ತಿತ್ತು ಕಂಢ್ಯ. ಸುತ್ತ ಮುತ್ಲಳ್ಳಿ ನಾಟಕ ನೋಡಿಕಂಡು ಮಾಭಾರತ ಅಂದ್ರೆ ಹತ್ತೊರಸದ ಹಿಂದೆ ನ್ಯಡದದೆ ಅನ್ನಂಗೇ ಆಯ್ತಿತ್ತು, ಅದೇನಾಯ್ತೋ ಏನೊ ಇದ್ದಕ್ಕಿದ್ದಂಗೆ ಯಲ್ಲಾ ಹೊಗೆಬುಡ್ತಲ್ಲ ಅನ್ನಂಗಾಯ್ತ ಅದೆ. ಇದ್ಯಾರಿಗೇಳನ" ಎಂದ ಸೀರ.

"ಯಾರಿಗೂ ಹೇಳಬ್ಯಾಡ ಚಿಗಪ್ಪ ನಾವೇ ಒಂದು ಸತಿ ಡಿಸ್‌ಕಸ್ ಮಾಡನ."

ಅಪರೂಪಕ್ಕಾದರೂ ಟಿವಿ ನೋಡುವ ಅಭ್ಯಾಸ ಇದ್ದರೂ ಸರಿ. ಈ ಜಾಹೀರಾತು ನೋಡಿರುತ್ತೀರಿ. ಒಬ್ಬ ಯುವಕ ಆಯಾಸದಿಂದ ಬಳಲುತ್ತಿದ್ದಾನೆ. ಆತನಿಗೆ ಅತಿಯಾದ ಬಾಯಾರಿಕೆ. ಏನು ಕುಡಿದರೂ ಬಾಯಾರಿಕೆ ಹಿಂಗದು. ಆಗ ಅವನಿಗೆ ಎದುರಾಗುತ್ತದೆ... ಆ ತಂಪು ಪಾನೀಯ! ಅದನ್ನು ಕುಡಿದ ನಂತರ ಆತ ಉದ್ಗರಿಸುತ್ತಾನೆ...'ಗುರುವರ್ಯ ನನಗೆ ಸ್ಪ್ರೈಟ್‌ನಿಂದ ಬಾಯಾರಿಕೆ ಹೋಗುತ್ತದೆ!'

ಈ ಜಾಹೀರಾತಿನ ಯುವಕನ ತರಹವೇ ಉತ್ತರ ಪ್ರದೇಶದ ಮತದಾರ ಮಾಯಾವತಿಯಿಂದ 'ಗೂಂಡಾರಾಜ್ಯ ನಿರ್ಮೂಲನ' ಆಗುತ್ತದೆ ಎಂಬ ಆಶಾಭಾವನೆ ಇಟ್ಟುಕೊಂಡಿದ್ದಾನೆ. ಆದರೆ ಒಂದು ವಿಷಯ. ಯಾವುದೇ ತಂಪು ಪಾನೀಯ ಕುಡಿದರೂ ಅದು ಬಾಯಾರಿಕೆಯನ್ನು ತಾತ್ಕಾಲಿಕವಾಗಿ ಶಮನ ಮಾಡಬಹುದಾದರೂ ಆನಂತರ ಬಾಯಾರಿಕೆಯನ್ನು ಉಲ್ಬಣಗೊಳಿಸುತ್ತೆ. ಈ ಎಚ್ಚರಿಕೆ ಜನರಿಗೆ ಇದ್ದರೆ ಸರಿ!

ಅಷ್ಟಲ್ಲ ಬಿಡು!

ಅನೈತಿಕ ಸಂಬಂಧ!

ಗಂಡು ಅದು ತನ್ನ ಸಾಧನೆ ಅಂತ ಊರಿಗೆಲ್ಲ ಸಾರ್‍ತಾನೆ.

ಆದರೆ ಹೆಣ್ಣು?

ಏನೋ ಅಪರಾಧ ಮನೋಭಾವ... ಒಳಗೇ ಕೊರಗ್ತಾಳೆ.

ಅವರ ವಿಷಯದಲ್ಲೂ ಅದೇ ಆಯಿತು. ಏನೋ ಸಹೋದ್ಯೋಗಿ ಅಂತ ಸಲಿಗೆ ಕೊಟ್ಟಳು. ಅದನ್ನೇ ದುರುಪಯೋಗಪಡಿಸಿಕೊಂಡ ಅವನು. ಅಂಗೈನಲ್ಲಿ ಆಕಾಶ ತೋರಿದ. ಮಾತಿನಲ್ಲಿ ಜೇನು ಸುರಿಸಿದ. ಯಾವುದೋ ದೌರ್ಬಲ್ಯದ ಕ್ಷಣ. ಅವನಿಗೆ ದೇಹ ಒಪ್ಪಿಸಿದಳು.

ಮಾರನೆಯ ದಿನ ತನ್ನ ಗೆಳೆಯನ ಹತ್ತಿರ ತನ್ನ ಸಾಹಸ ಕೊಚ್ಚಿಕೊಂಡ. 'ಅವಳೂ ಅಂದರೆ ಏನು ಅಂತ ತಿಳಿದುಕೊಂಡಿದ್ದೀಯಾ... ಏನು ಮಜಾ ಕೊಡ್ತಾಳೆ ಅಂತೀಯಾ' ಅಂತೆಲ್ಲಾ ಒಂದಕ್ಕೆ ನೂರು ಮಾಡಿ ಹೇಳಿದ.

ಗೆಳೆಯನಿಗೂ ಬಾಯಲ್ಲಿ ನೀರು ಸುರೀತು.

'ನಾನೂ ಪ್ರಯತ್ನಿಸಲಾ' ಅಂದ.

'ಮಾರಾಯನಂಗೆ ಮಾಡೋ ಮಾರಾಯ. ನಾನೇನು ಅವಳಿಗೆ ತಾಳಿಕಟ್ಟಿದೀನಾ' ಅಂದ ಅವ.

ಅವ ಹಂಗೆ ಮಾಡಿದೆ, ಹಿಂಗೆ ಮಾಡಿದೆ ಅಂತ ಇಲ್ಲದ್ದು ಇದ್ದದ್ದು ಎಲ್ಲ ಸೇರಿಸಿ ಕಿವಿಗೆ ಸೊಚ್ಚಗಾಗುವಂತೆ, ಮನಸ್ಸಿಗೆ ಬಿಸಿ ಆಗುವಂತೆ ಹೇಳಿದ್ನಲ್ಲ ಅದನ್ನೆಲ್ಲ ಒಂದೊಂದಾಗಿ ಅವಳ ಮುಂದೆ ಬಿಚ್ಚಿದ. ಅವಳಿಗೋ ಇದನ್ನೆಲ್ಲ ಗೆಳೆಯ ಒದರಿದ್ದಾನಲ್ಲ, ಇನ್ನೂ ಇವನು ಒಪ್ಪದಿದ್ದರೆ ಬಿಟ್ಟಾನ ಊರಿಗೆಲ್ಲಾ ಸಾರಿಕೊಂಡು ಬರ್‍ತಾನೆ ಅಂತ ಒಳೊಳಗೆ ಹೆದರಿದಳು. ಒಂದು ಸಲ ಇವನ ಜೊತೆಗೂ ಇದ್ದು ಬಿಟ್ಟರೆ ಇವನ ಬಾಯಿ ಕಟ್ಟೋಗ್ತದೆ ಅಂತ ಭಾವಿಸಿದಳು. ಹಾಗೇ ಮಾಡಿದಳು.

ಮಾರನೆಯ ದಿನ ಅವ ಸಿಕ್ಕಿದ. 'ನೀನು ಹೇಳಿದ್ದು ನಿಜ ಕಣೊ. ಸಕತ್ ಮಜಾ ಕೊಡ್ತಾಳೆ. ಆದರೂ ನಿನ್ನ ಹೆಂಡತಿಗೆ ಹೋಲಿಸಿದರೆ.... ಛೇ ಇವಳು ಏನೂ ಇಲ್ಲ ಕಣೋ' ಅಂದ ಗೆಳೆಯ.

ಮ್ಯಾಖಿಯವೆಲ್ಲಿ




"ನನ್ನ ಪ್ರೀತಿಯ ರಾಜಕುಮಾರ ನೀನು ರಾಷ್ಟ್ರವನ್ನು ಹೇಗೆ ಆಳಬೇಕೆಂಬ ಬಗ್ಗೆ ನನ್ನ ಅಲ್ಪಮತಿಗೆ ಹೊಳೆದದ್ದು ನಿವೇದಿಸಿಕೊಳ್ಳುತ್ತಿದ್ದೇನೆ. ಜನಜಂಗುಳಿ ನಿಜಕ್ಕೂ ಜಂಗುಳಿ. ಅದಕ್ಕೆ ತಾಳ್ಮೆಯಿಂದ ಯೋಚಿಸುವ ಶಕ್ತಿ ಇರುವುದಿಲ್ಲ, ಯೋಚಿಸಬಲ್ಲವರನ್ನು ಬೇರ್ಪಡಿಸಿ ಜಂಗುಳಿಯನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳಬೇಕು. ಶತ್ರುವನ್ನು ತಡವಿ ಸುಮ್ಮನಾಗಬೇಡ. ಗಾಯಗೊಳಿಸಿ ಚೇತರಿಸಿಕೊಳ್ಳಲು ಬಿಡಬೇಡ. ಪೂರ್ತಿ ಮುಗಿಸಿಬಿಡು. ಶಕ್ತಿಯಿಂದ ಮಾತ್ರ ಆಳುವುದು ಸಾಧ್ಯವಿಲ್ಲ, ಅದಕ್ಕೆ ತಂತ್ರ ಬೇಕೇ ಬೇಕು".

ಆತ ಮ್ಯಾಖಿಯವೆಲ್ಲಿ, ಈ ನಿಕೋಲೋ ಮ್ಯಾಖಿಯವೆಲ್ಲಿ ಎಂಬ ಪಾಶ್ಚಿಮಾತ್ಯ ಕೌಟಿಲ್ಯ 1469ರಲ್ಲಿ ಇಟಲಿ ದೇಶದ ಫ್ಲಾರೆನ್ಸ್ ನಗರದಲ್ಲಿ ಜನಿಸಿದ. ಆಗಿನ ಇಟಲಿಯ ದೊರೆಯ ಸಲಹೆಗಾರ ಮತ್ತು ರಾಯಭಾರಿ ಆಗಿದ್ದ. ತನ್ನ ರಾಜನೀತಿಯ ಪ್ರತಿಭೆಯಿಂದಲೇ ತೊಂದರೆಗೊಳಗಾದ. ಇಟಲಿ ದಾಳಿಗೊಳಗಾಗಿ ಮ್ಯಾಖಿಯವೆಲ್ಲಿ ಬೀದಿಪಾಲಾದ. ಜೈಲಿಗೆ ನೂಕಲ್ಪಟ್ಟ. ದೊರೆಗಳಿಗೆ ನೀಡಿದ ಹಿತವಚನಗಳು ನೀರಿನ ಮೇಲೆ ಬರೆದ ಬರಹಗಳಾದವು.

ಧರ್ಮಯುದ್ಧ ಎಂಬುದಿಲ್ಲ, ಗೆಲ್ಲಬಲ್ಲ ಯುದ್ಧವೇ ಧರ್ಮದಿಂದ ಕೂಡಿದ್ದು ಎಂದು ಹೇಳಬಲ್ಲವನಾಗಿದ್ದ ಮ್ಯಾಖಿಯವೆಲ್ಲಿ ಮೊಟ್ಟಮೊದಲ ಬಾರಿಗೆ ರಾಜಕೀಯವನ್ನು ಹುಂಬತನದಿಂದ, ಬೋಳೆತನದಿಂದ ಬೇರ್ಪಡಿಸಿ ಗೆರಿಲ್ಲಾ ಯುದ್ಧ, ರಾಜಕೀಯ ಚಾಣಾಕ್ಷತೆ, ಆಡಳಿತದ ವೈಜ್ಞಾನಿಕತೆಯನ್ನು ವಿವರಿಸಿದ. ಹಾಗೆಯೇ ರಾಜಕೀಯವೆಂದರೆ ಅನೇಕರು ಸಿನಿಕತನದಿಂದ ಹುಬ್ಬೇರಿಸುವಂತೆ ಮಾಡಿದ.

ರೂಪಿಸುವವರು



ಮ್ಯಾಖಿಯವೆಲ್ಲಿ ಈಗಿನ ರಾಜಕೀಯದಲ್ಲಿ ಪ್ರತ್ಯಕ್ಷನಾಗುವ ರೀತಿ ಅದ್ಭುತ. 'ನಾನು ನಿನ್ನ ನಿಷ್ಠ ಅನುಯಾಯಿ' ಎಂದು ಹೇಳುತ್ತಲೇ ರಾಜಕಾರಣಿ ಒಳಗೊಳಗೆ ಬತ್ತಿ ಇಟ್ಟಿರುತ್ತಾನೆ. ಇದು ಸರಳ ತಂತ್ರ. 'ನಾನು ನಿಷ್ಠ ಅನುಯಾಯಿ' ಎಂದು ಹೇಳಲು ನಿಮ್ಮ ಶತ್ರುವೇ ಈತನನ್ನು ಕಳಿಸಿರುವುದು. ಈತನ ನಿಷ್ಠೆಯೇ ನಿಮ್ಮನ್ನು ಜನರಿಂದ ದೂರಮಾಡುವುದು ಎರಡನೆಯ ತಂತ್ರ. ಸ್ವಲ್ಪ ಆಳದ್ದು. "ನೀವು ಜನರಿಗೆ ದ್ರೋಹ ಬಗೆದಿದ್ದೀರಿ" ಎಂಬರ್ಥ ಬರುವಂತೆ ಗಾಂಧೀಜಿ ರಾಜಮಹಾರಾಜರಿಗೆ ಹೇಳಿದರು. ಗಾಂಧೀಜಿಗೆ ನೆರವಾಗಲು ಬಂದಿದ್ದ ರಾಜರು ಸಿಟ್ಟಿನಿಂದ ಸಭಾತ್ಯಾಗ ಮಾಡಿದರು. ಇದರಿಂದ ಏನಾಯಿತು ಗೊತ್ತೆ? ಜನರು ಗಾಂಧೀಜಿಯ ಹತ್ತಿರ ಬಂದರು. ಗಾಂಧೀಜಿ ಮೂರನೆ ದರ್ಜೆ ರೈಲಿನಲ್ಲಿ ಪ್ರಯಾಣಿಸಲು ನಿರ್ಧರಿಸಿದರು. ಇದು ಗಾಂಧೀಜಿಯ ನೈತಿಕ ನಿರ್ಧಾರ. ರಾಜಕೀಯವಾಗಿ ಇದು ಅಸಾಧ್ಯವಾಗಿತ್ತು, ಜನರೆಲ್ಲರೂ ಅವರ ಕಾಲುಮುಟ್ಟಿ, ಮೈ ಮುಟ್ಟಿ ಗಾಂಧೀಜಿಯನ್ನು ಸಾಯಿಸುತ್ತಿದ್ದರು. ಆದ್ದರಿಂದ ಕಾಂಗ್ರೆಸ್ ಕಾರ್ಯಕರ್ತರಿಗೆ ಜನಸಾಮಾನ್ಯರ ವೇಷ ಹಾಕಿ ಗಾಂಧೀಜಿಯೊಂದಿಗೆ ಮೂರನೆ ದರ್ಜೆ ಬೋಗಿಯಲ್ಲಿ ಕಳಿಸಲಾಯಿತು. ಅದು ಆಪದ್ಧರ್ಮ. ಒಂದು ರೀತಿಯ ತಂತ್ರ. ಇದೆಲ್ಲ ಗಾಂಧೀಜಿಗೆ ಗೊತ್ತಿತ್ತೆ? ಉತ್ತರ ನಿಮಗೇ ಗೊತ್ತು.

ಮೊನ್ನೆ ಅಮೆರಿಕನ್ ಚುನಾವಣೆ. ಬುಶ್ ಚುನಾವಣೆಗೆ ನಿಂತ. ಈತನ ರಿಪೇರಿಯಾಗದೆ ಅಧ್ಯಕ್ಷನಾಗಿ ಚುನಾಯಿತನಾಗುವುದು ಸಾಧ್ಯವಿರಲಿಲ್ಲ. ಏಯ್ಸ್ಲ್ ಎಂಬ ರಿಪೇರಿಯವ ಬಂದ. ಬುಶ್ ಹೇಗೆ ನಿಲ್ಲಬೇಕು, ಹೇಗೆ ಕೈ ಆಡಿಸಬೇಕು, ಹೇಗೆ ನಿಧಾನವಾಗಿ ಗಂಟಲಿಂದ ಮಾತಾಡಬೇಕು ಎಂದು ಹೇಳಿಕೊಟ್ಟ, ಮೂತಿಗೆ ತಕ್ಕ ಮೇಕಪ್ ಬಳಿಯಲಾಯಿತು. ಅಳುಬುರುಕ ಬುಶ್‌ಗೆ ಧೀರೋದಾತ್ತನಂತೆ ಮಾತಾಡುವುದನ್ನು ಕಲಿಸಲಾಯಿತು. 'ನಾನು ಅಮೆರಿಕನ್ ಧ್ವಜ ರಕ್ಷಿಸುತ್ತೇನೆ' ಎಂದು ಬುಶ್ ಗರ್ಜಿಸಿದ. [illegible] ಮುಗಲೆ ಧ್ವಜ ನಿಲ್ಲಿಸಲಾಯಿತು. ರಿಪೇರಿಕಾರ್ಯ ಯಶಸ್ವಿಯಾಯಿತು. ಬುಶ್ ಚುನಾಯಿತನಾದ.

ಮರೆಯುವ ಮುನ್ನ



ಪಿ. ಲಂಕೇಶ್ -ಡಿಸೆಂಬರ್ 11, 1988

ಸರಿಯಾಗಿ ರಿಪೇರಿಯಾಗದ ಡುಕಾಕಿಸ್ ಸೋತ.

ಈಗ 'ನಾನು ಯಾರಿಂದಲೂ ರಿಪೇರಿ ಮಾಡಿಸಿಕೊಂಡಿಲ್ಲ, ನನಗೆ ಸ್ವಂತ ವ್ಯಕ್ತಿತ್ವವಿದೆ!' ಎಂದು ಬುಶ್ ಚುನಾಯಿತನಾದ ಮೇಲೆ ಅಬ್ಬರಿಸಿದ. ರಿಪೇರಿಗೊಂಡ ಬುಶ್ ರಿಪೇರಿ ಮಾಡಿದ ಗ್ಯಾರೇಜ್ ವಿಳಾಸವನ್ನೇ ಮರೆತಿದ್ದ ಮ್ಯಾಖಿಯವೆಲ್ಲಿ ಹೇಗೆ ಕೆಲಸ ಮಾಡುತ್ತಾನೆ!

ಸದಾ ಬಸಿರು




ಈತ ಬೀಟೆ ಮರದಿಂದ ಎತ್ತರದ, ದಪ್ಪ ಗಟ್ಟಿಯಾದ ಕೋಟ್ಯಾಧೀಶ್ವರ. ಪತ್ರಿಕೆಗಳು, ಇನ್ನಿತರ ವ್ಯವಹಾರಗಳು. ಜನರನ್ನು ಹಗಲಿರುಳು ದುಡಿಸಿ ಬೆವರಿಳಿಸಿ, ಅಷ್ಟೇ ಚೆನ್ನಾಗಿ ಹಣ ನೀಡಿ ಎಲ್ಲ ನೋಡಿಕೊಳ್ಳುವ ಚತುರ. ಆತನ ಹೆಸರು ರಾಬರ್ಟ್ ಮ್ಯಾಕ್ಸ್‌ವೆಲ್.

ಹತ್ತು ಫೋನ್‌ಗಳಲ್ಲಿ ಮಾತಾಡುತ್ತಿದ್ದ, ಇವನ ಜಾತಿಯ ಯಹೂದ್ಯರು ಕೆಲವರು ಯಾವುದೋ ಕೆಲಸಕ್ಕೆ ಕಾಣಿಕೆ ಕೇಳಲು ಬಂದರು. ಕಾಯಿಸಿದ. ಹತ್ತು ಫೋನ್‌ಗಳಲ್ಲಿ ಮಾತಾಡುತ್ತಲೇ ಇದ್ದ. ಕೊನೆಗೆ ಹೇಳಿದ, "ನೀವು ಏನು ಕೇಳಿದರೂ 'ಆಗಲಿ' ಅಂತೇನೆ. ಇಲ್ಲ ಅನ್ನೋಕೆ ನನಗೆ ವೇಳೆಯೇ ಇಲ್ಲ, ನಾನು ಆಗಲಿ ಅನ್ನೋದನ್ನ ನೋಡಿಕೊಂಡರೆ ನಾನು ಹೆಣ್ಣಾಗಿದಿದ್ದರೆ ಸದಾ ಬಸಿರಾಗಿಯೇ ಇರುತ್ತಿದ್ದೆ!" ಎಂದು ಮತ್ತೆ ಫೋನ್ ತೆಗೆದುಕೊಂಡ.

ಮತ್ತೆ ಅಮೆರಿಕಾದ ಮಾರ್ಕ್ಸ್ ಸಹೋದರರ ಬಗ್ಗೆ ಕೇಳಿದ್ದೀರಾ? ಅವರು ಸಿನಿಮಾ ನಟರಾಗಿದ್ದರು. ಚಿಕೋ, ಹಾರ್ಪೋ, ಗ್ರೌಚೋ, ಜೆಪ್ಪೋ ಎಂಬ ನಾಲ್ವರು. ಅವರಲ್ಲಿ ತುಂಬ ತಮಾಷೆಯವ ಗ್ರೌಚೋ, ಆತ ಒಮ್ಮೆ ತನ್ನನ್ನು ಸಂಧಿಸಿದ ಸಾರ್ವಜನಿಕ ವ್ಯಕ್ತಿಗೆ ಹೇಳಿದ, "ಹೇಳಬೇಡಿ. ನೀವು ಏನನ್ನು ಹೇಳಿದರೂ ಅದಕ್ಕೇ ನಾನು ವಿರುದ್ಧ!"

ಅನುಕಂಪೆಯ ಮಿತಿ

ಒಂದೂವರೆ ವರ್ಷದ ಹಿಂದೆ. ಆಗ ಮುಂಗಾರು. ಬೀದರ್‌ಗೆ ವಿಪರೀತ ಮಳೆಬಂತು. ನಿರನಾ ಎಂಬ ಹಳ್ಳಿಯಲ್ಲಿ ಬಡ ಮುಸ್ಲಿಮನೊಬ್ಬ, ಆತನ ಹೆಸರು ಬಾಬಾಮಿಯಾ. ಆತನ ಗುಡಿಸಲ ಮೇಲೆ ಪಕ್ಕದ ಶ್ರೀಮಂತನ ಮನೆಯ ಗೋಡೆ ಬಿತ್ತು, ಇದ್ದ ಒಬ್ಬನೇ ಒಬ್ಬ ಮಗ ಗೋಡೆಯಡಿ ಜಜ್ಜಿ ಹೋಗಿ ಸತ್ತುಹೋದ. ಬಾಬಾಮಿಯಾ ಮತ್ತು ಆತನ ಹೆಂಡತಿಗೆ ಹೊಡೆತ ಬಿತ್ತು, ಆತ ಪ್ರಜ್ಞೆ ತಪ್ಪಿದ. ಎರಡು ದಿನಗಳ ನಂತರ ಪ್ರಜ್ಞೆ ಬಂದಾಗ ಆತನಿಗೆ ತನ್ನ ದುರಂತ ತಿಳಿಯಿತು. ಕಾಲು ಮುರಿದುಹೋಗಿತ್ತು, ಮಗ ತೀರಿಕೊಂಡಿದ್ದ. ಬಡವನಾದ ಆತ ಕೂಲಿ ಮಾಡಿ ಬದುಕಬೇಕು. ಕಾಲು ಊನವಾಗಿದೆ. ಮನೆಯಲ್ಲಿ ಹಿಡಿ ಧಾನ್ಯವಿಲ್ಲ, ತನ್ನ ಅಸಹಾಯಕತೆಗೆ ದಂಗಾದ ಈತ ಪಂಚಾಯ್ತಿಯ ಮೆಂಬರೊಬ್ಬರನ್ನು ಕರೆಸಿ ತನ್ನ ಸ್ಥಿತಿಯ ಬಗ್ಗೆ ಸರ್ಟಿಫಿಕೇಟ್ ಮಾಡಿಸಿ ಮುಖ್ಯಮಂತ್ರಿಗೆ, ನಮ್ಮ ಪತ್ರಿಕೆಗೆ ಕಳಿಸಿದ. ನಾವು ಪ್ರಕಾಶ್‌ಗೆ, ಹೆಗಡೆಯವರಿಗೆ ಪತ್ರ ಬರೆದೆವು. ಅದರಿಂದ ಉತ್ತರವಿಲ್ಲ, ಏನು ಮಾಡುವುದು? ಕೂಡಲೇ ಆತನಿಗೆ ಮುನ್ನೂರು ರೂಪಾಯಿ ಕಳಿಸಿ ಪ್ರತೀ ತಿಂಗಳು ರೂ. 75 ಕಳಿಸುವ ವ್ಯವಸ್ಥೆ ಮಾಡಿದೆವು. ಮುಖ್ಯಮಂತ್ರಿಗಳಿಗೆ ಮತ್ತೆ ಒತ್ತಾಯ ಮಾಡಿದೆವು. ಅವರಿಂದ ಉತ್ತರವೇ ಇಲ್ಲ, ನಾವು 75 ರೂ. ಕಳಿಸುವುದನ್ನು ನಿಲ್ಲಿಸಲಿಲ್ಲ, ಈಗಲೂ ಹೋಗುತ್ತಿದೆ.



ಆದರೆ ಈ ಅನುಕಂಪ ಎಷ್ಟು ದಿನ, ಎಷ್ಟು ಜನಕ್ಕೆ ತೋರಲು ಸಾಧ್ಯ? ಮೊನ್ನೆ ಒಬ್ಬ ಬಡ ಮಹಿಳೆ ತನ್ನ ಗಂಡನ ಮೂತ್ರಪಿಂಡ ಸೋಲುತ್ತಿರುವುದರ ಬಗ್ಗೆ ಇನ್ನೊಬ್ಬಳು ತಾಯಿ ತನ್ನ ಮಗ ಗುಣವಾಗದ ಕಾಯಿಲೆಯಿಂದ ನರಳುತ್ತಿರುವ ಬಗ್ಗೆ ಬರೆದು 'ಪತ್ರಿಕೆ'ಯ ಮೂಲಕ ಹಣ ಸಂಗ್ರಹಿಸಿ ಕೊಡಲು ಹೇಳಿದ್ದಾರೆ. ಹಾಗೆ ಮಾಡಲಾಗುತ್ತಿಲ್ಲ, ಅವರು ದಯವಿಟ್ಟು ನಮ್ಮನ್ನು ಕ್ಷಮಿಸಬೇಕು. ದಿನಕ್ಕೆ ನೂರು ಕ್ಯಾನ್ಸರ್ ಕಾಯಿಲೆಯವರು, ನೂರಾರು ಮೂತ್ರಪಿಂಡದ ತೊಂದರೆಯವರು ಬರೆದರೆ ಏನು ಮಾಡುವುದು? ಓಮುಗರ ಕೈ, ಮನಸ್ಸು ಬರಿದು ಮಾಡುತ್ತ ಹೋಗಬಾರದು. ಎಲ್ಲರಿಗೆ ಕೂಡಲೆ ನೆರವಾಗುವಂಥ ವ್ಯವಸ್ಥೆಗಾಗಿ ಪ್ರಯತ್ನಿಸುವುದೇ ಒಳ್ಳೆಯದು. ಇದನ್ನು ಭಾರವಾದ ಹೃದಯದಿಂದ ಬರೆಯುತ್ತಿದ್ದೇನೆ.

ಮಾಯಾವತಿ ಗೆಲುವು, ಮಾಯೆಯೋ? ಮರ್ಮವೋ?

ಕಣ್ಣಾಮುಚ್ಚಾಲೆ

ಅಕ್ಷಯಕುಮಾರ, ಹೋರಾಪೂರ
ಕೆಲವು ಹುಡ್ಗೀರು, ಹುಡ್ಗರನ್ನು ಗಾಳಿಪಟದಂತೆ ಆಡಿಸೋದೇಕೆ?
◆ ಸೂತ್ರ ಅವರ ಕೈಗೆ ಕೊಟ್ಟ ಮೇಲೆ ಹುಡುಗರ ದ್ದೇನು ಉಳೀತು.

ಡಿ.ಎಲ್. ಶ್ವೇತಾ, ಹರಪನಹಳ್ಳಿ
ಮುಂಗಾರು ಮಳೆ ಭರ್ಜರಿ ಬಾರಿಸುತ್ತಿದ್ದರೂ ಬೆಳೆ ಇಲ್ಲವಲ್ಲಾ?
◆ ಬೆಳೆ ಕೃಷ್ಣಪ್ಪನಿಗೆ, ಕಳೆ ಯೋಗರಾಜ್ ಭಟ್‌ಗೆ ಅಂತ ಜಗಳ ಆದುತ್ತಿದ್ದಾರಲ್ಲಾ.

ಇಂದಿರಾ ಶ್ರೀಧರ್, ದಾವಣಗೆರೆ
ಮಾಯಾವತಿಗೆ ಮನುವಾದಿಗಳ ಜೊತೆ ಏಗುವುದು ಕಷ್ಟವಲ್ಲವೆ?
◆ ಅಧಿಕಾರಕ್ಕೆ ಆಕೆ ಯಾರ ಜೊತೆ ಬೇಕಾದರೂ ಏಗುವ 'ಮಾಯೆ' ಕಲಿತಿದ್ದಾಳೆ.



ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ಅನ್ಯಾಯಕ್ಕೊಳಗಾದವರೇ ಅಪರಾಧಿಗಳೇ?
◆ ಉತ್ತರಕ್ಕಾಗಿ ನಮ್ಮ ಪ್ರಕಾಶನದ 'ಡಿಸೆಂಬರ್ 13' ಪುಸ್ತಕ ಓದಿ.

ಎಂ.ನಿಸರ್ಗ, ದಾವಣಗೆರೆ
ಸಿದ್ದರಾಮಯ್ಯಗೆ ಕಾಂಗ್ರೆಸ್ ಗೆಳೆತನ ಹೇಗನ್ನಿಸಿದೆ?
◆ ಬಾಗಿಲನ್ನು ತೆರೆದು ಕೊಲೆಗಡುಕನನ್ನೇ ಬರ ಮಾಡಿಕೊಂಡಂತಾಗಿದೆ.

ಬಸವರಾಜ್ ಟೆಸ್ಟರ್, ಗುಲ್ಬರ್ಗಾ
ಮಹಾಕಂತ್ರಿ ದೇವೇಗೌಡನನ್ನು ಮಹಾಮಾಂತ್ರಿಕ ಎನ್ನುವುದು ಸರಿನಾ?
◆ ಕಂತ್ರಿಗೂ, ಮಾಂತ್ರಿಕನಿಗೂ ಯಾವ ವ್ಯತ್ಯಾಸವೂ ಇಲ್ಲ. ಗೊತ್ತಾ.

ಎಂ. ಮಂಜುಳಾ ಸಿದ್ದರಾಜು, ಭದ್ರಾವತಿ
ಮದುವೆಯಾಗಿ ಸಂಸಾರ ನಡೆಸುತ್ತಿರುವ ಸಮ್ಮಿಶ್ರ ಸರ್ಕಾರಕ್ಕೆ ಇನ್ನೂ ಗರ್ಭಿಣಿಯ ಲಕ್ಷಣಗಳು ಕಾಣುತ್ತಿಲ್ಲವಲ್ಲ!
◆ ಕಾಗೆ, ನರಿ ಮದುವೆ ಆದ್ರೆ ಮಕ್ಕಳು ಹುಟ್ಟುತ್ತವೆಯೇ.

ಡಿ.ಎಲ್. ನಾಗರಾಜ್, ಹರಪನಹಳ್ಳಿ
ಎಸ್.ಎಲ್. ಭೈರಪ್ಪನವರ 'ಆವರಣ' ಹಿಂದೂ ರಾಷ್ಟ್ರದ ನವೋದಯವೇ?
◆ ಅಲ್ಲ ನೈವೇದ್ಯ.

ಮಂಚಾಲಿ ವಾಗೀಶಚಾರು, ಬಿಜಾಪುರ
ಪುಣ್ಯ ಮಾಡಿದರೆ ಸ್ವರ್ಗಕ್ಕೆ, ಪಾಪ ಮಾಡಿದರೆ ನರಕಕ್ಕೆ ರಾಜಕಾರಣ ಮಾಡಿದರೆ?
◆ ಅಧಿಕಾರದ ಗದ್ದುಗೆಗೆ ಎಂಬುದೇ ನಮ್ಮ ನರಕ-ಸ್ವರ್ಗ!

ಕವಿತಾ ಮಧುಸೂದನ್, ದಾವಣಗೆರೆ
ಕುರಿ, ಕೋಳಿ, ಕತ್ತೆ ಸಮ್ಮೇಳನ ನಡೆಸಿದರೆ ಯಡ್ಡಿ ದುಡ್ಡು ಕೊಡುವರೆ?
◆ ಹಿಂದೂ ಕತ್ತೆ, ಕೋಳಿ, ಕುರಿ ಆದರೆ ಅದಕ್ಕೂ ಯಡ್ಡಿ ರೆಡಿ.

ತೂರಗಲ್ಲ ಉಮೇಶ ರಾಮದುರ್ಗ, ಬೆಳಗಾಂ
ರಾಧಿಕಾ ರಾಜ್ಯದ ಕಾಮಧೇನು, ಶಿಲ್ಪಾಶೆಟ್ಟಿ ದೇಶದ ಕಲ್ಪವೃಕ್ಷ ಎಂಬುದು ನನ್ನ ಗೆಳತಿಯ ಅನಿಸಿಕೆ?
◆ ಅದೆಲ್ಲ ಇರಲಿ, ಕುಮಾರನಿಗೂ, ಯಡ್ಡಿಗೂ ನಿಮ್ಮ ಗೆಳತಿ ಕೊಟ್ಟಿರುವ ನಾಮಾಂಕಿತಗಳೇನು ಎಂದು ತಿಳಿಸುವಿರಾ?

ಓದು ಸಿದ್ದೇಗೌಡ, ಕೆಬ್ಬೇಹಳ್ಳಿ
ಗಾಂಧಿಬಜಾರ್ 'ಅಪ್ಪ ಅಪ್ಪ', ಪದ್ಮನಾಭನಗರ 'ಅಮ್ಮ ಅಮ್ಮ', ಶ್ರೀನಿವಾಸ ನಗರ ಮತ್ತು ಲಕ್ಕಸಂದ್ರ....?
◆ 'ಅಯ್ಯಯ್ಯಪ್ಪೋ' ಮತ್ತು 'ಅಯ್ಯಯ್ಯಮ್ಮೋ' !!

ಮಂಚಾಲಿ ಸುಕನ್ಯಬಾಯಿ, ಬಳ್ಳಾರಿ
ಆಳ ನೋಡಿ ನೀರಿಗೆ ಇಳಿಬೇಕು, ಏನು ನೋಡಿ ರಾಜಕೀಯಕ್ಕೆ ಬರಬೇಕು?
◆ ಕುಮಾರಣ್ಣ ಕೇಸಿನಲ್ಲಿ ಅಪ್ಪನ ಅದು, ಶೋಭಾ ಕೇಸಿನಲ್ಲಿ ಯಡ್ಡಿಯ ಇದು...!

ಬಹುಮಾನಿತ ಪ್ರಶ್ನೆ

ಕೆ. ಶ್ರೀನಿವಾಸ್, ಮಂಡ್ಯ
ಮಾಯಾವತಿ ಗೆಲುವು, ಮಾಯೆಯೋ? ಮರ್ಮವೋ?
◆ ಎರಡೂ ಅಲ್ಲ, ಬಹುಜನರ ಕರ್ಮ.

ವಾರದ ಪ್ರಶ್ನೆ:
ಬಿಎಸ್‌ಪಿ ಆನೆಯ ಮೇಲೆ ಯಾರ ಅಂಬಾರಿ?

ಮೇ 16ರ ಸಂಚಿಕೆಯ ನಮ್ಮ ಪ್ರಶ್ನೆ: ಮಹಿಳೆಯರಿಗೆ ರಾತ್ರಿ ಪಾಳಿ ನಿಷೇಧ ಗೃಹಿಣಿಯರಿಗೂ ಅನ್ವಯಿಸಬಾರದೇಕೆ?
ನಿಮ್ಮ ಉತ್ತರ: ಮಟಮಟ ಮಧ್ಯಾಹ್ನವೇ ಚಂದ್ರ ಮಂಚಕ್ಕೆ ಬಾ ಚಕೋರಿ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ಹಾಲಸ್ವಾಮಿ, ಬೆಂಗಳೂರು

'ಗೋ'... ಹೊಟ್ಟೆಪಾಡಿನ ಸಮ್ಮೇಳನ!

ತೆಗಳಿಕೆ ಹೊಗಳಿಕೆ

ಗೋ ಸಮ್ಮೇಳನದ ಕುರಿತಾದ ವಿವರವಾದ ಲೇಖನ ಚೆಡ್ಡಿಗಳ ಕಪಟತನಕ್ಕೆ ಹಿಡಿದ ಕನ್ನಡಿಯಾಗಿತ್ತು. ರಾಘವೇಶ್ವರ ಸ್ವಾಮಿ ಗೋವನ್ನು ವ್ಯಾಪಾರದ ವಸ್ತುವನ್ನಾಗಿ ಮಾಡಿಕೊಂಡಿರಬಹುದು. ಈ "ವಿಶ್ವ ಗೋಸಮ್ಮೇಳನ" ಮುಂಬರುವ ದಿನಗಳಲ್ಲಿ ಕೋಮು ಸಾಮರಸ್ಯಕ್ಕೆ ಧಕ್ಕೆ ತರುತ್ತದೆ ಎಂಬ "ಲಂಕೇಶ್"ದ ದೂರದೃಷ್ಟಿ ತರ್ಕಬದ್ಧವಾಗಿದೆ. ಬ್ರಾಹ್ಮಣರು ಪಶುಗಳನ್ನು ಕೊಲ್ಲುತ್ತಿದ್ದರು ಎಂಬ ಸತ್ಯವನ್ನು ಮರೆಮಾಚಿ ಇತರೆ ಧರ್ಮಿಯರು ಮಾತ್ರ (ವಿಶೇಷವಾಗಿ ಮುಸ್ಲಿಂರು) ಗೋವಧೆ ಮಾಡುತ್ತಾರೆ ಎಂಬ ಮಿಥ್ಯಾರೋಪ ಮಾಡುತ್ತಿದ್ದಾರೆ. ಮನುಸ್ಮೃತಿಯಲ್ಲಿ "ಏಷ್ವರ್ಥೇಷು ಪಶೂನ್ ಹಿಂಸನ್ ವೇದ ತತ್ವಾರ್ಥ ವಿದ್ವಿಜಃ ಆತ್ಮಾನಂ ಚ ಪಶುಂ ಚೈವ ಗಮಯತ್ಯುತ್ತಮಾಂ ಗತಿಂ" (ಯಜ್ಞ ಶ್ರಾದ್ಧ ಮತ್ತು ಮಧುಪರ್ಕ ಮುಂತಾದ ಕಾರ್ಯಗಳಿಗಾಗಿ ಮಾತ್ರ ವೇದಜ್ಞನಾದ ಬ್ರಾಹ್ಮಣನು ಪಶುವನ್ನು ಕೊಂದರೆ ತನ್ನ ಜೊತೆಗೆ ಆ ಪಶುವಿಗೂ ಉತ್ತಮಗತಿ ಉಂಟು ಮಾಡುತ್ತಾನೆ. ಮನುಸ್ಮೃತಿ: 5-42) ಎಂದು ಹೇಳಲಾಗಿದೆ.

ಋಗ್ವೇದದ 5 ನೇ ಮಂಡಲದ 29 ನೆ ಸೂಕ್ತದ 7 ನೇ ಮಂತ್ರವು ಎಮ್ಮೆ, ಕೋಣಗಳ ಮಾಂಸಭಕ್ಷಣೆಯ ಕುರಿತು ವಿವರಿಸುತ್ತದೆ. ಗೋಮಾಂಸ ಭಕ್ಷಣೆಯ ಕುರಿತು ಈ ಹಿಂದೆ "ಲಂಕೇಶ್"ಪತ್ರಿಕೆಯು (ಡಿಸೆಂಬರ್ 27, 2006) ವಿವರಿಸಿದೆ. 11 ನೇ ಶತಮಾನದವರೆಗೂ ಬ್ರಾಹ್ಮಣರು ಯಜ್ಞಗಳಲ್ಲಿ ಪ್ರಾಣಿಗಳನ್ನು ಬಲಿಕೊಡುತ್ತ, ಮಾಂಸಭಕ್ಷಣೆ ಮಾಡುತ್ತಿದ್ದರು. ಆದ್ದರಿಂದಲೇ ಬಸವಣ್ಣನವರು "ವೇದವನೋದಿದವರ ಮುಂದೆ ಅಳು ಕಂಡೆಯ ಹೋತೆ, ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡೆಯಾ ಹೋತೆ" ಎಂದು ನುಡಿದಿದ್ದು ಮಾಂಸ ಭಕ್ಷಣೆಯ ಆರೋಪವನ್ನು ಇಂದು ಕೇವಲ ಮುಸ್ಲಿಂ, ಕ್ರೈಸ್ತರ ತಲೆಗೆ ಹೊರಿಸುತ್ತಿರುವುದು ಯಾವ ನ್ಯಾಯ.



ರಾಘವೇಶ್ವರರಿಗೆ ಗೋಗಳ ಮೇಲೆ ಅಷ್ಟೊಂದು ಪ್ರೇಮವಿದ್ದರೆ ಬರಗಾಲ ಪೀಡಿತದಿಂದ ಬಡಕಲಾದ ಗೋಗಳನ್ನು ತಂದು ಸಂರಕ್ಷಿಸಲಿ. ಕೇವಲ ದಷ್ಟ-ಪುಷ್ಟ ಗೋಗಳನ್ನು ತಂದು ಶೃಂಗಾರ ಮಾಡಿ ಪ್ರಚಾರ ಪಡೆದುಕೊಂಡರೆ ಅದು ಅವರ ಹೊಟ್ಟೆ ಪಾಡಿಗೆ ಮಾಡಿದ ಕುತಂತ್ರವಾಗುತ್ತದೆ.

-ಅಬ್ದುಲ್‌ರಜಾಕ್ ದಿ. ಟ[illegible], ಕೆರೂರ

ರಾಮಚಂದ್ರಾಪುರ ಮಠದಲ್ಲಿ [illegible] ಗೋ.... ಸಮ್ಮೇಳನದಲ್ಲಿ ನಡೆದ ಚರ್ಚೆ ಅಜೆಂ[illegible] ಎಲ್ಲವೂ ಒಂದೇ: ಗೋಹತ್ಯೆ ನಿಷೇಧ! ಇವತ್ತು [illegible] ಬೋರೇಗೌಡ ಜಾನುವಾರುಗಳ ಮೇವು ನೀರಿಗಾಗಿ ಹುಡುಕಾಟ ನಡೆಸುತ್ತಿದ್ದಾನೆ. ಇದರ ಯಾವುದೇ ಅರಿವಿಲ್ಲದೆ ಮಠದಲ್ಲಿ ಅಬ್ಬರಾಟದ ವಿಶ್ವಗೋಸಮ್ಮೇಳನ ನಡೆಯಿತು. ನೂರಾರು ಎಕರೆ ಭೂಮಿಯನ್ನು ಹೊಂದಿರುವ ಮಠಗಳು ಮೇವು ಬೆಳೆದು ಬಡ ಗೋಪಾಲಕರಿಗೆ ಒಂದು ಹಿಡಿ ಮೇವು ನೀಡಿದ್ದರೆ ಮಠಗಳು ಮೇಲ್ಪಂಕ್ತಿಯಲ್ಲಿ ನಿಲ್ಲುತ್ತಿದ್ದವು.

ನಮ್ಮ ಪರಂಪರೆಯಲ್ಲಿ ಎಲ್ಲಿಯೂ ಬ್ರಾಹ್ಮಣರು ದನಕಾಯ್ದ ನಿದರ್ಶನವಿಲ್ಲ! ಅವರ ಮನೆಗಳಲ್ಲಿ ಜೀತ ಕೆಲಸ ಮಾಡುತ್ತಿದ್ದ ಶೋಷಿತ ವರ್ಗದವರು ನಿಜವಾಗಿ ದನ ಕಾಯ್ದು ಸಗಣಿ, ಗಂಜಲ ಬಾಚುತ್ತಿದ್ದರು. ಆದರಿಂದ ಬರುವ ಹಾಲು, ಮೊಸರು, ಬೆಣ್ಣೆ ತುಪ್ಪ ಸವಿಯುತ್ತಿದ್ದವರು ಮಾತ್ರ ವೈದಿಕರು. ಗೋವಿನಿಂದ ಬರುವ ಬೈ ಪ್ರಾಡಕ್ಟ್ ಹಾಲು, ಮೊಸರು, ಬೆಣ್ಣೆ ತುಪ್ಪದಿಂದ ಗುಡಿಗೋಪುರಗಳು ಅಭ್ಯಂಜನವಾಗಬೇಕು ಗೋವಿನ ಗೋ ಮೂತ್ರದಿಂದ ಪಾವನವಾಗಬೇಕು. ದಿನ ಬೆಳಗಾಗುವ ಹೊತ್ತಿಗೆ ಕಾಫಿಗಾಗಿ, ಹುಟ್ಟುವ ಮಕ್ಕಳಿಗೆ ಹಾಲು ಬೇಕು. ಇವರೆಲ್ಲರಿಗೂ ಗೋವುಗಳಿಗೂ ಇರುವ ಸಂಬಂಧ ಇಷ್ಟೇ.


ಹೈದರಾಲಿ, ಟಿಪ್ಪು, ಮೈಸೂರು ಮಹಾರಾಜರು ಸಾವಿರಾರು ಎಕರೆ ಹುಲ್ಲುಗಾವಲುಗಳನ್ನು ಬೆಳೆಸಿ ಅಮೃತ್‌ಮಹಲ್ ಹಳ್ಳಿಕಾರ್ ತಳಿಗಳನ್ನು ಸಂರಕ್ಷಿಸಿದರು. ಇಂತಹ ದೊರೆಗಳಿಗೆ ಇದ್ದಂತಹ ದೂರದೃಷ್ಟಿಯಿದ್ದಿದ್ದರೆ ಸಾವಿರಾರು ಬಡ ಗೋವುಗಳು ಮೇವು ನೀರಿಗಾಗಿ ಪರಿತಪಿಸಬೇಕಾಗಿರಲಿಲ್ಲ, ಈ ದೊರೆಗಳು ಪ್ರಾರಂಭ ಮಾಡಿದ ಬೆಣ್ಣೆ ಚಾವಣಿ ಪಶುಪಾಲನಾ ಇಲಾಖೆಯಾಗಿ ಬೃಹದಾಕಾರವಾಗಿ ಬೆಳೆದು ಪ್ರಾಣಿ ಆರೋಗ್ಯ ಸಂಶೋಧನೆ ಸಂರಕ್ಷಣೆಯ ಜವಾಬ್ದಾರಿ ಹೊತ್ತಿದೆ. ತಳಿಸಂಕರ್ಣ ಮತ್ತು ತಳಿ ನೀತಿಯಿಂದಾಗಿ ಕೃತಕ ಗರ್ಭಧಾರಣೆಯಂತಹ ಕ್ರಾಂತಿ ಕಾರಕ ಸಂಶೋಧನೆಯಿಂದಾಗಿ ರೈತರು ಹಾಲಿನ ಹೊಳೆಯನ್ನು ಹರಿಸುತ್ತಿದ್ದಾರೆ.

F.A.O. ಸಮೀಕ್ಷೆಯ ಪ್ರಕಾರವಾಗಿ 81.96 ಮೆಟ್ರಿಕ್‌ಟನ್ ದಿನವೊಂದಕ್ಕೆ ಹಾಲು ಉತ್ಪಾದನೆಯಾಗಿ ಇಂಡಿಯಾ ಒಂದನೇ ಸ್ಥಾನದಲ್ಲಿದೆ. ಒಬ್ಬ ಮನುಷ್ಯನಿಗೆ ಸರಾಸರಿ 217 ಗ್ರಾಂ ಹಾಲು ಬೇಕಾಗುತ್ತದೆ. ಹಾಗಾಗಿ 1951 ರಲ್ಲಿ ಜಾನುವಾರುಗಳ ಸಂಖ್ಯೆ 198 ಮಿಲಿಯನ್ಸ್. 2003ಕ್ಕೆ 284 ಮಿಲಿಯನ್ಸ್ ಗೋಸಂಪತ್ತು ವೃದ್ಧಿಯಾಗಿದೆ. ಭಾರತ ದೇಶದಲ್ಲಿ ದೊರಕುವ ಹಲವು ತಳಿಗಳ ಸಂಶೋಧನೆಯನ್ನು ವಿಶ್ವವಿದ್ಯಾಲಯ ಜವಾಬ್ದಾರಿ ಹೊತ್ತು ರೈತರಿಗೆ ನೆರವಾಗುತ್ತಿದೆ. ಭಾರತ ದೇಶದ ತಳಿಗಳು ವಿದೇಶದಲ್ಲಿ ದೊರಕುತ್ತಿವೆ ಎಂದರೆ ಈ ತಳಿಗಳು ವಿದೇಶಕ್ಕೆ ಹೇಗೆ ಹಾರಿಹೋದವು.

ಅಂದಹಾಗೆ, ಗೋ ಸಮ್ಮೇಳನದಲ್ಲಿ ಎಮ್ಮೆಗೆ ಗೇಟ್‌ಪಾಸ್ ಕೊಟ್ಟು ಗೋವನ್ನೆ ಮಾತ್ರ ಪ್ರೊಜೆಕ್ಟ್ ಮಾಡಿರುವುದು ವಿಷಾದಕರ. ಹಾಲು ಉತ್ಪಾದನೆಯಲ್ಲಿ ಎಮ್ಮೆ ಪ್ರಮುಖ ಪಾತ್ರ ವಹಿಸುತ್ತದೆ. ಗೋ ಗಂಜಲದಲ್ಲಿರುವ ಯೂರಿಯಾ, ಯುರಿಕ್ ಆಸಿಡ್ ಎಮ್ಮೆ ಗಂಜಲದಲ್ಲೂ ಇದೆ. ಹಾಗಾದರೆ ಎಮ್ಮೆ ಗಂಜಲಕ್ಕೆ ಪವಿತ್ರತೆಯಿಲ್ಲವೆ? ಅಥವಾ ಎಮ್ಮೆ ಕಪ್ಪಾಗಿದೆ, ಅಸಹ್ಯ ಹುಟ್ಟಿಸುತ್ತದೆ ಇಂತಹ ಜಿಜ್ಞಾಸೆಗಳಿಂದ ಮಠದವರು ದೂರವಿಟ್ಟರೇ.

- ಡಾ. ಜಿ. ಸಂಜೀವರಾಯ, ತುಮಕೂರು

ಲಂಕೇಶ್ ಪತ್ರಿಕೆಯ ಮೇ 9 ರ ಸಂಚಿಕೆಯಲ್ಲಿ ಬಂದ ಲೇಖನ "ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷನಾಗಲು 'ಬ್ಯಾರ' ಶುರು!" ಓದಿ ನನಗೆ ಮತ್ತು ನಮ್ಮ ಮಿತ್ರರೆಲ್ಲರಿಗೆ ತುಂಬಾ ಸಂತೋಷವಾಯಿತು. ಮಹಮ್ಮದ್ ಬಡ್ಡೂರು ಎಂಬ ಸ್ವಯಂ ಘೋಷಿತ ಕವಿ ಮಹಮ್ಮದ್ ರಫಿಯವರ ಸಿನಿಮಾ ಹಾಡುಗಳನ್ನು ಬ್ಯಾರಿ ಭಾಷೆಗೆ ತರ್ಜುಮೆ ಮಾಡಿ ತಾನೇ ಬರೆದ ಪದ್ಯ ಎಂದು ಜನರನ್ನು ವಂಚಿಸಿದ್ದಾನೆ.



ಬ್ಯಾರಿಗಳನ್ನು ಮೋಸ ಮಾಡುವ ಈ ಕಪಟಿಯ ಬಗ್ಗೆ ಬರೆದು ಜನರ ಕಣ್ಣು ತೆರೆಸಿದ್ದಕೆ ಅಭಿನಂದನೆಗಳು. ಈತನನ್ನು ಬ್ಯಾರಿಗಳು ಎಷ್ಟು ಬೇಗ ದೂರವಿಡುತ್ತಾರೋ ಅಷ್ಟು ಬ್ಯಾರಿ ಭಾಷೆಯ ಹಿತಕ್ಕೆ ಒಳ್ಳೆಯದು.

ಇನ್ನೂ ಸಮಾಜ ಸೇವಕರೆಂದು ಆರೋಪಿಸಿಕೊಂಡಿರುವ ಕುಟಿಲ ರಾಜಕಾರಣಿಗಳು ಕೂಡ ಬ್ಯಾರಿ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರಲ್ಲಿ ಲೈಂಗಿಕ ಹೊತ್ತಗೆಯಂತಿರುವ ಪುಸ್ತಕ ಒಂದನ್ನು ಬೇರೆಯವರಿಂದ ಬರೆಸಿದ ಮಹಾನುಭಾವ ಒಬ್ಬ ಈತ ಮತ್ತು ಈತನ ಲಿಮಿಟೆಡ್ ಚೇಲರು ಮಂತ್ರಿ ಮಹಾದೇವ ಪ್ರಸಾದರಲ್ಲಿ ಲಾಬಿ ಮಾಡುತ್ತಿರುವುದು ತಮಾಷೆಯಾಗಿದೆ. ಇನ್ನೊಬ್ಬ ಅಭ್ಯರ್ಥಿ ಬೆಂಗಳೂರಿನ ನವ ಶ್ರೀಮಂತನಿಗೆ ಬಡ ಬ್ಯಾರಿಗಳ ಬಗ್ಗೆ ಏನೂ ತಿಳಿದಿಲ್ಲ. ಈತ ಕೂಡ ತನ್ನ ಹಣದ ವರ್ಚಸ್ಸನ್ನು ಉಪಯೋಗಿಸಿ ಅಧ್ಯಕ್ಷನಾಗಲು ಲಾಬಿ ನಡೆಸುತ್ತಿದ್ದಾನೆ.


ಇವುಗಳೆಲ್ಲವುಗಳ ನಡುವೆ ಬ್ಯಾರಿ ಸಂಸ್ಕೃತಿ ಮತ್ತು ಭಾಷೆಗಾಗಿ ದುಡಿದ ಪ್ರೊ. ಇಚ್ಲಂಗೋಡು, ಡಾ. ವಹಾಬ್ ದೊಡ್ಡಮನೆ, ಯು.ಎ. ಕಾಸಿಂ, ಮಹಮ್ಮದ್ ಆಲಿ, ಹುಸೇನ್ ಕಾಟಿಪಳ್ಳ, ಹಂಝುಮಲಾರ್ ಎನ್ನುವ ಬಡಪಾಯಿ ಸಂಶೋಧಕರ ಬಗ್ಗೆ ಯಾವ ಬ್ಯಾರಿ ಸಂಸ್ಥೆಯೂ ಸ್ವರ ಎತ್ತುತ್ತಿಲ್ಲ! ಬ್ಯಾರಿ ಅಕಾಡೆಮಿ ಆಗುವುದಿದ್ದರೆ ಸರಕಾರ ಬ್ಯಾರಿ ಸಾಹಿತಿಗಳಿಗೆ ಮಾತ್ರ ಈ ಸ್ಥಾನ ನೀಡಿದರೆ ಬ್ಯಾರಿ ಭಾಷೆಗೆ ಉಪಕಾರವಾಗುತ್ತದೆ ಎನ್ನುವುದನ್ನು ಮರೆಯಬಾರದು.

-ಹನೀಫ್ ಮಂಜೇಶ್ವರ್ ಮತ್ತು ಮಿತ್ರರು, ಉಳ್ಳಾಲ

ಮಾಯಾವತಿಯ ಮಾಯಾಜಾಲ ಬಿಎಸ್‌ಪಿಯಲ್ಲಷ್ಟೇ ಅಲ್ಲದೆ ದೇಶದೆಲ್ಲೆಡೆ ಇರುವ ದಲಿತ ಸಮುದಾಯದಲ್ಲಿ ಹೊಸ ಸಂಚಲನ ಉಂಟುಮಾಡಿದೆ. ಅದು ನಮ್ಮ ರಾಜ್ಯದಲ್ಲಿ ದಲಿತ ನಾಯಕರ ರಾಜಕೀಯ ಅಧಿಕಾರದ ಕ್ಷೀಣ ಆಕಾಂಕ್ಷೆಗೂ ನೀರೆರೆದಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ದುರಂತವೆಂದರೆ ರಾಜ್ಯದಲ್ಲಿನ ಬಿಎಸ್‌ಪಿ ಕೇಡರ್‌ಗಳು ಸೀನಿಯಾರಿಟಿ ನೆಪದಲ್ಲಿ ಪ್ರಜ್ಞಾವಂತ ದಲಿತ ವರ್ಗವನ್ನು ದೂರವಿಡುತ್ತಲೇ ಬಂದಿದೆ. ಆ ಕಾರಣದಿಂದಲೇ ಉತ್ತರ ಪ್ರದೇಶದಲ್ಲಿ ಮಾಯಾವತಿ ಪಡೆದುಕೊಂಡ ರಾಜಕೀಯ ವರ್ಚಸ್ಸನ್ನು ಇಲ್ಲಿನ ಬಿಎಸ್‌ಪಿ ನಾಯಕರು ಪಡೆಯಲಾಗಿಲ್ಲ. ಇನ್ನು ಮುಂದಾದರೂ ಬಿಎಸ್‌ಪಿ ನಾಯಕತ್ವದತ್ತ ಪ್ರಜ್ಞಾವಂತ ದಲಿತರನ್ನು ಬರಮಾಡಿಕೊಂಡು ತತ್ವಬದ್ಧವಾಗಿ ಸರ್ವಜನರನ್ನು ಒಳಗೊಳ್ಳುವಂತಹ ವಿಶಾಲ ನೆಲೆಯಲ್ಲಿ ಪಕ್ಷವನ್ನು ಸಂಘಟಿಸಬೇಕಾದ ಜರೂರಿದೆ.

ಉತ್ತರ ಪ್ರದೇಶದ ಬಿಎಸ್‌ಪಿಯ ಫಲಿತಾಂಶದಿಂದ ಸಿದ್ಧರಾಮಯ್ಯ ಬಿಎಸ್‌ಪಿಯೆಡೆಗೆ ಬರುತ್ತಾರೆ ಎಂದು ಅತ್ಯುತ್ಸಾಹ ತೋರುವುದು ಆ ಪಕ್ಷದಲ್ಲಿನ ನಾಯಕತ್ವದ ಕೊರತೆಯನ್ನು ತೋರಿಸಿದಂತಾಗಬಾರದು. ಬದಲಿಗೆ ಪ್ರಗತಿಪರರು, ಶೋಷಿತ ಸಮುದಾಯಗಳ ಪ್ರಜ್ಞಾವಂತರನ್ನು ಮುಕ್ತವಾಗಿ ಬರಮಾಡಿಕೊಂಡು ಪಕ್ಷದ ನಾಯಕತ್ವವನ್ನು ಬೆಳೆಸುವ ಕಡೆಗೆ ಮುಂದಡಿ ಇಡಬೇಕು. ಆಗ ಪ್ರಭಾವಿ ವೃತ್ತಿನಿರತ ರಾಜಕಾರಣಿಗಳನ್ನು ಆಶ್ರಯಿಸದೆ ಪಕ್ಷದ ಸಂಘಟನೆಯನ್ನು ತಳಮಟ್ಟದಲ್ಲಿ ಜಾತಿಕೋಮು ನೆಲೆಯಿಲ್ಲದ ಬೃಹತ್ ತಳಹದಿಯಲ್ಲಿ ವಿಸ್ತರಿಸಬಹುದು.

-ಸದಾನಂದ ಸಿ. ಗಂಗನಬೀದು, ಬೆಂಗಳೂರು



ಚಿಕ್ಕಪ್ಪನ ಸಾವು ತಂದ ಮೌನ



> ನನ್ನ ಚಿಕ್ಕಪ್ಪ ವರದಪ್ಪನವರ ನಿಧನದ ಸುದ್ದಿ ಕೇಳಿದಾಕ್ಷಣ ನಾನು ದಿಗ್ಭ್ರಾಂತನಾದೆ. ಯಾಕೆಂದರೆ ನನ್ನ ಜೀವನದಲ್ಲಿ ಅಪ್ಪಾಜಿ ಎಷ್ಟು ಮಹತ್ತರವಾದ ಪಾತ್ರವನ್ನು ನಿರ್ವಹಿಸಿದ್ದರೋ ಅಷ್ಟೇ ಮುಖ್ಯವಾದ ಪಾತ್ರವನ್ನು ಚಿಕ್ಕಪ್ಪ ಕೂಡಾ ವಹಿಸಿದ್ದರು. ಅವರ ಸಾವಿನ ನೋವು ನನ್ನನ್ನು ಇನ್ನಿಲ್ಲದ ದುಃಖಕ್ಕೆ ಈಡುಮಾಡಿತು. ಇನ್ನೊಂದೆಡೆ ತನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದ ಸಹೋದರನ ಸಾವಿನಿಂದಾಗಿ ಅಪ್ಪಾಜಿ ಸಂಪೂರ್ಣವಾಗಿ ಜರ್ಜರಿತರಾಗಿದ್ದರು. ಅವರು ಮೌನಕ್ಕೆ ಶರಣಾಗಿದ್ದರು

ಅಷ್ಟೊತ್ತಿಗಾಗಲೇ ಅಪ್ಪಾಜಿ ಮತ್ತು ಚಿಕ್ಕಪ್ಪ ವರದಪ್ಪನವರು ಆಗಾಗ್ಗೆ ಆಸ್ಪತ್ರೆ ಸೇರಿವುದು, ಚಿಕಿತ್ಸೆ ಪಡೆಯುವುದು ಮಾಮೂಲಿಯಾಗಿತ್ತು. ಅಂತಹ ಸಂದರ್ಭದಲ್ಲಿ ನಾನು ಕೂಡ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದನ್ನು ಕಂಡು ಅಪ್ಪಾಜಿಗೆ ತುಂಬಾ ಬೇಸರವಾಯಿತು.

ಅನಾರೋಗ್ಯದಿಂದ ಈ ರೀತಿ ನಾನು ಆಸ್ಪತ್ರೆಯಲ್ಲಿ ಮಲಗಿದ್ದು ಬಹುಶಃ ಅದೇ ಮೊದಲ ಬಾರಿ. ಆದ್ದರಿಂದ "ನಿನ್ನ ಜೊತೆ ಆಸ್ಪತ್ರೆಯಲ್ಲಿ ನಾನೇ ಇರುತ್ತೇನೆ" ಎಂದು ಅಪ್ಪಾಜಿ ಚಿಕ್ಕ ಮಕ್ಕಳಂತೆ ಹಠ ಹಿಡಿದರು. "ಇಲ್ಲಾ ಅಪ್ಪಾಜಿ, ನನ್ನನ್ನು ಗೀತಾ ಚೆನ್ನಾಗಿ ನೋಡ್ಕೊತಾಳೆ. ನೀವು ಮನೆಗೆ ಹೋಗಿ ರೆಸ್ಟ್ ತಗೊಳ್ಳಿ" ಎಂದು ನಾನು ಒತ್ತಾಯ ಮಾಡಬೇಕಾಯಿತು. ಕೊನೆಗೂ ಒಲ್ಲದ ಮನಸ್ಸಿನಿಂದ ಹೋದ ಅವರು ನಾನು ಆಸ್ಪತ್ರೆಯಲ್ಲಿ ಇದ್ದಷ್ಟೂ ದಿನ ಬೆಳಗ್ಗೆ ಒಂಭತ್ತು ಗಂಟೆಗೆ ಬಂದು ಮಧ್ಯಾಹ್ನ ಊಟಕ್ಕೆ ಮನೆಗೆ ಹೋಗಿ ಮತ್ತೆ ಸಾಯಂಕಾಲ ಬಂದು ರಾತ್ರಿ ತನಕ ನನ್ನ ಜೊತೆ ಇರುತ್ತಿದ್ದರು. ಅಪ್ಪಾಜಿ ಈ ರೀತಿ ನನ್ನ ಮೇಲೆ ಪ್ರೀತಿಯ ಸುರಿಮಳೆ ಸುರಿದದ್ದನ್ನು ನೋಡಿ ನನ್ನ ಮನಸ್ಸು ಮಿಡಿಯಿತು. ಆ ಸಂದರ್ಭದಲ್ಲಿ ಅಪ್ಪಾಜಿಯ ಜೊತೆ ಮಾತುಕತೆಗೆ ಅವಕಾಶ ಸಿಕ್ಕಿದ್ದೇ ನನ್ನ ಪುಣ್ಯ ಎಂದು ನಾನು ಭಾವಿಸಿದ್ದೇನೆ. ಯಾಕೆಂದರೆ ಅವರು ಮತ್ತು ನಾನು ಈ ರೀತಿ ಕುಳಿತು ಹರಟೆ ಹೊಡೆದು ಎಷ್ಟೋ ವರ್ಷಗಳೇ ಆಗಿದ್ದವು. ಅಪ್ಪಾಜಿಯ ಹಾಜರಿಯಿಂದ ಹದಿನೈದು ದಿನ ಆಸ್ಪತ್ರೆಯಲ್ಲಿ ಕಾಲ ಕಳೆದದ್ದೇ ನನಗೆ ಗೊತ್ತಾಗಲಿಲ್ಲ.

ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆದ ನಂತರ ಎರಡಿ ವಾರ ಶೂಟಿಂಗ್‌ಗೆ ಹೋಗದೇ ಮನೆಯಲ್ಲಿ ರೆಸ್ಟ್ ತೆಗೆದುಕೊಳ್ಳಲು ಅಪ್ಪಾಜಿ ಸಲಹೆ ನೀಡಿದರು. ನನ್ನ ನಿರ್ಮಾಪಕ ಪಟ್ಟಾಭಿರಾಮ್‌ರವರು "ಎಷ್ಟು ದಿನ ಬೇಕಾದರೂ ಕಾಯುತ್ತೇನೆ" ಎಂದು ಆರಂಭದಲ್ಲೇ ಹೇಳಿದ್ದರು. ಆದರೆ ನಾನು ಒಂದು ವಾರ ಮಾತ್ರ ವಿಶ್ರಾಂತಿ ತೆಗೆದುಕೊಂಡು ಮತ್ತೆ ಶೂಟಿಂಗ್‌ಗೆ ಹಾಜರಾದೆ.

'ಕುಮಾರರಾಮ' ಚಿತ್ರದ ಶೂಟಿಂಗ್ ನಡೆಯುತ್ತಿದ್ದಾಗ ಅನೇಕ ಬಾರಿ ಅಪ್ಪಾಜಿ ಸೆಟ್ಟಿಗೆ ಭೇಟಿ ನೀಡುತ್ತಿದ್ದರು. ನಾನು ಈ ಚಿತ್ರವನ್ನು ಒಪ್ಪಿಕೊಂಡಾಗಲೇ ಅವರಿಗೆ ಬಹಳ ಸಂತೋಷವಾಗಿತ್ತು. "ಈ ಚಿತ್ರದಲ್ಲಿ ನಾನು ನಟಿಸಬೇಕಿತ್ತು! ಅಂಥ ಪಾತ್ರವನ್ನು ಮತ್ತು ನನ್ನ ಕನಸನ್ನು ನೀನು ನನಸಾಗಿಸುತ್ತಿದ್ದೀಯಲ್ಲ ಕಂದಾ..." ಎಂದು ಅವರು ಸಂಭ್ರಮಪಟ್ಟಿದ್ದರು.

ಅವರು ಸೆಟ್ಟಿಗೆ ಬಂದಾಗಲೆಲ್ಲ ಪುಳಕಿತರಾಗುತ್ತಿದ್ದರು. ಅಷ್ಟೊಂದು ಜನ, ಆ ವೇಷಭೂಷಣಗಳನ್ನು ನೋಡಿ ಯಾವುದೋ ಲೋಕಕ್ಕೆ ಕಾಲಿಟ್ಟ ಅನುಭವವಾಗುತ್ತದೆ ಎಂದು ಅವರು ಹೇಳುತ್ತಿದ್ದರು. ಅವರಿಗೆ ಇಷ್ಟವಾದ ಪಾತ್ರವೋ, ಇಷ್ಟವಾದ ಸಿನಿಮಾವೋ ಅಥವಾ ನಾನು ಐತಿಹಾಸಿಕ ಚಿತ್ರದಲ್ಲಿ ನಟಿಸುತ್ತಿದ್ದೇನೆ ಎಂಬ ಕಾರಣವೋ? ಗೊತ್ತಿಲ್ಲ. ಆದರೆ ಅಪ್ಪಾಜಿ ಆಗ ಸಂಭ್ರಮಿಸುತ್ತಿದ್ದುದು ನಿಜ.



ಅಪ್ಪಾಜಿಯವರಿಗೆ ಎಷ್ಟು ಸಂತೋಷವಾಗುತ್ತಿತ್ತೋ ಅಷ್ಟೇ ಸಂತೋಷ ನಮ್ಮ ಯುನಿಟ್‌ನ ಹುಡುಗರಿಗೂ ಆಗುತ್ತಿತ್ತು. ಅಷ್ಟೇ ಯಾಕೆ ಶ್ರೀನಿವಾಸಮೂರ್ತಿ, ನಿರ್ದೇಶಕ ಭಾರ್ಗವ ಮತ್ತು ಛಾಯಾಗ್ರಾಹಕ ಸುವರ್ಣರವರಂತೂ ಪ್ರತಿನಿತ್ಯ "ಅಪ್ಪಾಜಿ ಇವತ್ತೂ ಬರ್ತಾರಾ?" ಎಂದು ಕೇಳುತ್ತಿದ್ದರು. ಅಪ್ಪಾಜಿ ಸೆಟ್ಟಿಗೆ ಬಂದಾಗಲೆಲ್ಲ ಇವರೆಲ್ಲ ಎಂದಿಗಿಂತ ಉತ್ಸಾಹದಿಂದ ಕೆಲಸ ಮಾಡುತ್ತಿದ್ದದ್ದನ್ನು ನಾನು ಗಮನಿಸಿದ್ದೆ. ಇದಕ್ಕೆಲ್ಲ ಕಾರಣ ಐತಿಹಾಸಿಕ ಪಾತ್ರವೆಂದರೆ ಅಪ್ಪಾಜಿಯೇ ಅಂತಿಮ ಎಂದು ಎಲ್ಲರೂ ಭಾವಿಸಿದ್ದು. ಹೀಗಾಗಿ ಅವರಿದ್ದಾಗ ಕೆಲವು ಸಂಭಾಷಣೆಗಳ ರೀಡಿಂಗ್‌ಅನ್ನು ನಾನು ಅಪ್ಪಾಜಿ ಅವರಿಂದಲೇ ಪಡೆದಿದ್ದೆ. ಶ್ರೀನಿವಾಸಮೂರ್ತಿ ಅಂಕಲ್ ಕೂಡಾ ಕೆಲವೊಂದನ್ನು ಅಪ್ಪಾಜಿ ಬಳಿಯೇ ಕೇಳುತ್ತಿದ್ದರು. ಒಂದು ದಿನ ನನ್ನನ್ನು ಗ್ರೀನ್ ರೂಮಿಗೆ ಕರೆದುಕೊಂಡು ಹೋಗಿ "ಯಾವುದೇ ಕಾರಣಕ್ಕೂ ಬೆನ್ನನ್ನು ಬಗ್ಗಿಸಿಕೊಂಡು ನಿಲ್ಲಬೇಡ, ಎದೆ ಸೆಟೆದುಕೊಂಡು ನಿಂತಿರು" ಎಂದು ಕಿವಿಮಾತು ಹೇಳಿದ್ದರು.

ಅದೇ ಸಂದರ್ಭದಲ್ಲಿ ನಾನು ನಟಿಸಿದ್ದ 'ಜೋಗಿ' ಚಿತ್ರ ಐವತ್ತು ದಿನ ತುಂಬಿದ ಪ್ರದರ್ಶನವನ್ನು ಕಾಣುತ್ತಿತ್ತು. ಆಗ ನಾನು ಬೆಂಗಳೂರು, ಮೈಸೂರು, ಮಂಡ್ಯ ಮೊದಲಾದ ಕಡೆ ಥಿಯೇಟರುಗಳಿಗೆ ಭೇಟಿ ನೀಡಿ ಪ್ರೇಕ್ಷಕರಿಗೆ ಥ್ಯಾಂಕ್ಸ್ ಹೇಳಲು ಹೊರಟಿದ್ದೆ.

ಆ ದಿನ ನನಗಿನ್ನೂ ನೆನಪಿದೆ... ಅವತ್ತು ಸೆಪ್ಟೆಂಬರ್ ೧೮. ನಾನು ಮೈಸೂರಿನ ಥಿಯೇಟರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಹತ್ತಿರದ ಮಂಡ್ಯದಲ್ಲಿ ವಿಷ್ಣುವರ್ಧನ್ ಅವರ ಹುಟ್ಟುಹಬ್ಬದ ಆಚರಣೆಯ ಸಮಾರಂಭ ನಡೆಯುತ್ತಿರುವ ವಿಷಯ ಗೊತ್ತಾಯಿತು. ನಾನು ನನ್ನ ಸಹಾಯಕರಿಗೆ ಕಾರನ್ನು ನೇರವಾಗಿ ಮಂಡ್ಯದ ಕ್ರೀಡಾಂಗಣದ ಕಡೆಗೆ ತಿರುಗಿಸಲು ಸೂಚಿಸಿದೆ.

ನಾವು ಮಂಡ್ಯ ಕ್ರೀಡಾಂಗಣವನ್ನು ಪ್ರವೇಶಿಸಿದಾಗ ವಿಷ್ಣು ಅಭಿಮಾನಿಗಳು ಸಾಗರದಂತೆ ನೆರೆದಿದ್ದನ್ನು ಕಂಡೆ. ನಾನು ಅವರ ನಡುವೆ ದಾರಿಮಾಡಿಕೊಂಡು ವೇದಿಕೆಯನ್ನು ಏರಲು ಪ್ರಯತ್ನಿಸುತ್ತಿದ್ದೆ. ನಾನು ಬಂದದ್ದನ್ನು ನೋಡಿ ವಿಷ್ಣುವರ್ಧನ್ ಅವರ ಅಭಿಮಾನಿಗಳಿಗೆಲ್ಲ ಅಚ್ಚರಿ. ಅವರಲ್ಲಿ ಕೆಲವರು "ಇಲ್ಲ, ಇಲ್ಲಿಗೆ ಶಿವಣ್ಣ ಬರಲು ಸಾಧ್ಯವೇ ಇಲ್ಲ; ಇದು ಶಿವಣ್ಣನ ತರಹ ಇರೋ ಡ್ಯೂಪ್ ನಟ ಇರಬೇಕು" ಎಂದು ಮಾತನಾಡಿಕೊಳ್ಳುತ್ತಿದ್ದದ್ದು ಕೇಳಿಸಿತು.

ನಾನು ನೇರವಾಗಿ ವೇದಿಕೆಗೆ ಹೋಗಿ ವಿಷ್ಣುವರ್ಧನ್ ಅವರನ್ನು ಆಲಿಂಗಿಸಿದೆ. ಹಾಗೆಯೇ ಅವರ ಪಾದಮುಟ್ಟಿ ನಮಸ್ಕರಿಸಿ ಅವರಿಗೆ ಹುಟ್ಟುಹಬ್ಬದ ಶುಭಾಷಯಗಳನ್ನು ಹೇಳಿದೆ. ಅಷ್ಟೊತ್ತಿಗೆ ಅಲ್ಲಿ ನೆರೆದಿದ್ದ ಜನರ ಜೈಕಾರ ಮುಗಿಲು ಮುಟ್ಟಿತ್ತು.

ನಾನು ಮನೆಗೆ ಬಂದು ಅಪ್ಪಾಜಿ ಬಳಿ ವಿಷ್ಣುವರ್ಧನ್ ಹುಟ್ಟುಹಬ್ಬ ಸಮಾರಂಭಕ್ಕೆ ಹೋಗಿ ಶುಭಾಷಯ ಕೋರಿದ್ದನ್ನು ತಿಳಿಸಿದೆ. ಆಗ ಅವರು "ಕಂದಾ... ಎಷ್ಟು ದೊಡ್ಡ ಗುಣ ನಿನ್ನದು... ಕರೆಯದೇ ಹೋಗಬೇಕು, ಅದಕ್ಕಿರುವಷ್ಟು ಮರ್ಯಾದೆ ಬೇರೆ ಯಾವುದಕ್ಕೂ ಇಲ್ಲ" ಎಂದು ನನ್ನನ್ನು ಮನಸಾರೆ ಹೊಗಳಿದರು. "ಅಪ್ಪಾಜಿ, ನಾನು ಮತ್ತು ಗೀತಾ ಮೊದಲೇ ವಿಷ್ಣು ಅಂಕಲ್‌ಗೆ ಸರ್‌ಪ್ರೈಸ್ ಕೊಡೋಣ ಎಂದು ಮಾತನಾಡಿಕೊಂಡಿದ್ದೆವು" ಎಂದು ಹೇಳಿದಾಗ "ಕಂದಾ.... ನೀನು ಸರಿಯಾಗಿದ್ದನ್ನೇ ಮಾಡಿದ್ದೀಯಾ. ಇದೆಲ್ಲ ದೊಡ್ಡ ಮನುಷ್ಯರ ಗುಣ ಕಂದಾ... ಮನಸ್ಸಿನಲ್ಲಿ ಏನೂ ಕಲ್ಮಶ ಇಲ್ಲದಿರುವುದು ಮನುಷ್ಯನನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸುತ್ತದೆ. ನೀನು ಚಿಕ್ಕವನಾದರೂ ಬಹಳ ದೊಡ್ಡ ಗುಣವನ್ನು ತೋರಿಸಿದ್ದಿ" ಎಂದು ನನ್ನನ್ನು ಹೊಗಳಿದರು. ಆಗ ನನಗೆ ಕಸಿವಿಸಿಯಾಗಿ "ಅಪ್ಪಾಜಿ ನನ್ನನ್ನು ಇಷ್ಟೆಲ್ಲಾ ಹೊಗಳಬೇಡಿ. ನಾನು ಏನೇ ಮಾಡಿದರೂ ಅದನ್ನೆಲ್ಲಾ ನೀವೇ ನನಗೆ ಕಲಿಸಿಕೊಟ್ಟಿದ್ದು ತಾನೇ?" ಎಂದು ಹೇಳಿ ಸುಮ್ಮನಾದೆ.

ಅಂದು ನಾನು ಮಂಡ್ಯದಲ್ಲಿ ನಡೆಯುತ್ತಿದ್ದ ವಿಷ್ಣು ಹುಟ್ಟುಹಬ್ಬದ ಸಮಾರಂಭಕ್ಕೆ ಹಾಜರಾಗುತ್ತೇನೆಂದು ಯಾರೂ ನಿರೀಕ್ಷಿಸಿರಲಿಲ್ಲ. ವಿಷ್ಣು ಅಂಕಲ್‌ಗಂತೂ ನಾನು ದಿಢೀರನೆ ಬಂದಿದ್ದು ಅಭಿನಂದಿಸಿದ್ದನ್ನು ನೋಡಿ ಹೃದಯ ಸ್ಪರ್ಶಿತರಾಗಿ "ಶಿವಣ್ಣ ಸಾಧಾರಣವಾಗಿ ನಾನು ಯಾವುದೇ ಬರ್ತ್‌ಡೇ ಸಮಾರಂಭವನ್ನು ಮರೆಯುವುದಿಲ್ಲ. ಆದರೆ ಈ ಬರ್ತ್‌ಡೇ ಸಮಾರಂಭವನ್ನಂತೂ ನನ್ನ ಉಸಿರಿರುವ ತನಕ ಮರೆಯುವುದಿಲ್ಲ. ನೀನು ಬಂದಿದ್ದೇ ನನಗೆ ದೊಡ್ಡ ಬರ್ತ್‌ಡೇ ಗಿಫ್ಟ್" ಎಂದು ಹೇಳಿ ನನ್ನನ್ನು ಪ್ರೀತಿಯಿಂದ ತಬ್ಬಿಕೊಂಡರು. ಅವರ ಆ ಪ್ರೀತಿಯ ಅಪ್ಪುಗೆಯ ಬೆಚ್ಚನೆಯ ಸ್ಪರ್ಶ ನನ್ನಲ್ಲಿ ಇನ್ನೂ ಮಾಯವಾಗಿಲ್ಲ.

ಹಲವು ದಿನಗಳ ನಂತರ ನಾವು 'ಕುಮಾರರಾಮ' ಚಿತ್ರೀಕರಣಕ್ಕಾಗಿ ರಾಜಸ್ಥಾನಕ್ಕೆ ತೆರಳಿದೆವು. ಅಲ್ಲಿ ನಿರ್ದೇಶಕ ಭಾರ್ಗವರವರು ಸುಮಾರು 25 ದಿನಗಳ ಕಾಲ ಚಿತ್ರೀಕರಣಕ್ಕಾಗಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ಒಂದು ಯುದ್ಧದ ದೃಶ್ಯ ಮತ್ತು ಒಂದೆರಡು ಹಾಡುಗಳಿಗಾಗಿ ನಮ್ಮ ತಂಡ ಅಲ್ಲಿ ಬೇರುಬಿಟ್ಟಿತ್ತು.

ಉದಯಪುರದಲ್ಲಿ ಸ್ವಲ್ಪ ದಿನಗಳ ಚಿತ್ರೀಕರಣದ ನಂತರ ನಾವು ಜೈಪುರಕ್ಕೆ ಹೊರಟೆವು. ಆದರೆ ಉದಯಪುರದ ಹೋಟೆಲಿನಲ್ಲೇ ಇದ್ದ ನನ್ನ ಪತ್ನಿ ಗೀತಾಗೆ ನನ್ನ ಚಿಕ್ಕಪ್ಪ ವರದಪ್ಪನವರು ನಿಧನ ಹೊಂದಿದ ಸುದ್ದಿ ತಲುಪಿತು. ಕೂಡಲೇ ಆಕೆ ನಮಗೆ ಸುದ್ದಿಯನ್ನು ರವಾನಿಸಿದಳು. ಆಕಸ್ಮಾತ್ ಐದು ನಿಮಿಷ ತಡವಾಗಿದ್ದರೂ ನಮಗೆ ಜೈಪುರದಲ್ಲಿ ಫೋನ್ ಸಂಪರ್ಕ ದೊರೆಯುತ್ತಿರಲಿಲ್ಲ.

ಚಿಕ್ಕಪ್ಪನವರ ನಿಧನದ ಸುದ್ದಿ ಕೇಳಿದಾಕ್ಷಣ ನಾನು ದಿಗ್ಭ್ರಾಂತನಾದೆ. ಯಾಕೆಂದರೆ ನನ್ನ ಜೀವನದಲ್ಲಿ ಅಪ್ಪಾಜಿ ಎಷ್ಟು ಮಹತ್ತರವಾದ ಪಾತ್ರವನ್ನು ನಿರ್ವಹಿಸಿದ್ದರೋ ಅಷ್ಟೇ ಮುಖ್ಯವಾದ ಪಾತ್ರವನ್ನು ಚಿಕ್ಕಪ್ಪ ಕೂಡಾ ವಹಿಸಿದ್ದರು. ಕೂಡಲೇ ನಿರ್ಮಾಪಕರಿಗೆ ವಿಷಯ ತಿಳಿಸಿ ನಾನು ಬೆಂಗಳೂರಿಗೆ ಮರಳಬೇಕೆಂಬ ಆಶಯವನ್ನು ವ್ಯಕ್ತಪಡಿಸಿದೆ. ನಿರ್ಮಾಪಕ ಪಟ್ಟಾಭಿರಾಮ್ ಕೂಡಲೇ ಒಪ್ಪಿಕೊಂಡು ನಾನು ಬೆಂಗಳೂರಿಗೆ ಮರಳುವ ಏರ್ಪಾಡು ಮಾಡುವ ಭರವಸೆ ನೀಡಿದರು. ನಾನು ಮತ್ತು ನನ್ನ ಪತ್ನಿ ಗೀತಾ ವಿಮಾನ ಹತ್ತಿ ಬೆಂಗಳೂರಿಗೆ ವಾಪಾಸಾಗುವತನಕ ನನ್ನ ಮನಸ್ಸಿನ ಅಂಗಳದಲ್ಲಿ ಚಿಕ್ಕಪ್ಪ ಮತ್ತು ನನ್ನ ನಡುವಿನ ಭಾವನಾತ್ಮಕ ಸಂಬಂಧಗಳೆಲ್ಲವೂ ಹಾದುಹೋಗುತ್ತಿದ್ದವು. ಅದು ನೋವಿನ ಅನುಭವ. ಅದನ್ನು ವಿವರಿಸಲು ಸಾಧ್ಯವೇ ಇಲ್ಲ. ಅನುಭವಿಸಿದವರಿಗಷ್ಟೇ ಅದರ ಕಷ್ಟ ಗೊತ್ತು.


ಇಲ್ಲಿಗೆ ಬಂದು ಚಿಕ್ಕಪ್ಪನವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡನಂತರ ಮರುದಿನ ಮತ್ತೆ ಜೈಪುರಕ್ಕೆ ಹೊರಟುನಿಂತೆ. ಯಾಕೆಂದರೆ ಅಲ್ಲಿ ಯದ್ಧದ ದೃಶ್ಯಕ್ಕಾಗಿ ಲಕ್ಷಾಂತರ ರೂಪಾಯಿ ವೆಚ್ಚವಾಡಿದ್ದರು, ಮಾತ್ರವಲ್ಲ ಸಾವಿರಾರು ಜನ ಮತ್ತು ನೂರಾರು ಕುದುರೆಗಳನ್ನು ಮರುಭೂಮಿಯಲ್ಲಿ ಒಟ್ಟು ಸೇರಿಸಿದ್ದರು. ನನ್ನಿಂದಾಗಿ ನಿರ್ಮಾಪಕರಿಗೆ ಮತ್ತು ಸಹನಟರಿಗೆ ತೊಂದರೆಯಾಗಬಾರದು ಎಂಬುದು ನನ್ನ ನಿಲುವಾಗಿತ್ತು. ಇದನ್ನು ಅಪ್ಪಾಜಿಗೆ ಹೇಗೆ ಹೇಳುವುದೆಂಬುದೇ ನನಗೆ ಚಿಂತೆಯಾಗಿತ್ತು. ಯಾಕೆಂದರೆ ತನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದ ಸಹೋದರನ ಸಾವಿನಿಂದಾಗಿ ಅಪ್ಪಾಜಿ ಸಂಪೂರ್ಣವಾಗಿ ಜರ್ಜರಿತರಾಗಿದ್ದರು. ಅವರು ಮೌನಕ್ಕೆ ಶರಣಾಗಿದ್ದ ಇಂತಹ ಸಂದರ್ಭದಲ್ಲಿ ನಾನು ಮತ್ತೆ ಶೂಟಿಂಗ್‌ಗೆ ಹೊರಟುನಿಂತಿರುವ ವಿಷಯವನ್ನು ಹೇಗೆ ಪ್ರಸ್ತಾಪಿಸುವುದು ಎಂದು ಚಿಂತಿಸಿದೆ.

ಕೊನೆಗೂ ಧೈರ್ಯ ಮಾಡಿ ಅಪ್ಪಾಜಿ ಮುಂದೆ ನಿಂತೆ. ಆಗ ನಾನು ನಿರೀಕ್ಷಿಸಿದ್ದಕ್ಕಿಂತ ವಿಭಿನ್ನವಾಗಿ ಅಪ್ಪಾಜಿ ಪ್ರತಿಕ್ರಿಯಿಸಿದ್ದನ್ನು ನೋಡಿ ನಾನೇ ದಂಗಾಗಿಹೋದೆ....

(ಮುಂದುವರೆಯುತ್ತದೆ)

53

ನಿರೂಪಣೆ: ಸದಾಶಿವ ಶೆಣೈ



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

R.B.P. LANKESH, Kannada Weekly Price Rs. 10/- 30-5-2007 RNI No. KARKAN2005/14648 Regd.No.KA/BG(S)/2036/2005-0

'ಸಂತ'ನಲ್ಲೊಬ್ಬ 'ಜೋಗಿ'



ಈ ವಾರ ಬಿಡುಗಡೆಯಾಗಿರುವ ಶಿವರಾಜ್‌ಕುಮಾರ್ ಅಭಿನಯದ 'ಸಂತ' ಸ್ವಮೇಕ್ ಎಂಬುದು ಸಮಾಧಾನದ ವಿಷಯವಾದರೂ ಅದರ ಮೇಲೆ 'ಜೋಗಿ' ಮತ್ತು 'ಓಂ' ಚಿತ್ರಗಳ ಪ್ರಭಾವವಿರುವುದು ಅಷ್ಟು ಸಂತೋಷದ ವಿಷಯವಲ್ಲ. ಶಿವರಾಜ್‌ಕುಮಾರ್ ಅಭಿನಯ, ಡೈಲಾಗ್ ಡೆಲಿವರಿ ಮತ್ತು ಮಚ್ಚನ್ನು ಝಳಪಿಸುವ ಶೈಲಿ ಚೆನ್ನಾಗಿದ್ದು ಒಂದು ಛೇಸಿಂಗ್ ದೃಶ್ಯವಂತೂ ಉತ್ತಮವಾಗಿ ಮೂಡಿಬಂದಿದೆ. ಅಫ್‌ಕೋರ್ಸ್ ಇದು ರೌಡಿಸಂನ ಕಥಾವಸ್ತುವಿರುವ ಚಿತ್ರ. ಆದರೆ ಈ ರೌಡಿಸಂ ನಡುವೆ ಒಂದು ಸೆಂಟಿಮೆಂಟ್ ಟ್ರ್ಯಾಕ್‌ಅನ್ನು ಕಥೆಗಾರ ಅಜಯ್ ಕುಮಾರ್ ಸೊಗಸಾಗಿ ಹೆಣೆದಿದ್ದಾರೆ.

ತನ್ನ ಚೊಚ್ಚಲ ನಿರ್ದೇಶನದ 'ನಾಗರಹಾವು' ಚಿತ್ರದಲ್ಲಿ ಮುರಳೀಮೋಹನ್ ಮುಗ್ಗರಿಸಿದ್ದರೂ ಈ ಬಾರಿ ನಿರೂಪಣಾ ಶೈಲಿಯಿಂದ ತನ್ನ ಪ್ರತಿಭೆಯನ್ನು ತೋರಿಸಿದ್ದಾರೆ. ಇಷ್ಟೆಲ್ಲ ಹೇಳಿದ ನಂತರವೂ 'ಸಂತ'ನ ಮೇಲೆ 'ಜೋಗಿ' ಮತ್ತು 'ಓಂ' ಚಿತ್ರಗಳ ನೆರಳು ದಟ್ಟವಾಗಿ ಆವರಿಸಿರುವುದರಿಂದ ಶಿವರಾಜ್‌ಕುಮಾರ್ ಅಭಿಮಾನಿಗಳು ಇದನ್ನು ಹೇಗೆ ಸ್ವೀಕರಿಸುತ್ತಾರೆ ಎಂಬ ಗುಮಾನಿ ಇದ್ದೇ ಇದೆ.


ಮತ್ತೆ ಅಶ್ವಥರ 'ಸತ್ಯ'



ಹಲವು ವರ್ಷಗಳ ಹಿಂದೆ ಸಿ. ಅಶ್ವಥ್ ವಿರುದ್ಧ ಇಡೀ ಸುಗಮ ಸಂಗೀತಗಾರರ ವಲಯವೇ ಬಂಡೇಳುವುದಕ್ಕೆ ಕಾರಣವಾಗಿದ್ದ 'ಕನ್ನಡವೇ ಸತ್ಯ' ಎಂಬ ಕಾರ್ಯಕ್ರಮ ಮತ್ತೊಮ್ಮೆ ಬೆಂಗಳೂರಲ್ಲಿ ನಡೆಯಲಿದೆ. ತಾನೊಬ್ಬನೇ ಈ ರಾಜ್ಯದಲ್ಲಿರುವ ಸುಗಮ ಸಂಗೀತ ಗಾಯಕ ಎಂಬ ಭ್ರಮೆಯಲ್ಲಿರುವ 'ಗಾರ್ದಭ' ಅಶ್ವಥ್ ಕಳೆದ ಬಾರಿಯಂತೆ ಈ ಸಾರಿಯೂ ತಾವೊಬ್ಬರೇ ಒದರಲು ಸಿದ್ಧರಾಗಿದ್ದಾರೆ. ಆದರೆ ಈ ಬಾರಿ ಅರಮನೆ ಮೈದಾನದ ಬದಲಾಗಿ ನ್ಯಾಷನಲ್ ಕಾಲೇಜಿನ ಮೈದಾನವನ್ನು ಆಯ್ಕೆಮಾಡಿಕೊಂಡಿದ್ದಾರೆ.

ಹೋದ ಬಾರಿ ಈ ಕಾರ್ಯಕ್ರಮಕ್ಕೆ ಜನರಿಂದ ಪ್ರತಿಕ್ರಿಯೆ ಸಿಕ್ಕಷ್ಟೇ ಟೀಕೆಗಳೂ ಸಿಕ್ಕಿದ್ದವು. ಈ ಬಾರಿ ಏನಾಗುತ್ತದೋ ನೋಡೋಣ.

ಗಾಂಧಿನಗರದಲ್ಲಿ ಮಾನ್‌ಸೂನ್!






'ಮುಂಗಾರು ಮಳೆ'ಯ ನಂತರ ಗಾಂಧಿನಗರದಲ್ಲಿ ಎಲ್ಲಿ ನೋಡಿದರಲ್ಲಿ ಮಳೆಯ ಸುದ್ದಿಯೇ ಕೇಳಿಬರುತ್ತಿದೆ. ಶರಣ್ ಎಂಬ ನಿರ್ದೇಶಕ ಮೊನ್ನೆ ಮೊನ್ನೆ 'ಹನಿ ಹನಿ' ಎಂಬ ಚಿತ್ರವನ್ನು ಆರಂಭಿಸಿದರು. ಅದರಲ್ಲಿ 'ಮುಂಗಾರು ಮಳೆ'ಯ ಸಂಜನಾ ಗಾಂಧಿ ನಾಯಕಿ ಮಾತ್ರವಲ್ಲ, ಇಡೀ ಚಿತ್ರದ ಜಾಹೀರಾತು ವಿನ್ಯಾಸವನ್ನು ಕೂಡಾ 'ಮುಂಗಾರು ಮಳೆ' ಶೈಲಿಯಲ್ಲೇ ಮಾಡಿದ್ದರು.

ಇದೀಗ 'ಮುಂಗಾರು ಮಳೆ'ಯ ಕಥೆ ಬರೆದ ಪ್ರೀತಂ ಗುಬ್ಬಿ 'ಮುಂಗಾರು ಮಳೆ ಭಾಗ-2' ಚಿತ್ರವನ್ನು ನಿರ್ದೇಶಿಸುವ ಸುದ್ದಿ ಗಾಂಧಿನಗರದೆಲ್ಲೆಡೆ ಹರಡಿದೆ. ಈ ಚಿತ್ರದಲ್ಲಿ ಗಣೇಶ್ ನಾಯಕ, ರಮ್ಯಾ ನಾಯಕಿ.

ಇದಕ್ಕಿಂತಲೂ ಮುಖ್ಯವಾದ ವಿಷಯವೆಂದರೆ ಹೊಸ ಟ್ರೆಂಡುಗಳನ್ನು ಅರಿಯುವುದರಲ್ಲಿ ಅನುಭವಿಯಾಗಿರುವ ರವಿಚಂದ್ರನ್ ಕೂಡಾ ತನ್ನ ಹೊಸ ಚಿತ್ರಕ್ಕೆ 'ಮಂಜಿನ ಹನಿ' ಎಂದು ಹೆಸರಿಟ್ಟಿದ್ದಾರೆ. ರವಿಚಂದ್ರನ್‌ರಂಥ ಹಿರಿಯರೂ ಈಗ ಹೊಸಬರನ್ನು ಅನುಸರಿಸುವ ಕಾಲ ಬಂದಿದೆ ಎಂದಾಯಿತಲ್ಲವೇ?

ವಾದನ ನಿಲ್ಲಿಸಿದ ವೈದ್ಯನಾಥನ್



ಶಂಕರ್‌ನಾಗ್ ನಿರ್ದೇಶನದ 'ಮಾಲ್ಗುಡಿ ಡೇಸ್' ಧಾರಾವಾಹಿಯ ಶೀರ್ಷಿಕೆಯ ಸಂಗೀತ ಯಾರಿಗೆ ತಾನೇ ನೆನಪಿಲ್ಲ. ಆ ಶೀರ್ಷಿಕೆ ಸಂಗೀತ ಎಷ್ಟು ಇಂಪಾಗಿತ್ತೆಂದರೆ 'ಮಾಲ್ಗುಡಿ ಡೇಸ್'ನ ಇತರ ಕತೆಗಳನ್ನು ಕವಿತಾ ಲಂಕೇಶ್ ಕೂಡಾ ಕಿರುತೆರೆಗೆ ತಂದಾಗ ಅದೇ ಸಂಗೀತವನ್ನು ಬದಲಾಯಿಸದೇ ಇಟ್ಟುಕೊಂಡಿದ್ದರು.

ಆ ಸಂಗೀತವನ್ನು ರಚಿಸಿದ್ದ ಖ್ಯಾತ ವೈಯೊಲಿನ್ ಗಾಯಕ ಎಲ್. ವೈದ್ಯನಾಥನ್‌ರವರು ಇದೇ ಶನಿವಾರ ಚೆನ್ನೈನಲ್ಲಿ ಕೊನೆಯುಸಿರೆಳೆದರು. ಇವರ ನಂಟು ಕನ್ನಡ ಚಿತ್ರರಂಗದೊಂದಿಗೆ ಮಾತ್ರವಲ್ಲ, ತಮಿಳು ಮತ್ತು ಮಲೆಯಾಳಂ ಚಿತ್ರಗಳೊಂದಿಗೆ ಬೆಸೆದುಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲೂ ಎಲ್. ವೈದ್ಯನಾಥನ್‌ರವರ ಹೆಸರನ್ನು ಸ್ಥಾಪಿಸಿತ್ತು.

ಶಂಕರ್‌ನಾಗ್‌ರವರ ಮಾಲ್ಗುಡಿ ಡೇಸ್ ಅಲ್ಲದೆಯೇ ಅವರ 'ಆಕ್ಸಿಡೆಂಟ್' ಚಿತ್ರಕ್ಕೂ, ಗಿರೀಶ್ ಕಾಸರವಳ್ಳಿ ನಿರ್ದೇಶನದ 'ತಬರನ ಕತೆ' ಮತ್ತು 'ಮನೆ' ಚಿತ್ರಗಳಿಗೂ ಅವರು ಸಂಗೀತ ನಿರ್ದೇಶನ ಮಾಡಿದ್ದರು. 'ಪುಷ್ಪಕ ವಿಮಾನ' ಎಂಬ ಮೂಕಿ ಚಿತ್ರದಲ್ಲಿ ಹಾಡುಗಳಿರಲಿಲ್ಲ, ಆದರೆ ಆ ಚಿತ್ರದ ಓಟಕ್ಕೆ ಅದರ ಹಿನ್ನೆಲೆ ಸಂಗೀತವೂ ಮುಖ್ಯವಾಗಿತ್ತು, ಅದನ್ನೂ ವೈದ್ಯನಾಥನ್‌ರವರು ಸಮರ್ಪಕವಾಗಿ ನಿಭಾಯಿಸಿದ್ದರು.

ಇತ್ತೀಚೆಗೆ ವೈದ್ಯನಾಥನ್‌ರವರ ವಯಸ್ಸಿನಿಂದಾಗಿ ಸಿನಿಮಾಗಳಿಗೆ ಅವರು ಹೆಚ್ಚು ಸಂಗೀತ ನಿರ್ದೇಶನ ಮಾಡುತ್ತಿರಲಿಲ್ಲ, ಆದರೂ ರಾಮದಾಸ್ ನಾಯ್ಡುರವರು ತಮ್ಮ 'ಮುಸ್ಸಂಜೆ' ಮತ್ತು 'ಪ್ರವಾಹ' ಚಿತ್ರಗಳಿಗೆ ಅವರಿಂದಲೇ ಸಂಗೀತ ನಿರ್ದೇಶನ ಮಾಡಿಸಿದ್ದರು.

ವೈದ್ಯನಾಥನ್‌ರವರು ಖ್ಯಾತ ಪಿಟೀಲು ಸಂಗೀತಗಾರ ವಿ. ಲಕ್ಷ್ಮಿನಾರಾಯಣರವರ ಪುತ್ರರಾಗಿದ್ದು, ಅವರ ಕಿರಿಯ ಸಹೋದರರಾದ ಎಲ್. ಸುಬ್ರಮಣ್ಯಂ (ಇತ್ತೀಚೆಗೆ ಕವಿತಾ ಲಂಕೇಶ್‌ರ 'ತನನಂ ತನನಂ'ಗೆ ಸಂಗೀತ ನೀಡಿದ್ದರು) ಮತ್ತು ಎಲ್.ಶಂಕರ್ ಕೂಡ ಪಿಟೀಲು ವಾದಕರಾಗಿ ಅಪಾರ ಕೀರ್ತಿ ಗಳಿಸಿದ್ದಾರೆ. ಎಲ್. ವೈದ್ಯನಾಥನ್‌ರವರು ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅವರ ನಿರ್ಗಮನ ನಮ್ಮ ಚಿತ್ರರಂಗವನ್ನು ಅನಾಥವಾಗಿಸಿರುವುದು ನಿಜ.

ಹಾಡುಗಳಂತೆ 'ಪ್ರೀತಿ ಏಕೆ...' ಗೋತಾ ಹೊಡೆದರೆ

ನಿರ್ದೇಶಕ ಪ್ರೇಮ್ ನಾಯಕ ನಟನಾಗಿ ನಟಿಸುತ್ತಿರುವ 'ಪ್ರೀತಿ ಯಾಕೆ ಭೂಮಿ ಮೇಲಿದೆ' ಚಿತ್ರದ ಹಾಡುಗಳು ಫ್ಲಾಪ್ ಆಗಿರುವುದರಿಂದ ಆ ಚಿತ್ರದ ನಿರ್ಮಾಪಕ ಅಶ್ವಿನಿ ರಾಮ್ ಪ್ರಸಾದ್‌ಗೆ ಆಘಾತವುಂಟಾಗಿದೆಯಂತೆ. ಇಲ್ಲಿಯವರೆಗೂ ಪ್ರೇಮ್ ನಿರ್ದೇಶನದ ಮೂರು ಚಿತ್ರಗಳ ಹಾಡುಗಳು ಯಶಸ್ವಿಯಾಗಿದ್ದರೂ 'ಪ್ರೀತಿ ಯಾಕೆ..' ಹಾಡುಗಳು ಮಾತ್ರ ಗೋತಾ ಹೊಡೆದಿದ್ದು



ಯಾಕೆ ಎಂಬ ಪ್ರಶ್ನೆಗೆ ಪ್ರೇಮ್‌ನಲ್ಲಿ ಉತ್ತರವಿಲ್ಲದಿರುವುದೂ ರಾಮ್ ಪ್ರಸಾದ್‌ರನ್ನು ಕಂಗಾಲಾಗಿಸಿದೆಯಂತೆ.

"ಆ ಕಾರಣಕ್ಕೇ ಈಗ ಅವರು ಚಿತ್ರದ ಎಲ್ಲಾ ಹಾಡುಗಳನ್ನು ಕೈಬಿಟ್ಟು ಹೊಸ ಹಾಡುಗಳನ್ನು ರಚಿಸಲು ಪ್ರೇಮ್‌ಗೆ ಹೇಳಿದ್ದಾರೆ'' ಎಂದು ಗಾಂಧಿನಗರದ ಕಾನಿಷ್ಕಾದ ಪಡ್ಡೆಗಳು ರೂಮರ್ ಹಬ್ಬಿಸುವುದರಲ್ಲಿ ಬ್ಯುಸಿಯಾಗಿದ್ದಾರೆ. "ಅವರು ಯಾಕೆ ಹಂಗೆ ಮಾಡ್ತಾರೆ?'' ಎಂಬ ಪ್ರಶ್ನೆಗೆ "ಮತ್ತಿನ್ನೇನು, ಹಾಡುಗಳಂತೆ ಚಿತ್ರವೂ ಗೋತಾ ಹೊಡೆದರೆ ರಾಮ್ ಪ್ರಸಾದ್ ನಿಜಜೀವನದಲ್ಲೇ ಜೋಗಿ ಆಗಬೇಕಾಗುತ್ತದೆ. ಗೊತ್ತೇನಮ್ಮಾ?'' ಎಂದು ಹುಬ್ಬೇರಿಸುತ್ತಿರುವುದಂತೂ ಸುಳ್ಳಲ್ಲ!!

ಕಲ್ಯಾಣ್‌ರವರ ಹೊಸ ಕ್ರಶ್!



ಕಳೆದ ಹಲವು ವರ್ಷಗಳಿಂದ ಸಂಗೀತಗಾರರು ರಚಿಸುವ ಟ್ಯೂನ್‌ಗಳಿಗೆ ಗೀತರಚನೆಕಾರರು ಪದಗಳನ್ನು ಜೋಡಿಸುವ ಹವ್ಯಾಸ ಕನ್ನಡ ಚಿತ್ರರಂಗದಲ್ಲಿ ವ್ಯಾಪಕವಾಗಿದೆ. ಆದರೆ ಅದರ ನಡುವೆಯೂ ಸಂಗೀತ ನಿರ್ದೇಶಕ ಮತ್ತು ಗೀತರಚನೆಕಾರ, ಎರಡೂ ಆಗಿರುವ ಕೆ. ಕಲ್ಯಾಣ್ ಮಾತ್ರ ಇನ್ನೂ 'ಹಳೇ' ಕಾಲದವರಂತೆ ಸುತ್ತಾಡುತ್ತಾ ಹಾಡು ಬರೆದು ಸಂಗೀತ ನೀಡುತ್ತಿದ್ದಾರೆ. ಅದಕ್ಕೊಂದು ಲೇಟೆಸ್ಟ್ ಉದಾಹರಣೆ ಇಲ್ಲಿದೆ...

'ಮನಸ್ಸುಗಳು ಮಧುರ' ಎಂಬ ಚಿತ್ರಕ್ಕೆ ಇವರದ್ದೇ ಸಾಹಿತ್ಯ ಮತ್ತು ಸಂಗೀತ. ಆದರೆ ಮನೆಯ ಕೊಠಡಿಯಲ್ಲೇ ಕೂತು ಕಾವ್ಯವನ್ನು ಬರೆದು ಆ ಕಾವ್ಯಕ್ಕೆ ಸಿಂಥೆಸೈಸರ್ ಮೂಲಕ ರಾಗ ಸಂಯೋಜಿಸುವ ಬದಲು ಕಲ್ಯಾಣ್ ಈ ಚಿತ್ರದ ಚಿತ್ರೀಕರಣದ ತಾಣಗಳಿಗೆ ಭೇಟಿ ನೀಡಿ, ಆ ಜಾಗೆಗಳಿಂದ ಸ್ಫೂರ್ತಿಗೊಂಡು ಹಾಡುಗಳನ್ನು ರಚಿಸಿದ್ದಾರಂತೆ.

ಅಷ್ಟೇ ಅಲ್ಲದೆ, ಆ ಚಿತ್ರದ ಹೊಸ ನಾಯಕಿ ಹರಿಪ್ರಿಯಾಳ ಕಣ್ಣನ್ನು ಕಂಡು ಇವರು ಮನಸೋತಿದ್ದಾರಂತೆ. ಆಕೆಯ ಕಣ್ಣಿನ ಸೌಂದರ್ಯವನ್ನು ಆಸ್ವಾದಿಸಿದ ನಂತರ ಆಕೆಯ ಬಗ್ಗೆ ಒಂದು ಹಾಡನ್ನೂ ಬರೆದಿದ್ದಾರಂತೆ. ಕಳೆದ ವರ್ಷದ ತನಕ ಅವಿವಾಹಿತರಾಗಿದ್ದ ಕಲ್ಯಾಣ್ ಈಗ ಮದುವೆಯಾದ ನಂತರ ಈ ರೀತಿ ಸೌಂದರ್ಯ ಪ್ರಿಯರಾಗಿರುವುದು ಆಶ್ಚರ್ಯವಲ್ಲವೇ? ಇದಕ್ಕೆ ಕಲ್ಯಾಣರ ಪತ್ನಿ ಹೇಗೆ ಸ್ಪಂದಿಸುತ್ತಾರೋ ಗೊತ್ತಿಲ್ಲ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44